ಮಾನವಿಕ ಕರ್ಣಾಟಕ

ಸಂಪುಟ ೧೩ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ 13ನೆಯ ಸಂಪುಟ ಮುಗಿಯು ತ್ತದೆ. 14ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳಿಸಿ ಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗಲಿಗಿರುವ ಹಾಳೆಯಲ್ಲಿ ವಿವರ ಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು
ಕೆ. ಟಿ. ವೀರಪ್ಪ
ನಿರ್ದೇಶಕರು

ಮಾನ್ಯರೆ,

ದಯವಿಟ್ಟು ನನ್ನನ್ನು/ ಈ ಸಂಸ್ಥೆಯನ್ನು '**ಮಾನವಿಕ ಕರ್ಣಾಟಕದ**' ಹದಿಮೂರನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ನಾಲ್ಕು/ಆರು/ಎಂಟು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ
(ರುಜು)

1. ಹೆಸರು: —

[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ ? —

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ —

'ಮಾನವಿಕ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5.

ಮಾನವಿಕ ಕರ್ಣಾಟಕದ ಚಂದಾ ವಿವರ:

ಆಜೀವ ಸದಸ್ಯತ್ವ	:	ರೂ.	100-00
ಪ್ರತಿ ಸಂಪುಟಕ್ಕೆ ವಿದ್ಯಾರ್ಥಿಗಳಿಗೆ	:	ರೂ.	4-00
ಇತರರಿಗೆ	:	ರೂ.	6-00
ಸಂಸ್ಥೆಗಳಿಗೆ	:	ರೂ.	8-00

ವಿಳಾಸ :

ಡೈರೆಕ್ಟರ್, ಪ್ರಸಾರಾಂಗ
ಮೈಸೂರು–570006

ಮಾನವಿಕ ಕರ್ಣಾಟಕ

ಸಂಪುಟ ೧೩ ಸಂಚಿಕೆ ೪

೫೨

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೩

MANAVIKA KARNATAKA, Kannada quarterly of the University of Mysore, Volume 13, Number 4, August 1983. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವಿ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಕೆ. ಮೊಹಮ್ಮದ್ ಶರೀಫ್	ಶಾಸನ ಸಹಾಯಕ, ಎಪಿಗ್ರಾಫಿಯ ಕರ್ನಾಟಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
೨.	ಅಂಬಳಿಕೆ ಹಿರಿಯಣ್ಣ	ಅಧ್ಯಾಪಕ, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೫೭೦ ೦೦೬
೩.	ಕೆ. ಎಸ್. ರಾಮಕೃಷ್ಣರಾವ್	ತತ್ವಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ), ೩೬, ಮೊದಲನೆಯ ಮುಖ್ಯ ರಸ್ತೆ ಜಯಲಕ್ಷ್ಮೀಪುರಂ, ಮೈಸೂರು–೫೭ ೦೦೧೨
೪.	ಎಂ. ಜಯಂತೀಬಾಯಿ	ಸಹಾಯಕ ಭಾಷಾಂತರಕಾರರು, ಭಾಷಾಂತರ ಮತ್ತು ಪಠ್ಯ ಪುಸ್ತಕ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೫೭೦ ೦೦೬
೫.	ವಿ. ಎನ್. ಶೇಷಗಿರಿರಾವ್	ಅಧ್ಯಾಪಕ, ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬
೬.	ಆರ್. ಕೆ. ಸೋಮಶೇಖರ್	ಅಧ್ಯಾಪಕ, ಸಸ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೭.	ಜಿ. ಎನ್. ಕುಂದರಗಿ	ರೀಡರ್, ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಕೆ. ಮೊಹಮ್ಮದ್ ಶರೀಫ್

ಮುಸ್ಲಿಮರ ಕೆಲವು ಸಂಪ್ರದಾಯಗಳು

ಮುಸ್ಲಿಮರು ಪ್ರಪಂಚದ ಅನೇಕ ಭಾಗಗಳಲ್ಲಿ ಹರಡಿ ಬಹುಕಾಲ ಅಲ್ಲಿ ನೆಲಸಿ ಆಯಾಯ ದೇಶದ ಪದ್ಧತಿಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಆದ ಕಾರಣ ಅವರ ಸಂಪ್ರದಾಯಗಳಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸಗಳಿವೆ. ಇಲ್ಲಿ ಎಲ್ಲ ಮುಸ್ಲಿಮರ ಸಂಪ್ರದಾಯಗಳನ್ನು ಕುರಿತು ಸಂಪೂರ್ಣವಾಗಿ ಹೇಳುವುದು ಕಷ್ಟ. ಆದರೆ ಧರ್ಮ ಸಂಬಂಧವಾದ ಪ್ರತಿಕ್ರಿಯೆಗಳಲ್ಲೂ, ಕರ್ಮಗಳಲ್ಲೂ, ಕೆಲವು ನೀತಿನಡವಳಿಕೆಗಳಲ್ಲೂ ಬಹುಮಟ್ಟಿಗೆ ಎಲ್ಲ ಮುಸ್ಲಿಮರಲ್ಲೂ ಹೋಲಿಕೆಗಳು ಇವೆ. ಅಂತಹ ಹೋಲಿಕೆಗಳಿರುವ ಸಂಪ್ರದಾಯಗಳಲ್ಲಿ ಕೆಲವನ್ನು ಇಲ್ಲಿ ಹೇಳಿದೆ. ಖುರಾನಿನಲ್ಲಿ ಹೇಳಿರುವ ಸಂಪ್ರದಾಯ ಗಳು ಬಹಳ ಕಡಿಮೆ. ಅನೇಕವು ಪರಂಪರಾಗತವಾಗಿಯೂ ಇನ್ನು ಕೆಲವು ಆಯಾಯ ದೇಶಗಳ ರೀತಿಗಳನ್ನು ಅನುಸರಿಸಿಯೂ ಬಳಕೆಗೆ ಬಂದಿವೆ. ಇಸ್ಲಾಂ ಧರ್ಮದ ಸ್ಥಾಪಕ ರಾದ ಮೊಹಮ್ಮದ್ ಪೈಗಂಬರ್ ಅವರು ಕೆಲವನ್ನು ಅರಬೀ ಪರಂಪರೆಗಳಿಂದ ತೆಗೆದು ಕೊಂಡರು. ಇನ್ನು ಕೆಲವನ್ನು ತಾವೇ ಹೊಸದಾಗಿ ಪ್ರಾರಂಭಿಸಿದರು.

ಮುಸ್ಲಿಮರ ಸಂಪ್ರದಾಯಗಳು ಅನೇಕ. ಅವುಗಳಲ್ಲಿ ಜನನ, ಸುನ್ನತ್ ಅಥವ ಖತ್ನ, ಮದುವೆ, ತಲಾಖ್, ವಫಾತ್ ಅಥವ ಮೃತ್ಯು ಮತ್ತು ಪರ್ದಾ ಪದ್ಧತಿ ಬಹು ಮುಖ್ಯವಾದುವು.

ಜನನ

ಮಗುವು ಜನಿಸಿದ ತಕ್ಷಣ ಅದನ್ನು ಚೆನ್ನಾಗಿ ತೊಳೆದು ಶುಭ್ರವಾದ ಬಟ್ಟೆಯ ಮೇಲೆ ಮಲಗಿಸುತ್ತಾರೆ. ನಂತರ ಆ ಊರಿನಲ್ಲಿರುವ ಪ್ರಧಾನ ಖಾಜಿ ಅಥವಾ ಬೇರೆ ಯಾರಾದರೊಬ್ಬರು ಮಗುವಿನ ಬಲಕಿವಿಯಲ್ಲಿ 'ಅಜಾಂ' ಮತ್ತು ಎಡಕಿವಿಯಲ್ಲಿ 'ಇಖಾ ಮತ್'ನ ಮಂತ್ರಗಳನ್ನು ಹೇಳುತ್ತಾರೆ. ಈ ಸಂಪ್ರದಾಯವನ್ನು ಮೊಹಮ್ಮದ್ ಪೈಗಂಬರ್ ಅವರು ಪ್ರಾರಂಭಿಸಿದರು. ಅಲ್ಲದೆ ಅನೇಕ ವೇಳೆ ಅವರೇ ಸ್ವತಃ ತಮ್ಮ ಬಂಧುಗಳ ಮತ್ತು ಅನುಯಾಯಿಗಳ ಮನೆಗಳಿಗೆ ಆ ದಿವಸ ಹೋಗಿ ಮಗುವಿನ ಕಿವಿ ಯಲ್ಲಿ ಮಂತ್ರಗಳನ್ನು ಹೇಳುತ್ತಿದ್ದರಂತೆ. ಖಾಜೀಗಳೇ ಇದ್ದು ಈ ಕೆಲಸವನ್ನು ಮಾಡ ಬೇಕೆಂಬ ನಿಯಮವಿಲ್ಲ. ಈ ಮಂತ್ರಗಳನ್ನು ತಿಳಿದ ಯಾರೇ ಆಗಲಿ ಈ ಮೇಲಿನ

ಸಂಸ್ಕಾರವನ್ನು ನಡೆಸಬಹುದು. ಇದೇ ಸಂದರ್ಭದಲ್ಲಿ ಮಗುವಿನ ದೀರ್ಘಾಯುಸ್ಸು, ಸುಖಶಾಂತಿಗಳಿಗಾಗಿ ಫಾತೆಹಾ (ಪ್ರಾರ್ಥನೆ) ಹಾಗು ದಾನಧರ್ಮಗಳನ್ನು ಮಾಡುವ ಸಂಪ್ರದಾಯುಗಳೂ ಇವೆ. ಮಗುವು ಜನಿಸಿದ ಏಳನೆಯ ದಿವಸ ಅದರ ತಲೆಯ ಕೂದಲುಗಳನ್ನು ತೆಗೆಯುತ್ತಾರೆ. ಅಂದು ನಾಮಕರಣವೂ ನಡೆಯುತ್ತದೆ. ಮಗುವಿನ ಜನ್ಮದ ಮೊದಲ ವಾರ ದೇವರ ಹೆಸರಿನಲ್ಲಿ ಒಂದು ಮೇಕೆಯನ್ನು ಬಲಿ ಕೊಡುತ್ತಾರೆ. ಈ ಸಂಪ್ರದಾಯಕ್ಕೆ 'ಹಖೀಖಾಹ್' ಎನ್ನುವರು. ಬಹುಶಃ ಧರ್ಮ ಪ್ರವಾದಿಗಳಾದ ಇಬ್ರಾಹೀಮ್ ಖಲೀಲುಲ್ಲಾಹ್- ಇವರ ಬಲಿದಾನ ಧರ್ಮದ ಸ್ಮರಣೆಗಾಗಿ ಈ ಬಲಿ ದಾನ ಆಚರಣೆಗೆ ಬಂದಿರಬಹುದು. ಮಗುವು ಹುಟ್ಟಿದ ಏಳನೆಯ ದಿವಸವೇ ಈ ಸಂಸ್ಕಾರ ನಡೆದರೆ ಉತ್ತಮ. ಆದರೆ ಯಾವುದಾದರೂ ಕಾರಣದಿಂದ ಹಾಗೆ ಮಾಡಲು ಆಗದಿದ್ದಾಗ ಏಳು ವರ್ಷಗಳಲ್ಲಿ ಯಾವುದಾದರೊಂದು ದಿವಸ ಈ ಸಂಸ್ಕಾರವನ್ನು ನಡೆಸಬಹುದು. ಈ ಸಂಪ್ರದಾಯವನ್ನು ಮೊಹಮ್ಮದ್ ಪೈಗಂಬರ್ ಅವರೇ ಪ್ರಾರಂಭಿಸಿದ್ದ ಕಾರಣ ಇವಕ್ಕೆ ಮುಸ್ಲಿಮರು ಹೆಚ್ಚು ಮಾನ್ಯತೆ ಕೊಟ್ಟಿದ್ದಾರೆ.

ಮಗುವಿನ ನಾಮಕರಣದ ವಿಷಯದಲ್ಲಿ ಯಾವ ನಿಯಮವೂ ಇಲ್ಲ. ಸಾಮಾನ್ಯವಾಗಿ ಮುಸ್ಲಿಮರು ತಮ್ಮ ಮತ ಸ್ಥಾಪಕ ಮೊಹಮ್ಮದ್ ಪೈಗಂಬರ್ ಅವರು ತಮ್ಮ ಕಾಲದಲ್ಲಿ ತಮ್ಮ ಅಥವ ಬೇರೆಯವರ ಮಕ್ಕಳಿಗೆ ಯಾವ ರೀತಿಯ ಹೆಸರುಗಳನ್ನು ಇಟ್ಟಿದ್ದರೋ ಅಂತಹ ಹೆಸರುಗಳನ್ನು ಇಡುತ್ತಾರೆ. ಉದಾಹರಣೆಗೆ :- ಹಸನ್, ಹುಸೇನ್, ಅಲಿ, ಇಬ್ರಾಹೀಮ್ ಇತ್ಯಾದಿ. ಹಾಗೆಯೇ 'ಅಬ್ದ್', 'ಗುಲಾಮ್,' 'ಆಬಿದ್' ಮುಂತಾದ ಶಬ್ದಗಳನ್ನು 'ಅಲ್ಲಾಹ್' ಇತ್ಯಾದಿ ಶಬ್ದದೊಂದಿಗೆ ಸೇರಿಸುವುದರಿಂದ ಉಂಟಾಗುವ ಹೆಸರುಗಳನ್ನು ಮುಸ್ಲಿಮರು ಹೆಚ್ಚು ಬಯಸುತ್ತಾರೆ. ಉದಾಹರಣೆಗೆ :- ಅಬ್ದುಲ್ಲಾ, ಅಬ್ದುರ್ ರಹಮಾನ್, ಅಬ್ದುಲ್ ಗಫಾರ್, ಆಬಿದ್ ಹುಸೇನ್, ಗುಲಾಮ್ ಆಬಿದ್, ಗುಲಾಮ್ ಮೊಹಮ್ಮದ್, ಗುಲಾಮ್ ಅಲೀ ಇತ್ಯಾದಿ. ಹುಡುಗಿಯರ ಹೆಸರುಗಳನ್ನಿಡುವಾಗ ಮೊಹಮ್ಮದ್ ಪೈಗಂಬರ್ ಅವರ ಹೆಂಡತಿಯರ ಅಂದರೆ ಖತೀಜ, ಆಯೆಷಾ ಇತ್ಯಾದಿ ಅಥವ ಅಂದಿನ ಇನ್ನಿತರ ಹೆಸರುಗಳನ್ನಿಡಲು ಧಾರ್ಮಿಕ ಪ್ರವೃತ್ತಿಯ ಮುಸ್ಲಿಮರು ಹೆಚ್ಚು ಇಷ್ಟಪಡುತ್ತಾರೆ. ಭಾರತದಲ್ಲಿ ಅನೇಕರು ಇಲ್ಲಿಯ ಪ್ರಭಾವದಿಂದ ಬಾಬಾ, ಬಾಪೂ, ದಾದೂ ಇತ್ಯಾದಿ ಭಾರತೀಯ ಹೆಸರನ್ನಿಡುವುದು ರೂಢಿಯಲ್ಲಿದೆ. ಆದರೆ ಧಾರ್ಮಿಕ ಪ್ರವೃತ್ತಿಯ ಜನರು ಇದನ್ನು ಇಷ್ಟಪಡುವುದಿಲ್ಲ. ಹಿಂದುಗಳಲ್ಲಿರುವ ಪದ್ಧತಿಯಂತೆ-ಭಗವಾನ್, ಈಶ್ವರ, ಪರಮೇಶ್ವರ, ಮಂಜುನಾಥ, ಗಣಪತಿ, ಲಕ್ಷ್ಮೀನಾರಾಯಣ, ಕೃಷ್ಣ, ಲಕ್ಷ್ಮೀ, ಸರಸ್ವತಿ, ಪಾರ್ವತಿ, ಗೌರಿ ಮುಂತಾದ ದೇವ-ದೇವತೆಗಳ ಹೆಸರುಗಳನ್ನಿಡುವ ಪದ್ಧತಿಯಂತೆ ಮುಸ್ಲಿಮರಲ್ಲಿ ಕೇವಲ 'ಖುದಾ' ಅಥವ 'ಅಲ್ಲಾಹ್' ಈ ಹೆಸರುಗಳನ್ನಿಡುವ ಪದ್ಧತಿ ಇಲ್ಲ.

ಸುನ್ನತ್ ಅಥವ ಖತ್ನ

ಇದು ಗಂಡು ಮಗು ಹುಟ್ಟಿದ ಕೆಲವು ತಿಂಗಳುಗಳಲ್ಲಿ ಅಥವ ವರ್ಷಗಳಲ್ಲಿ ಮಾಡಲೇಬೇಕಾದ ಒಂದು ಸಂಸ್ಕಾರ. ಗಂಡು ಮಗುವಿನ ಜನನೇಂದ್ರಿಯದ ತುದಿಯ ಭಾಗದ ಚರ್ಮವನ್ನು ಕತ್ತರಿಸುವ ಸಂಪ್ರದಾಯಕ್ಕೆ 'ಸುನ್ನತ್' ಅಥವ 'ಖತ್ನ' ಅಥವಾ 'ಮುಸಲ್ಮಾನಿ' ಎನ್ನುತ್ತಾರೆ. ಇದರ ಅರ್ಥ ನಿಯಮ, ಕಾನೂನು, ರೀತಿ, ಮಾರ್ಗ, ಮೊಹಮ್ಮದ್ ಪೈಗಂಬರ್ ಅವರು ಮಾಡಿದ ಕೆಲಸ ಇತ್ಯಾದಿ. ಇದು ಒಂದು ಅನಿವಾರ್ಯ ಸಂಸ್ಕಾರ. ಏಕೆಂದರೆ ಈ ಸಂಸ್ಕಾರ ನಡೆದ ನಂತರವೇ ಮುಸ್ಲಿಂಧರ್ಮದ ದೀಕ್ಷೆ (ಸುನ್ನತ್) ಪೂರ್ಣವಾಗುವುದು. ಇದು ಇಸ್ಲಾಂ ಧರ್ಮ ಹುಟ್ಟುವ ಮೊದಲೇ ಅಂದರೆ ಇಬ್ರಾಹೀಮ್ ಖಲೀಲುಲ್ಲಾಹ್ ಇವರ ಕಾಲದಿಂದಲೇ ಅರಬ್‌ದೇಶದಲ್ಲಿ ಜಾರಿಯಲ್ಲಿತ್ತು. ಇಸ್ಲಾಂ ಪೂರ್ವದ ಅರಬರು, ಯೆಹೂದ್ಯರು, ಅಫ್‌ಘಾನಿಸ್ತಾನದ ಕಾಫಿರರು, ಆಫ್ರಿಕದ ಹಲವು ಬುಡಕಟ್ಟಿನ ಜನರು, ಅಬಿಸೀನಿಯದ ಕ್ರೈಸ್ತರು, ಈಜಿಪ್ಟ್, ಆಸ್ಟ್ರೇಲಿಯ ಮೊದಲಾದ ದೇಶದ ಜನರಲ್ಲಿ ಈ ಪದ್ಧತಿ ಬಹಳ ಹಿಂದಿನಿಂದಲೂ ಜಾರಿಯಲ್ಲಿತ್ತು.

ಸಾಮಾನ್ಯವಾಗಿ ಮಗುವಿನ ಏಳನೆಯ ವರ್ಷದಿಂದ ಹನ್ನೆರಡನೆಯ ವರ್ಷಗಳವರೆಗೆ ಈ ಸಂಸ್ಕಾರ ಮಾಡುತ್ತಾರೆ. ಆದರೂ ಮಗುವು ಹುಟ್ಟಿದ ಏಳನೆಯ ದಿನಸದ ನಂತರ ಯಾವಾಗಲಾದರೂ ಇದನ್ನು ಮಾಡಬಹುದು. ಆದುದರಿಂದ ಇದು ಅನೇಕ ವೇಳೆ ಮೇಲೆ ತಿಳಿಸಿದ 'ಹಖೀಖಾಹ್' ಸಂಸ್ಕಾರದ ಜೊತೆಗೆ ಮಾಡುತ್ತಾರೆ. ಹಿಂದುಗಳ ಉಪನಯನ ಸಂಸ್ಕಾರಕ್ಕೆ ಇದನ್ನು ಹೋಲಿಸಬಹುದು. ಇದನ್ನು ಮುಸ್ಲಿಮರು ಹಿಂದುಗಳ ಉಪನಯನ ಸಂಸ್ಕಾರದಂತೆ ಬಹಳ ವಿಜೃಂಭಣೆಯೊಂದಿಗೆ ಆಚರಿಸುತ್ತಾರೆ.

ಆಧುನಿಕ ವೈದ್ಯರ ಅಭಿಪ್ರಾಯದಂತೆ ಖತ್ನಾ ಸಂಸ್ಕಾರ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಸ್ವಚ್ಛತೆಯ ದೃಷ್ಟಿಯಿಂದಲೂ ಇದು ಒಳ್ಳೆಯ ಪದ್ಧತಿ.

ಸಾಮಾನ್ಯವಾಗಿ ಮೇಲೆ ಹೇಳಿರುವ ನಾಮಕರಣ, 'ಹಖೀಖಾಹ್' ಮತ್ತು 'ಸುನ್ನತಿ' ಸಂಪ್ರದಾಯಗಳ ಜೊತೆಗೆ ಕ್ರಮೇಣ ಮಗುವಿಗೆ ಅಕ್ಷರಾಭ್ಯಾಸ, ಖುರಾನ್ ಅಧ್ಯಯನ ಮೊದಲಾದ ಕರ್ಮಗಳನ್ನು ನಡೆಸುತ್ತಾರೆ. ಇದನ್ನು 'ಬಿಸ್ಮಿಲ್ಲಾಹ್' ಎಂದು ಕರೆಯುತ್ತಾರೆ. ಇದು ಧಾರ್ಮಿಕ ಸಂಪ್ರದಾಯವಲ್ಲ, ಪರಂಪರಾಗತವಾಗಿ ಬಂದಿರುವ ಪದ್ಧತಿ.

ಮದುವೆ

ಮುಸ್ಲಿಮರಲ್ಲಿ ಮದುವೆಗೆ ಎರಡು ಶಬ್ದಗಳು ಬಳಕೆಯಲ್ಲಿವೆ. ಒಂದು 'ನಿಕಾಹ್', ಇನ್ನೊಂದು 'ಷಾದೀ'. 'ನಿಕಾಹ್' ಎಂಬುದು ಅರಬಿ ಭಾಷೆಯ ಶಬ್ದ. ಇದರ ಮೂಲ ಅರ್ಥ ಶರೀರ ಸಂಬಂಧ ಅಥವ ಸಂಭೋಗ. 'ಷಾದೀ' ಫಾರಸಿ ಭಾಷೆಯ ಶಬ್ದ. ಇದರ ಅರ್ಥ 'ಸಂತೋಷ' ಅಥವ 'ಆನಂದೋತ್ಸವ'. ಮದುವೆ ಒಂದು ಸಂತೋಷಕರವಾದ

ಸಂಸ್ಕಾರವಾದುದರಿಂದ 'ಷಾದೀ' ಎಂಬ ಶಬ್ದ ಹೆಚ್ಚು ಬಳಕೆಯಲ್ಲಿ ಬಂದಿರಬಹುದು. ಮುಸ್ಲಿಮರಲ್ಲಿ ಸಾಮಾನ್ಯವಾಗಿ ಎಲ್ಲರೂ ಮದುವೆ ಮಾಡಿಕೊಳ್ಳುತ್ತಾರೆ. ಮೊಹಮ್ಮದ್ ಪೈಗಂಬರ್ ಅವರು ಬ್ರಹ್ಮಚರ್ಯೆಯನ್ನು ಒಪ್ಪದೆ ಮದುವೆಗೆ ಪ್ರೋತ್ಸಾಹ ಕೊಟ್ಟರು. ಅವರು ಒಮ್ಮೆ "ಮದುವೆ ಮಾಡಿಕೊಂಡ ಸಂಸಾರಿ ಅರ್ಧ ಧರ್ಮವನ್ನು ಸಾಧಿಸಿದಂತೆ" ಎಂದು ಹೇಳಿವರಂತೆ. ಆದುದರಿಂದಲೇ ಸೂಫಿ ಸಾಧುಗಳು ಕೂಡ ಮದುವೆ ಮಾಡಿಕೊಂಡು ಸಂಸಾರಿಗಳಾಗಿರುತ್ತಿದ್ದರು.

ಮದುವೆಯ ಆಚರಣೆಯ ಬಗ್ಗೆ ಹೇಳುವುದಾದರೆ ಹಿಂದುಗಳಂತೆಯೇ ಮುಸ್ಲಿಮರಲ್ಲೂ ಹೆಣ್ಣಿನ ಮನೆಯಲ್ಲೇ ಮದುವೆ ನಡೆಯುತ್ತದೆ. ಗಂಡಿನ ಕಡೆಯವರೆಲ್ಲ ಸೇರಿ ಹೆಣ್ಣಿನ ಮನೆಗೆ ಮೆರವಣಿಗೆಯಲ್ಲಿ ಹೋಗುತ್ತಾರೆ. ಹುಡುಗಿಯ ಕಡೆಯವರಿಂದ ಸಂಭ್ರಮದ ಸ್ವಾಗತವಾದ ನಂತರ ವಿವಾಹ ಸಂಸ್ಕಾರದ ಕಾರ್ಯಕ್ರಮ ನಡೆಯುತ್ತದೆ. ಇದಕ್ಕಾಗಿ ಆ ಊರಿನ ಖಾಜಿಯನ್ನು ಆಹ್ವಾನಿಸುವರು. ಖಾಜಿಯವರು ಅರಬಿ ಭಾಷೆಯಲ್ಲಿರುವ 'ಖುತ್ಬ-ಏ-ನಿಕಾಹ್' ಅಥವ 'ಮದುವೆಯ ಮಂತ್ರ'ವನ್ನು ಓದುತ್ತಾರೆ. ಅನಂತರ ಖಾಜಿ 'ಮಹರ್'ನ ಅಥವ ವಧುವಿಗೆ ಕೊಡಬೇಕಾದ ಧನದ ಮೊತ್ತವನ್ನು ತಿಳಿದು ಮೊದಲು ವರನನ್ನು ಅನಂತರ ವಧುವನ್ನು ಇಷ್ಟು ಮಹರ್‌ನ ಮೊತ್ತದೊಂದಿಗೆ ನಿಮ್ಮಿಬ್ಬರ ವಿವಾಹ ನಡೆಸಲಾಗುತ್ತದೆ. ಇದಕ್ಕೆ ನಿಮಗೆ ಒಪ್ಪಿಗೆ ಇದೆಯೋ ಎಂದು ಮೂರು ಬಾರಿ ಕೇಳುತ್ತಾರೆ. ಇದಕ್ಕೆ ವಧು-ವರರು ಮೂರು ಬಾರಿ "ಹೌದು, ನನಗೆ ಒಪ್ಪಿಗೆ ಇದೆ" ಎನ್ನಬೇಕು. ಆದರೆ ಮುಸ್ಲಿಮರಲ್ಲಿ ಪರ್ದಾ ಪದ್ಧತಿ ಇರುವುದರಿಂದ ವಧು ತಾನೇ ತನ್ನ ಈ ಒಪ್ಪಿಗೆ ಕೊಡಲು ಸಾಧ್ಯವಿಲ್ಲವಾದ ಕಾರಣ ಈ ಸಮಯದಲ್ಲಿ ಒಬ್ಬ ವಕೀಲ ಅಥವ ಇಬ್ಬರು ಸಾಕ್ಷಿದಾರರ ಎದುರಿನಲ್ಲಿ ವಧುವಿನ ಒಪ್ಪಿಗೆಯನ್ನು ಪಡೆಯುತ್ತಾರೆ. ನಂತರ ಖಾಜಿಯವರು ವಧೂ-ವರರಿಗೆ ಆಶೀರ್ವಚನ ನೀಡುತ್ತಾರೆ: ಆಗ ಮದುವೆಯಲ್ಲಿ ನೆರೆದಿರುವ ಎಲ್ಲರೂ ಈ ಆಶೀರ್ವಚನ ಸಮಯದಲ್ಲಿ ಕೈಗಳನ್ನು ಎತ್ತಿ ಭಾಗಿಗಳಾಗುತ್ತಾರೆ. ಈ ಸಂದರ್ಭದಲ್ಲಿ ವಧೂವರರಿಂದ ಖುರಾನಿನ ಪವಿತ್ರ ಮಂತ್ರವನ್ನು ಓದಿಸುತ್ತಾರೆ. ಖಾಜೀಸಾಹೇಬರು ಈ ಮದುವೆಯನ್ನು ತಮ್ಮ ಪುಸ್ತಕದಲ್ಲಿ ದಾಖಲು ಮಾಡಿಕೊಳ್ಳುತ್ತಾರೆ ಹಾಗೂ ಇದಕ್ಕೆ ವಧೂವರರ ಹಾಗೂ ಅವರ ತಂದೆಯವರ ಮತ್ತು ಸಾಕ್ಷಿದಾರರ ಸಹಿಗಳನ್ನು ಪಡೆಯುತ್ತಾರೆ. ಈ ಪುಸ್ತಕವನ್ನು ಖಾಜಿಯವರು ಸುರಕ್ಷಿತವಾಗಿಟ್ಟಿರುತ್ತಾರೆ. ಏಕೆಂದರೆ ಇದು ಮದುವೆಯ ಒಂದು ಅಧಿಕೃತ ದಾಖಲೆ. ಅನಂತರ ಬಾದಾಮಿ, ಖರ್ಜೂರ, ಕಲ್ಲುಸಕ್ಕರೆ ಇತ್ಯಾದಿ ಹಂಚುತ್ತಾರೆ. ಇದು ಮೊಹಮ್ಮದ್ ಪೈಗಂಬರ್ ಅವರ ಕಾಲದಿಂದ ಬಂದ ಸಂಪ್ರದಾಯ. ಈ ಎಲ್ಲಾ ಸಂಪ್ರದಾಯಗಳು ಮುಗಿದ ನಂತರ ಎಲ್ಲರಿಗೂ ಭೋಜನ ಕೂಟ ಏರ್ಪಾಡು ಮಾಡಿರುತ್ತಾರೆ. ನಂತರ 'ಜಿಲ್‌ವಹ್' ಕರ್ಮ ನಡೆಯುತ್ತದೆ. ಇದು ವಧುವನ್ನು ವರನ ಕಡೆಯವರಿಗೆ ಒಪ್ಪಿಸುವಾಗ ನಡೆಯುವ ಸಂಸ್ಕಾರ. ಇದಾದ ತರುವಾಯ ದಿಬ್ಬಣದವರೊಂದಿಗೆ ವಧುವನ್ನು ವರನ ಮನೆಗೆ ಕಳುಹಿಸುತ್ತಾರೆ.

ಭಾರತದ ಮುಸ್ಲಿಮರಲ್ಲಿರುವ ವಿವಾಹ, ನಿಶ್ಚಿತಾರ್ಥ, ದಿಬ್ಬಣ ಹೋಗುವುದು, ವರನ ಮೆರವಣಿಗೆ ಮೊದಲಾದುವು ಹಿಂದೂಗಳನ್ನು ಅನುಕರಿಸಿ ಮಾಡುವ ಸಂಪ್ರದಾಯಗಳಾಗಿವೆ. ಮುಸಲ್ಮಾನರಲ್ಲಿ ಮದುವೆಗೆ ಎಷ್ಟು ಧಾರ್ಮಿಕ ಮಹತ್ವವಿದೆಯೋ ಅಷ್ಟೇ ಸಾಮಾಜಿಕ ಮಹತ್ವವೂ ಇದೆ. ಒಂದು ದೃಷ್ಟಿಯಲ್ಲಿ ಅದರ ಸಾಮಾಜಿಕ ಸ್ವರೂಪ 'ಇಕರಾರ್ ನಾಮ' (civil contract) ಪರಸ್ಪರ ಒಪ್ಪಂದದ ಆಧಾರವೆನ್ನಬಹುದು. ಖಾಜಿ ಇಲ್ಲದಿದ್ದರೂ ವರನೇ ಅಥವ ಇನ್ನೊಬ್ಬ ವ್ಯಕ್ತಿ ಎರಡು ಜನ ಸಾಕ್ಷಿಗಳ ಮುಂದೆ ವಿವಾಹಕ್ಕೆ ಸಂಬಂಧಪಟ್ಟ ಖುರಾನಿನಲ್ಲಿರುವ ಮಂತ್ರಗಳನ್ನು ಓದಿ ಮದುವೆಯನ್ನು ಪೂರ್ತಿಗೊಳಿಸಬಹುದು. ಮುಸ್ಲಿಮರ ಮದುವೆಯಲ್ಲಿ ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆ ಒಂದು ವಿಶಿಷ್ಟ ಆಕರ್ಷಕ ವಿಷಯ. ಮೊಹಮ್ಮದ್ ಪೈಗಂಬರರಿಗೂ ಮೊದಲು ಅರಬ್ ದೇಶದಲ್ಲಿ ಸ್ತ್ರೀಯರ ಸ್ಥಿತಿ ಗುಲಾಮರಿಗಿಂತಲೂ ಹೀನವಾಗಿತ್ತು. ಹೆಣ್ಣು ಹುಟ್ಟುವುದು ಒಂದು ದೊಡ್ಡ ವಿಪತ್ತಾಗಿತ್ತು. ಅನೇಕರು ಹೆಣ್ಣು ಮಗುವನ್ನು ಹುಟ್ಟುತ್ತಲೇ ಕೊಂದುಹಾಕುತ್ತಿದ್ದರು. ಸ್ತ್ರೀಯ ಇಂತಹ ಅತ್ಯಂತ ಹೀನಸ್ಥಿತಿಯನ್ನು ಸುಧಾರಿಸಿದ ಶ್ರೇಯಸ್ಸು ಮೊಹಮ್ಮದ್ ಪೈಗಂಬರ್ ಅವರಿಗೆ ಸಲ್ಲಬೇಕು. ಈ ಮಹತ್ಕಾರ್ಯದ ಕೆಲವು ಕುರುಹುಗಳು ಮುಸ್ಲಿಮರ ಮದುವೆಯಲ್ಲಿ ಇವೆ. ಈಗ ವಿವಾಹಕ್ಕೆ ಪುರುಷರಂತೆಯೇ ಸ್ತ್ರೀಯರ ಒಪ್ಪಿಗೆ ಅನಿವಾರ್ಯ. ಅಲ್ಲದೆ ಆರ್ಥಿಕ ದೃಷ್ಟಿಯಿಂದ ಸ್ತ್ರೀಗೆ ಯಾವ ತೊಂದರೆಯೂ ಆಗಬಾರದೆಂಬ ಉದ್ದೇಶದಿಂದ ಪುರುಷನು ತನ್ನ ಪತ್ನಿಗೆ ಸ್ವಲ್ಪ ಹಣ ಕೊಡಬೇಕೆಂಬ ನಿಯಮವಿದೆ. ಈ ಹಣಕ್ಕೆ 'ಮಹರ್' ಎನ್ನುವರು. ಈ 'ಮಹರ್' ಅನ್ನು ಪತಿಯ ಸ್ಥಿತಿಗನುಸಾರವಾಗಿ ಗೊತ್ತು ಮಾಡುತ್ತಾರೆ. ಈ ಹಣದ ಮೇಲೆ ಪತ್ನಿಗೆ ಪೂರ್ಣ ಅಧಿಕಾರವಿದೆ. ಅದು ಅವಳ ವ್ಯಕ್ತಿಗತ ಆಸ್ತಿ.

ಆದರೆ ಭಾರತದಲ್ಲಿ ಹಿಂದುಗಳಲ್ಲಿರುವ ವರದಕ್ಷಿಣೆಯ ಪಿಡುಗು ಮುಸ್ಲಿಮರಲ್ಲೂ ಇತ್ತೀಚೆಗೆ ಹರಡಿದೆ. ಯೋಗ್ಯ ವರನನ್ನು ಪಡೆಯಲು ವಧುವಿನ ತಂದೆ ತಕ್ಕಷ್ಟು ಹಣ ಅಥವ ವಸ್ತುಗಳನ್ನು ವರನಿಗೆ ಕೊಡಬೇಕು. ಆದರೆ ಮುಸ್ಲಿಮರ ಧರ್ಮಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

ಇಸ್ಲಾಂ ಪೂರ್ವದ ಅರಬರಲ್ಲಿ ಒಬ್ಬನಿಗೆ ಹಲವು ಹೆಂಡಂದಿರಿರುವುದು ಸಾಮಾನ್ಯವಾಗಿತ್ತು, ಇಸ್ಲಾಂ ಧರ್ಮ ಪ್ರಚಾರಕ್ಕೆ ಬಂದು ಒಬ್ಬನಿಗೆ ಒಬ್ಬ ಹೆಂಡತಿ ಎಂಬುದು ಸಾಮಾನ್ಯ ಪದ್ಧತಿಯಾಯಿತು. ಆದರೆ ಹಲವು ಹೆಂಡಂದಿರನ್ನು ಆಳಿ ಸಾಕುವ ಶಕ್ತಿ ಇದ್ದರೆ ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳಬಹುದು. ಇದು ಅತಿ ವಿರಳ. ಹಿಂದುಗಳಲ್ಲಿ ಪುತ್ರ ಪ್ರಾಪ್ತಿಯೊಂದಿಗೆ ಸ್ವರ್ಗ ಪ್ರಾಪ್ತಿಯ ಸಂಬಂಧವಿದೆ. ಗೃಹಸ್ಥನಾದವನು ಮಕ್ಕಳಾಗದೆ ಸತ್ತರೆ ಅವನಿಗೆ ಸ್ವರ್ಗ ಸಿಗುವುದಿಲ್ಲ ಎಂಬ ನಂಬಿಕೆ ಹಿಂದುಗಳಲ್ಲಿದೆ. ಆದರೆ ಮುಸ್ಲಿಮರಲ್ಲಿ ಇಂತಹ ನಂಬಿಕೆ ಇಲ್ಲ. ತಮ್ಮ ತಮ್ಮ ಕರ್ಮದ ಫಲವಾಗಿ ಸ್ವರ್ಗ–ನರಕ ಸಿಗುವುದೆಂಬುದೇ ಮುಸ್ಲಿಮರ ನಂಬಿಕೆ. ಆದುದರಿಂದ ಮಕ್ಕಳಾಗದಿರುವ ಪತ್ನಿಯೊಂದಿಗೆ

ಜೀವನದ ಉದ್ದಕ್ಕೂ ವಿಶ್ವಾಸ ಮತ್ತು ಸಂತೋಷದಿಂದಿರುವ ಮುಸ್ಲಿಂ ಪುರುಷರ ಸಂಖ್ಯೆ ಕಡಿಮೆ ಇಲ್ಲ.

ಬಹು ಪತ್ನೀತ್ವದ ಬಗ್ಗೆ ಮುಸ್ಲಿಂ ಮಹಿಳೆಯಲ್ಲಿರುವಂತೆ ಅನೇಕ ವಿದ್ಯಾವಂತ ಮುಸ್ಲಿಮರಲ್ಲೂ ತೀವ್ರ ವಿರೋಧವಿದೆ. ನಾಲ್ಕು ಮಂದಿಯನ್ನು ಮದುವೆಯಾಗಲು ಅವಕಾಶ ಇದೆಯಾದರೂ ಅದೊಂದು ಕರ್ತವ್ಯವಲ್ಲ.

ತಲಾಖ್

ತಲಾಖ್ ಎಂದರೆ ವಿವಾಹ ವಿಚ್ಛೇದನ ಎಂದರ್ಥ. ಮುಸ್ಲಿಮರಲ್ಲಿ ವಿವಾಹ ದಂತೆಯೇ ವಿವಾಹ ವಿಚ್ಛೇದನ ಬಹಳ ಸುಲಭ ಹಾಗೂ ಸರಳ. ನಾಲ್ಕು ಮದುವೆ ಯಾಗಲು ಅಡ್ಡಿ ಇಲ್ಲದಿದ್ದರೂ ಒಬ್ಬಳಿಗಿಂತ ಹೆಚ್ಚು ಸ್ತ್ರೀಯರೊಂದಿಗೆ ಮದುವೆ ಯಾಗುವ ಮುಸ್ಲಿಮರು ಅತಿ ವಿರಳ. ಹಾಗೆಯೇ ವಿವಾಹ ವಿಚ್ಛೇದನಕ್ಕೆ ಅನುಕೂಲಗಳಿ ದ್ದರೂ ವಿವಾಹ ವಿಚ್ಛೇದನ ಮಾಡುವವರೂ ಅತಿ ವಿರಳ. ಹತ್ತು ಸಾವಿರ ಮಂದಿಗೆ ಒಬ್ಬ ವಿವಾಹ ವಿಚ್ಛೇದನ ಮಾಡುವ ವ್ಯಕ್ತಿ ಸಿಗಬಹುದು.

ವಿವಾಹದ ನಂತರ ನಾನಾ ಕಾರಣಗಳಿಂದಾಗಿ ದಂಪತಿಗಳಿಗೆ ಒಟ್ಟಾಗಿರಲು ಸಾಧ್ಯವಾಗದಿದ್ದಾಗ ಮತ್ತು ಅತ್ಯಂತ ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ವಿವಾಹ ವಿಚ್ಛೇದನಕ್ಕೆ ಇಸ್ಲಾಂ ಧರ್ಮದಲ್ಲಿ ಅನುಮತಿ ಇದೆ. ಅಲ್ಲದೆ ಮೊಹಮ್ಮದ್ ಪೈಗಂಬರ್ ಅವರ ಮೂಲಕ ಅಲ್ಲಾಹ್ ಈ ಬಗ್ಗೆ "ಎಲ್ಲಾ ಕ್ರಮಬದ್ಧ ನಡವಳಿಕೆಗಳಿಗಿಂತ ತಲಾಖ್ ಅತ್ಯಂತ ಅಸಹ್ಯಕರವಾದುದು" ಎಂದು ಎಚ್ಚರಿಸಿರುವುದು ಈ ಘಟನೆಗಳು ಅತಿ ಸಾಮಾನ್ಯವಾಗದಿರುವಂತೆ ತಡೆ ಹಿಡಿದಿದೆ. ಒಂದು ಅಧಿಕೃತ ಅಂದಾಜಿನ ಪ್ರಕಾರ ಹಿಂದು ಗಳಲ್ಲಿ ಮುರಿದು ಬೀಳುವ ಮದುವೆ ಪ್ರಕರಣಗಳಿಗಿಂತ ಮುಸ್ಲಿಮರಲ್ಲಿ ವಿಚ್ಛೇದನಗಳಾಗು ವುದು ಕಡಿಮೆ.

ವಿವಾಹ ವಿಚ್ಛೇದನವನ್ನು ಖುರಾನಿನಲ್ಲಿ ತಲಾಖ್-ಎ-ಅಹಸನ್ ಎಂದು ಹೇಳಿದೆ. ಒಂದು ಸಲ ತಲಾಖ್ ಹೇಳಿ ಇನ್ನೊಂದನ್ನು ಹೇಳುವುದಕ್ಕೆ ಇದು ಒಂದು ತಿಂಗಳವರೆಗೆ ಕಾಲಾವಕಾಶ ನೀಡುತ್ತದೆ. ಹೀಗೆ ಮೂರು ತಿಂಗಳ ಅವಧಿಯಲ್ಲಿ ಗಂಡ ತನ್ನ ನಿರ್ಧಾರ ಬದಲಿಸಲು ಅವಕಾಶ ಇದೆ. ಮೊದಲ ಮತ್ತು ಕೊನೆಯ ತಲಾಖ್ ಹೇಳುವ ಅವಧಿ ಯಲ್ಲಿ ಆತ ಹೆಂಡತಿಯನ್ನು ಇಷ್ಟ ಪಟ್ಟರೆ ಉಳಿಸಿಕೊಳ್ಳಬಹುದು. ಆದರೆ ಕೊನೆಯ ತಲಾಖ್ ಹೇಳಿದ ತಕ್ಷಣ ಆಕೆಗೆ ಬಿಡುಗಡೆ. ಹೀಗೆ ಹೇಳಿದ ನಂತರ ಗಂಡನಾದವನು ಆಕೆಯನ್ನು ಮತ್ತೆ ಮದುವೆಯಾಗುವಂತಿಲ್ಲ. ಆಕೆ ಬೇರೆ ಒಬ್ಬನನ್ನು ಮದುವೆಯಾಗಿ ಆತನಿಂದಲೂ ತಲಾಖ್ ಪಡೆದರೆ ಅಥವ ವಿಧವೆಯಾದರೆ ಮಾತ್ರ ಮೊದಲಿನ ಗಂಡ ಆಕೆ ಯನ್ನು ಮರುಮದುವೆಯಾಗಬಹುದು.

೧೯೩೭ ರ ಕಾನೂನಿನ ಪ್ರಕಾರ ಮುಸ್ಲಿಂ ಹೆಂಗಸು ವಿಚ್ಛೇದನ ಬಯಸಲು ಅವ ಕಾಶವಿಲ್ಲ. ಆದರೆ ನಾನಾ ಕಾರಣಗಳಿಂದಾಗಿ ತನ್ನನ್ನು ಬಿಡಬೇಕೆಂದು ಆಕೆ ಗಂಡನಲ್ಲಿ

ಅರ್ಜಿ ಹಾಕಲು "ಖುಲಾ" ಎಂಬ ವಿಧಿ ಅವಕಾಶ ಕೊಟ್ಟಿದೆ. ಆಕೆ ತನ್ನ ಮಹರ್ ಹಣದಿಂದ ಈ ಬಿಡುಗಡೆಯನ್ನು ಪಡೆಯಬಹುದು. ಒಂದು ವೇಳೆ ಇದಕ್ಕೆ ಗಂಡಸು ನಿರಾಕರಿಸಿದರೆ ಆಕೆ ನ್ಯಾಯಾಲಯದ ಮೊರೆ ಹೋಗಬಹುದು. ತಲಾಖ್ ನಂತರ ಮಕ್ಕಳು ತಾಯಿಯ ವಶದಲ್ಲಿಯೇ ಇರಬೇಕು. ಆದರೆ ಅವನ್ನು ನೋಡಿಕೊಳ್ಳುವ ಹೊಣೆ ತಂದೆಯದು. ವಿವಾಹ ವಿಚ್ಛೇದನ ಇಷ್ಟು ಸರಳವಾಗಿರುವುದರಿಂದಲೇ ಮುಸ್ಲಿಮರಲ್ಲಿ ವಧುಗಳನ್ನು ಹಿಂಸಿಸಿ ಸುಟ್ಟು ಸಾಯಿಸುವ ಪ್ರಕರಣಗಳು ಅತಿ ವಿರಳ ಎನ್ನಬಹುದು. ತಲಾಖ್ ಸಂಪ್ರದಾಯದಿಂದಾಗಿ ಮುಸ್ಲಿಂ ಮಹಿಳೆಯರಿಗೆ ಮರುಮದುವೆಯಾಗಲು ಹಿಂದುಗಳಲ್ಲಿರುವಷ್ಟು ತೊಂದರೆ ಇಲ್ಲ. ವಿಧವೆಯರೂ ಮರುಮದುವೆಯಾಗಲು ಅವಕಾಶವಿದೆ. ನಮ್ಮ ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರು ಕೂಡ ವಿಧವೆಯನ್ನೇ ಮದುವೆಯಾಗಿದ್ದರು ಎಂಬುದು ಅವರ ವಾದ. ಒಟ್ಟಿನಲ್ಲಿ ಮೇಲುನೋಟಕ್ಕೆ ತಲಾಖ್ ಪದ್ಧತಿ ಗಂಡಸಿನ ಪರ ಇದೆ ಎಂಬಂತೆ ತೋರುತ್ತದೆ. ಆದರೆ ಈ ಪದ್ಧತಿಯಲ್ಲಿ ಸ್ತ್ರೀಗೆ ನ್ಯಾಯ ದೊರಕಿಸಿಕೊಡುವ ತತ್ವ ಈ ಮೇಲೆ ಹೇಳಿದ ಕೆಲವು ಅಂಶಗಳಿಂದ ಸ್ಪಷ್ಟವಾಗಿದೆ. ಈ ಎಲ್ಲ ನಿಯಮ ಸ್ತ್ರೀಯರ ಮಾನ-ಮರ್ಯಾದೆ ಮತ್ತು ಹಿತರಕ್ಷಣೆಯ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದೆ ಎಂದು ಹೇಳಬಹುದು.

ವಫಾತ್ ಅಥವ ಮೃತ್ಯು

ಯಾವ ಜನಾಂಗದವರಾಗಲಿ ಅಥವ ಧರ್ಮದವರಾಗಿರಲಿ ಜನ್ಮ ಮತ್ತು ಮೃತ್ಯುಗಳ ವಿಚಾರದಲ್ಲಿ ಭಾವನೆಗಳು ಒಂದೇ ಆಗಿರುವುದನ್ನು ನಾವು ಕಾಣಬಹುದು. ಪ್ರತಿಯೊಬ್ಬನಿಗೂ ಜನ್ಮದಿಂದ ಆನಂದ ಹಾಗೂ ಮೃತ್ಯುವಿನಿಂದ ದುಃಖವಾಗುವುದು ಸಹಜ. ವ್ಯಕ್ತಿಯು ಸಾಯುವ ಸಮಯದಲ್ಲಿ ಹಿಂದುಗಳು ಬಾಯಿಗೆ ಗಂಗಾಜಲ ಅಥವ ತುಳಸೀದಳದ ಜಲ ಬಿಡುತ್ತಾರೆ. ಹಾಗೆಯೇ ಮುಸ್ಲಿಮರಲ್ಲಿ ಮಕ್ಕಾದಲ್ಲಿರುವ ಜಮ್ ಜಮ್ ಎನ್ನುವ ಬಾವಿಯ ನೀರನ್ನು ಅಥವ ಸಕ್ಕರೆ ನೀರಿನ ಪಾನಕವನ್ನು ಬಾಯಿಗೆ ಬಿಡುತ್ತಾರೆ. ಆದರೆ ಮೃತ್ಯುವಿನ ನಂತರ ನಡೆಯುವ ಕೆಲವು ಸಂಪ್ರದಾಯಗಳು ತೀರ ಭಿನ್ನವಾಗಿವೆ. ಪ್ರಾಣ ಹೋದ ತಕ್ಷಣ ಮೃತ ಶರೀರದ ಮುಖ, ಕಣ್ಣುಗಳನ್ನು ಮುಚ್ಚಿ, ಕೈಕಾಲುಗಳನ್ನು ನೆಟ್ಟಗೆ ಮಾಡಿ ಶರೀರದ ಮೇಲೆ ಬಟ್ಟೆ ಹೊದಿಸುತ್ತಾರೆ. ನಂತರದ ಮುಖ್ಯ ಕೆಲಸವೆಂದರೆ ಮೃತ ಶರೀರಕ್ಕೆ ಸ್ನಾನ ಮಾಡಿಸುವುದು. ನಂತರ ಶರೀರದ ಮೇಲೆ ಸುಗಂಧಿತ ವಸ್ತುಗಳನ್ನು ಸವರುತ್ತಾರೆ. ಅನಂತರ ಅದಕ್ಕೆ ಕಫನ್ ಅಥವ ಬಿಳಿಯ ಶವ ವಸ್ತ್ರವನ್ನು ಹೊದಿಸುತ್ತಾರೆ. ಪುರುಷರಿಗೆ ಹೊದಿಸುವ ಬಟ್ಟೆಯನ್ನು ಮೂರು ತುಂಡುಗಳಿಂದಲೂ ಮತ್ತು ಹೆಂಗಸರಿಗೆ ಹೊದಿಸುವ ಬಟ್ಟೆಯನ್ನು ಐದು ತುಂಡುಗಳಿಂದಲೂ ತಯಾರಿಸುತ್ತಾರೆ. ನಂತರ ಮೃತ ಪುರುಷನ ವಿಧವೆಗೆ ಶವದ ಮೇಲಿನ ಬಟ್ಟೆಯನ್ನು ಸರಿಸಿ ಮುಖವನ್ನು ತೋರಿಸುತ್ತಾರೆ ಮತ್ತು ಪತಿಯಿಂದ ದೊರೆಯ ಬೇಕಾಗಿದ್ದ

ಮಹರ್ ಹಣ ಸಾಕ್ಷಿಗಳ ಮುಂದೆ ಮನ್ನ ಮಾಡಲಾಗಿದೆ ಎಂದು ಆಕೆಯ ಬಾಯಿಂದ ಹೇಳಿಸುತ್ತಾರೆ. ಅನಂತರ ಮೃತ ಶರೀರದ ಮೇಲೆ ಹೂವಿನ ಮಾಲೆಗಳನ್ನು ಹಾಕಿ ಅಲಂಕಾರ ಮಾಡುತ್ತಾರೆ. ಅನಂತರ ಅದನ್ನು 'ಜನಾಜಾ' ಎಂದು ಕರೆಯುವ ಪೆಟ್ಟಿಗೆಯಲ್ಲಿಡುತ್ತಾರೆ. ಆ ಪೆಟ್ಟಿಗೆಯ ಮೇಲೆ ಬಿಳಿಯ ಒಟ್ಟೆಯನ್ನು ಹೊದಿಸಿ ಅದನ್ನು ಹೆಗಲ ಮೇಲೆ ಹೊತ್ತುಕೊಂಡು ಶ್ಮಶಾನಕ್ಕೆ ಹೊರಡುತ್ತಾರೆ. ಈ ಹೆಣದ ಪೆಟ್ಟಿಗೆಯನ್ನು ಪ್ರತಿಯೊಬ್ಬರೂ ಹೆಗಲು ಕೊಟ್ಟು ಹೊರುತ್ತಾರೆ. ಶವಯಾತ್ರೆಯಲ್ಲಿ ಸೇರುವುದು, ಶವಕ್ಕೆ ಹೆಗಲು ಕೊಡುವುದು ಮುಸ್ಲಿಮರಲ್ಲಿ ಒಂದು ಪವಿತ್ರಕಾರ್ಯವೆಂದು ಪರಿಗಣಿಸಲಾಗಿದೆ. ಈ ಕಾರಣಗಳಿಂದ ಶವ ಹೊರುವ ಜನಕ್ಕೆ ಹಿಂದುಗಳಲ್ಲಿರುವಂತೆ ದಾರಿದ್ರ್ಯವಿಲ್ಲ. ಶ್ಮಶಾನಕ್ಕೆ ಶವಯಾತ್ರೆಯಲ್ಲಿ ತಲುಪಿದ ಮೇಲೆ ಪೆಟ್ಟಿಗೆಯನ್ನು ಎದುರಿಗೆ ಇಟ್ಟುಕೊಂಡು ಮೃತ ವ್ಯಕ್ತಿಗಾಗಿ ಪ್ರಾರ್ಥನೆ ನಡೆಸುತ್ತಾರೆ. ಇದನ್ನು 'ನಮಾಜೇ ಜನಾಜಾ' ಎನ್ನುತ್ತಾರೆ. ಇದರಲ್ಲಿ ದೇವರ ಸ್ತುತಿ ಹಾಗೂ ಕ್ಷಮಾಯಾಚನೆಯ ಅಂಶವೇ ಹೆಚ್ಚು. ನಂತರ ಶವದ ಮುಖವನ್ನು ಮಕ್ಕಾ ದಿಕ್ಕಿಗೆ ಅಭಿಮುಖವಾಗಿಟ್ಟು ಹೊದಿಸಿರುವ ಕಫನ್ನಿನೊಂದಿಗೆ ಶವವನ್ನು ಗೋರಿಯ ಗುಂಡಿಯಲ್ಲಿಡುತ್ತಾರೆ. ನಂತರ ಅಲ್ಲಿ ನೆರೆದ ಎಲ್ಲಾ ಬಂಧುಗಳು, ಮಿತ್ರವರ್ಗದವರು ಮೂರು–ಮೂರು ಹಿಡಿ ಮಣ್ಣನ್ನು ಶವದ ಮೇಲೆ ಹಾಕುತ್ತಾರೆ. ಮನೆಗೆ ಮರಳಿದ ಬಳಿಕ ಮೃತನು ಮೃತನಾದ ಜಾಗದಲ್ಲಿ ದೀಪವಿಡುತ್ತಾರೆ. ಈ ಶವಯಾತ್ರೆಯಲ್ಲಿ ನೆರೆದ ಎಲ್ಲಾ ಜನರಿಗೂ ಊಟ ಮಾಡಿಸುತ್ತಾರೆ. ಹೆಣವನ್ನು ಹೂತ ಮೂರನೆಯ ದಿವಸ ಮೃತನ ಮನೆಗೆ ಖುರಾನ್ ಓದುವವರನ್ನು ಕರೆಸಿ ಸಂಪೂರ್ಣ ಖುರಾನ್ ಅನ್ನು ಪಠಿಸುವರು ಹಾಗೂ ನೆಂಟರಿಷ್ಟರೆಲ್ಲರಿಗೂ ಔತಣ ಏರ್ಪಾಡು ಮಾಡುತ್ತಾರೆ. ವ್ಯಕ್ತಿಯು ಮೃತನಾದ ಹತ್ತನೆಯ ದಿವಸ ಹಾಗೂ ನಲವತ್ತನೆಯ ದಿವಸ ನೆಂಟರಿಷ್ಟರು ಗೋರಿಯ ಬಳಿಗೆ ಹೋಗಿ ಮೃತನ ಆತ್ಮ ಶಾಂತಿಗಾಗಿ ಪ್ರಾರ್ಥನೆ ಮಾಡುತ್ತಾರೆ. ನಂತರ ಮನೆಯಲ್ಲಿ ಖುರಾನ್ ಪಠಣ ಮಾಡಿಸುತ್ತಾರೆ ಹಾಗೂ ಔತಣ ಏರ್ಪಾಡು ಮಾಡುತ್ತಾರೆ. ಇದಾದ ತರುವಾಯ ಅರ್ಧ ವಾರ್ಷಿಕ ಹಾಗೂ ವಾರ್ಷಿಕ ಶ್ರಾದ್ಧದ (ಬರ್ಸಿ) ಸಮಯದಲ್ಲಿ ಸಹ, ಔತಣ, ದಾನ ಮುಂತಾದ ಪುಣ್ಯ ಕಾರ್ಯಗಳನ್ನು ಮಾಡುವುದಕ್ಕೆ ಇಸ್ಲಾಂ ಧರ್ಮದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದೆ. ಹಿಂದುಗಳಲ್ಲಿರುವ ಹಾಗೆ ಪ್ರತಿವರ್ಷವು ತಂದೆ, ತಾಯಿ ಅಥವ ಇತರ ಹಿರಿಯರು ಸತ್ತ ದಿನದಂದು ಮಾಡುವ ತಿಥಿ ಎಂಬ ಸಂಸ್ಕಾರ ಮುಸ್ಲಿಮರಲ್ಲಿಲ್ಲ. ಆದರೆ ಸಾಮಾನ್ಯವಾಗಿ ಪ್ರತಿವರ್ಷ ಬಕ್ರೀದ್ ಹಬ್ಬದಲ್ಲಿ ಮೃತರ ಆತ್ಮಕ್ಕೆ ಶಾಂತಿಕೋರುವ ಪ್ರಾರ್ಥನೆ (ಫಾತಿಹಾ) ಮುಸ್ಲಿಮರು ನಡೆಸುತ್ತಾರೆ. ಹಿಂದುಗಳ ಹಾಗೆ ಮುಸ್ಲಿಮರಲ್ಲೂ ಸ್ವರ್ಗ (ಜನ್ನತ್) ಮತ್ತು ನರಕ (ದೋಜಕ್) ಇವೆ.

ಪರ್‌ದ ಪದ್ಧತಿ

ಸಾಮಾನ್ಯವಾಗಿ ಮುಸ್ಲಿಂ ಹೆಂಗಸರು ತಮ್ಮ ದೇಹವನ್ನು ಬುರ್ಕ ಎಂದು ಕರೆಯುವ ಬಟ್ಟೆಯಿಂದ ಮುಚ್ಚಿಕೊಂಡಿರುತ್ತಾರೆ. ಇದನ್ನು ಬುರ್ಕ ಅಥವ ಪರ್‌ದ ಪದ್ಧತಿ ಎಂದು ಕರೆಯುತ್ತಾರೆ. ಹೆಂಗಸರು ಗಂಡಸಿನ ಕಣ್ಣಿಗೆ ಬೀಳದೆ ಮರೆಯಾಗಿರ ಬೇಕೆಂಬುವೇ ಇದರ ಉದ್ದೇಶ. ಇದು ಒಂದಲ್ಲ ಒಂದು ರೀತಿಯಲ್ಲಿ ಯೂರೋಪ್ ಹಾಗೂ ಏಷ್ಯಾ ಖಂಡಗಳ ಹಲವು ದೇಶಗಳಲ್ಲಿ ಬಹಳ ಹಿಂದಿನ ಕಾಲದಿಂದಲೂ ಬಂದ ಸಂಪ್ರದಾಯ. ಗ್ರೀಸ್ ದೇಶದಲ್ಲಿ ಈ ಪದ್ಧತಿ ಇತ್ತು. ಅರಬರ ಕುರಾಯಿಷ್ ಬುಡ-ಕಟ್ಟಿನ ಜನರಲ್ಲಿ ಮದುವೆಯಾದ ಹೆಂಗಸರು ಇದನ್ನು ಧರಿಸುತ್ತಿದ್ದರು. ಮೊಹಮ್ಮದ್‌ಪೈಗಂಬರ್ ಅವರ ಹೆಂಡತಿ ಆಯೆಷ ಇದನ್ನು ಹಾಕಿಕೊಳ್ಳುತ್ತಿರಲಿಲ್ಲವಂತೆ. ಎರಡನೆಯ ಕಲೀಫ ಉಮರನ ಅಂದಿನ ವಿದ್ಯಾರ್ಥಿನಿಯರಿಗೆ ಖುರಾನ್ ಪಾಠ ಹೇಳಿ ಕೊಡುವವರ ಎದುರಿಗೆ ಬುರ್ಕ ಹಾಕಿಕೊಳ್ಳದಿರಲು ಅವಕಾಶವಿತ್ತಿದನಂತೆ. ಅರಬರು ತಮ್ಮ ಹೆಂಡಿರನ್ನು ರಣರಂಗಕ್ಕೆ ಜೊತೆಯಲ್ಲಿಯೇ ಕರೆದುಕೊಂಡು ಹೋಗುವುದು ಸಾಮಾನ್ಯವಾಗಿತ್ತು. ಅದರಲ್ಲೂ ಈಗ ಅರೇಬಿಯ, ಇರಾನ್ ಹಾಗೂ ಇನ್ನಿತರ ಕೆಲವು ಮುಸ್ಲಿಂ ದೇಶಗಳಲ್ಲಿ ಹೆಂಗಸರು ಮಸೀದಿಯಲ್ಲಿ ಪ್ರಾರ್ಥನೆಗೆ ಸೇರುವುದು, ಧರ್ಮ ಪ್ರಸಂಗಗಳಲ್ಲಿ ಭಾಗವಹಿಸುವುದು ಸಾಮಾನ್ಯವಾಗಿದೆ. ಅಲ್ಲದೆ ಸಾಮಾನ್ಯವಾಗಿ ಯಾವ ಮುಸ್ಲಿಂ ದೇಶಗಳಲ್ಲೇ ಆಗಲಿ ಹಳ್ಳಿಗಳಲ್ಲಿ ಈ ಪದ್ಧತಿ ಇಲ್ಲವೆನ್ನಬಹುದು.

ಈ ಪದ್ಧತಿ ಎಲ್ಲ ದೇಶಗಳಲ್ಲೂ ಒಂದೇ ಸಮನಾಗಿಲ್ಲ. ಈಜಿಪ್ಟ್, ಅರೇಬಿಯ, ಇರಾನ್ ದೇಶಗಳಲ್ಲಿ ಇದು ನಾಮಮಾತ್ರವಾಗಿದ್ದು ಇಲ್ಲಿ ಹೆಂಗಸರು ತಲೆಯ ಮೇಲೆ ಬಟ್ಟೆ ಹಾಕಿಕೊಂಡು ಸ್ವತಂತ್ರವಾಗಿ ತಿರುಗಾಡುತ್ತಾರೆ. ಆದರೆ ಇದು ಇಂಡಿಯಾದಲ್ಲಿ ಅನೇಕ ಕಡೆ ಕಟ್ಟುನಿಟ್ಟಾಗಿದೆ. ಸಾಮಾನ್ಯವಾಗಿ ಹೆಂಗಸರು ಮನೆಬಿಟ್ಟು ಬರುವುದೇ ಇಲ್ಲ. ಅಷ್ಟೆ ಅಲ್ಲ ಮನೆಯಲ್ಲೇ ಪರ ಪುರುಷನಿಗೆ ಮುಖ ತೋರಿಸುವುದಿಲ್ಲ. ಈ ಪದ್ಧತಿ ನಮ್ಮಲ್ಲಿ ತೈಮೂರ್‌ನಿಂದ ಬಂತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅವನು ಮುಸ್ಲಿಂ ಹೆಂಗಸರು ಹಿಂದುಗಳಿಗೆ ಮುಖತೋರಿಸಬಾರದೆಂದು ಅಪ್ಪಣೆ ಮಾಡಿದ್ದನಂತೆ. ಆದರೆ ತೈಮೂರನು ಭಾರತದಲ್ಲಿದ್ದುದು ಬಹು ಸ್ವಲ್ಪ ಕಾಲವಾದುದರಿಂದ ಇದು ಅವನ ಅಪ್ಪಣೆಯೊಂದರಿಂದಲೇ ಬಳಕೆಯಲ್ಲಿದೆ ಎಂದು ಹೇಳುವುದು ಕಷ್ಟ. ಇದಕ್ಕೆ ಬಹುಶಃ ಇನ್ನಾವ ಕಾರಣಗಳಿರಬೇಕೆಂದು ತೋರುತ್ತದೆ. ಈ ಪದ್ಧತಿ ಉತ್ತಮ ಮತ್ತು ಮಧ್ಯಮ ದರ್ಜೆಯ ಜನರಲ್ಲಿ ಜಾರಿಯಲ್ಲಿದೆ. ಕೆಳಗಿನ ದರ್ಜೆಯ ಜನರಲ್ಲಿ ಬಹಳ ಕಡಿಮೆ. ಈಗೀಗ ಜನರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ತಕ್ಕಂತೆ ಬದುಕನ್ನು ಮಾರ್ಪಡಿಸಿಕೊಳ್ಳುತ್ತಿರುವುದನ್ನು ಗಮನಿಸಿದಾಗ ಈ ಪದ್ಧತಿ ಬಹು ಬೇಗ ತಪ್ಪಿ ಹೋಗ ಬಹುದೆಂದು ಕಾಣುತ್ತದೆ. ತುರ್ಕಿ ದೇಶದಲ್ಲಿ ಈ ಸಂಪ್ರದಾಯ ಸಂಪೂರ್ಣವಾಗಿ ತಪ್ಪಿ ಹೋಗಿದೆ. ಆ ದೇಶದ ಹೆಂಗಸರು ಯೂರೋಪ್‌ನ ಇತರ ದೇಶಗಳ ಹೆಂಗಸರಂತೆ ಸ್ವತಂತ್ರ ರಾಗಿದ್ದಾರೆ. ಅವರನ್ನು ಈಜಿಪ್ಟ್, ಇರಾನ್, ಅರೇಬಿಯಾದವರು ಅನುಕರಿಸುತ್ತಾರೆ.

ಏಳನೆಯ ಶತಮಾನದಲ್ಲಿ ಅರಬ್ ದೇಶದಲ್ಲಿ ಉಗಮವಾದ ಇಸ್ಲಾಂ ಧರ್ಮ ಅಲ್ಲಿಂದ ಒಂದೆರಡು ಶತಮಾನಗಳಲ್ಲೇ ಸುತ್ತಮುತ್ತಲ ಪ್ರದೇಶಕ್ಕೆಲ್ಲ ಹರಡಿತು. ಅರಬ್ಬೀ ವರ್ತಕರು ಕರ್ನಾಟಕದ ಪಶ್ಚಿಮ ತೀರದ ಪ್ರದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದರೆಂದು ತಿಳಿಯುವುದರಿಂದ ಸುಮಾರು ಈ ಕಾಲದಲ್ಲೇ ಕರ್ನಾಟಕಕ್ಕೆ ಈ ಧರ್ಮ ಮೊದಲು ಬಂದಿರಬೇಕೆಂದು ಹೇಳಬಹುದು. ರಾಷ್ಟ್ರಕೂಟ ಅರಸರ ಕಾಲದಲ್ಲಿ ಅವರ ರಾಜ್ಯದಲ್ಲಿ ಇಸ್ಲಾಮೀಯರು ಇದ್ದಂತೆಯೂ ಅವರು ತಮ್ಮ ನ್ಯಾಯನೀತಿಗಳ ನಿರ್ಧಾರಕ್ಕೆ ತಮ್ಮ ಅಧಿಕಾರಿಗಳು, ಖಾಜೀಗಳನ್ನು ಹೊಂದಿರುವುದಕ್ಕೆ ಅವಕಾಶವಿತ್ತೆಂದು ಆ ಕಾಲದ ಕೆಲವು ಅರಬ್ಬೀ ಲೇಖಕರು ತಿಳಿಸಿದ್ದಾರೆ. ಈ ಜನ ಸ್ಥಳೀಯ ವೇಷಭೂಷಣಗಳನ್ನೇ ಧರಿಸುತ್ತಿದ್ದರೆಂಬ ಹೇಳಿಕೆ ಸಹ ಇದೆ. ಇವುಗಳ ಬಗ್ಗೆ ಶಾಸನಾಧಾರಗಳು ಕರ್ನಾಟಕದಲ್ಲಿ ದೊರಕುವುದಿಲ್ಲ. ಠಾಣಾ ಜಿಲ್ಲೆಯಲ್ಲಿ ದೊರೆತ 926 ರ ಒಂದು ಶಾಸನದಲ್ಲಿ ತಾಜಿಕನೊಬ್ಬ (ಅರಬ್ಬೀ) ರಾಷ್ಟ್ರಕೂಟರ ಕೈಕೆಳಗೆ ಪ್ರಾಂತ್ಯಾಧಿಕಾರಿಯಾಗಿದ್ದ ಬಗ್ಗೆ ಉಲ್ಲೇಖವಿದೆ. ಆದರೆ 11 ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಯಲ್ಲಿ ಇಸ್ಲಾಮೀಯರು ಹರಡಿದ್ದರೆಂಬುದಕ್ಕೆ ಸ್ಪಷ್ಟ ಸೂಚನೆಗಳಿವೆ. ಗೋವ ಕದಂಬ ದೊರೆ 1 ನೆಯ ಜಯಕೇಶಿಯ ಅಂಗರಕ್ಷಕದಳದ ಮುಖ್ಯಸ್ಥ ತಾಜಿಕ ಕುಲದ ಅಲಿಯಮನ ಮಗ ಮದುಮದನೆಂದೂ ಜಯಕೇಶಿ ಅವನಿಗೆ ಒಂದು ಗ್ರಾಮವನ್ನು ದತ್ತಿ ನೀಡಿದನೆಂದೂ 1054 ರ ಒಂದು ಶಾಸನ ತಿಳಿಸುತ್ತದೆ. 12-13 ನೆಯ ಶತಮಾನಗಳಲ್ಲಿ ಸಹ ಅರಬ್ ಮತ್ತು ತುರ್ಕಿ ದೇಶಗಳಿಂದ ಉತ್ತಮ ತಳಿಯ ಕುದುರೆಗಳನ್ನು ಆ ದೇಶದ ಜನ ಇಲ್ಲಿಗೆ ತಂದು ವ್ಯಾಪಾರ ನಡೆಸುತ್ತಿದ್ದರು ಎಂಬ ಬಗ್ಗೆ ಗ್ರಂಥಾಧಾರಗಳಿವೆ. ಕೆಲವು ಶಾಸನಗಳು ಈ ಜನರನ್ನು ತುರುಷ್ಕರು ಎಂದು ಹೆಸರಿಸುತ್ತವೆ . . . . .

(ಕರ್ನಾಟಕ – ಕನ್ನಡ ವಿಷಯ ವಿಶ್ವಕೋಶ ಪುಟ. ೮೪)

ಅಂಬಳಿಕೆ ಹಿರಿಯಣ್ಣ

'ಜಾನಪದ' ವ್ಯಾಖ್ಯೆ ಕುರಿತು . . .

ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದವು ಅತ್ಯಂತ ಮಹತ್ತರವಾದ ವಿಷಯವಾಗಿದೆ. ಈ ಐತಿಹಾಸಿಕ ವಿಜ್ಞಾನವು ಬರಿಯ ಊಹೆಯನ್ನು ಅವಲಂಬಿಸಿರುವ ಶಾಸ್ತ್ರವಾಗಿರದೆ ವಾಸ್ತವಿಕ ಆಧಾರಗಳ ಮೇಲೆ ಬೆಳೆಯುತ್ತಿರುವ ಅಧ್ಯಯನದ ವಿಷಯ ವಾಗಿದೆ.1 ಅತ್ಯಂತ ವಿಶಾಲವೂ ವ್ಯಾಪಕವೂ ಮಾನವ ಜೀವನದ ಸಮಗ್ರ ವ್ಯವಹಾರ ಗಳನ್ನೂ ಒಳಗೊಳ್ಳುವ ಈ ಜಾನಪದ2ವನ್ನು ಒಂದು ಸೂತ್ರಬದ್ಧ ರೀತಿಯಲ್ಲಿ ವಿವರಿಸು ವುದು ಕಷ್ಟ ಸಾಧ್ಯ. ಇಂದು ಅದು ಒಂದು ಪ್ರತ್ಯೇಕ ಅಧ್ಯಯನ ಶಿಸ್ತಾಗಿ ರೂಪು ಗೊಂಡಿರುವುದರಿಂದ ಜಾನಪದ ಎಂದರೇನೆಂಬುದನ್ನು ಸೂತ್ರೀಕರಿಸಿ ವಿವರಿಸುವ ಅಗತ್ಯ ವಿದೆ. ಈಗಾಗಲೇ ಸುಮಾರು ಇಪ್ಪತ್ತೊಂದು ಮಂದಿ ಜಗತ್ತಿನ ಜಾನಪದ ವಿದ್ವಾಂಸರು Folkloreನ್ನು ಕುರಿತು ವ್ಯಾಖ್ಯಾನ ಮಾಡಿದ್ದಾರೆ.3 ಆದರೆ ಅವರಲ್ಲಿ ಜಾನಪದ, ಅದರ ಸ್ವರೂಪ ಮತ್ತು ವ್ಯಾಪ್ತಿಯ ಬಗೆಗೆ ಒಮ್ಮತವಿಲ್ಲ. ಇಲ್ಲಿ ಆ ವಿದ್ವಾಂಸರ ಭಿನ್ನಾಭಿಪ್ರಾಯಗಳನ್ನು ಸಂಕ್ಷೇಪವಾಗಿ ವಿವೇಚಿಸಿ ಆ ಬೆಳಕಿನಲ್ಲಿ, ಜಾನಪದ ಎಂದ ರೇನೆಂಬುದನ್ನು ಸರಳವಾಗಿ ವಿವರಿಸಲು ಯತ್ನಿಸಿದೆ.4

'ಜಾನಪದ'ವನ್ನು ಕುರಿತು ವಾಖ್ಯಾನಗಳನ್ನು ಹೊರಡಿಸಿರುವ ಆ ಇಪ್ಪತ್ತೊಂದು ಮಂದಿ ವಿದ್ವಾಂಸರಲ್ಲಿ ಕೆಲವರು ಅದಕ್ಕೆ ಮಾನವ ಶಾಸ್ತ್ರದ ದೃಷ್ಟಿಯಿಂದ ವಿವರಣೆ ನೀಡಿ ದ್ದರೆ ಮತ್ತೆ ಕೆಲವರು ಸಾಹಿತ್ಯಿಕ ದೃಷ್ಟಿಯಿಂದ ವಿವರಣೆ ನೀಡಲು ಯತ್ನಿಸಿದ್ದಾರೆ. ಆದ್ದರಿಂದಲೇ ಜಾನಪದವು ಈ ಎರಡು ಶಾಸ್ತ್ರಗಳ ನಡುವೆ ಎಲ್ಲೋ ಒಂದೆಡೆ ಒಂದು ನಿಂತಂತೆಯೂ ಅವುಗಳಿಗೆ ಸಂಬಂಧ ಕಲ್ಪಿಸುವ ಸೇತುವಾಗಿಯೂ ಕಾಣಿಸಿಕೊಳ್ಳುತ್ತದೆ. ಆ ವಿದ್ವಾಂಸರ ಅಭಿಪ್ರಾಯಗಳನ್ನು ಲಕ್ಷಿಸಿ ಅರ್ಥೈಸುವುದಾದರೆ, ಮಾನವ ಮತ್ತು ಅವನ ವರ್ತನೆಗಳನ್ನು ಕುರಿತ ಸಂಸ್ಕೃತಿಯ ಭಾಗವೇ ಜಾನಪದ. ಅದು ಒಂದು ಜನ ವರ್ಗದ ಸಮಸ್ತ ಬದುಕಿನ ಇತಿಹಾಸ. ಅದು ಸಾಂಪ್ರದಾಯಿಕ ರೀತಿಯ ಜನಜೀವನದ ಎಲ್ಲ ಸ್ತರಗಳಿಗೂ ವ್ಯಾಪಿಸುತ್ತದೆ. ನಾಗರಿಕ ಹಾಗೂ ಶಿಷ್ಟ ಸಂಸ್ಕೃತಿಗಳಿಂದ ದೂರ ಸರಿದ ಪರಂಪರಾನುಗತವಾದ ಬೆಳವಣಿಗೆಯನ್ನು ಪಡೆದ ಜನಸಾಮಾನ್ಯರ ವಿಶಿಷ್ಟ ಸಂಸ್ಕೃತಿ ಅದು. ಅವರ ಜೀವನದ ಸಮಸ್ತ ವಿಷಯಗಳೂ ಅದರಲ್ಲಿ ಸಮಾವೇಶಗೊಳ್ಳು

ತ್ರವೆ.5 ಅದರ ಪ್ರಕಾರಗಳು ವಾಙ್ಮಯ ಪ್ರಪಂಚದಿಂದ ಅಭೌತಿಕ ಭೌತಿಕವಸ್ತು ವಿಶೇಷಗಳವರೆಗೂ ವ್ಯಾಪಿಸಿವೆ, ಎಂದರೆ ಜನಪದಕ್ಕೆ ಸಂಬಂಧಿಸಿದುದೆಲ್ಲ ಜಾನಪದ.

ಜಾನಪದ ಗ್ರಂಥಸ್ಥ ಮೂಲದಿಂದ ಬಂದದ್ದಲ್ಲ ; ಅದು ಪರಂಪರಾನುಗತವಾಗಿ ಮೌಖಿಕ ಸಂಪ್ರದಾಯ (oral tradition)ದಲ್ಲಿ ಸಾಗಿ ಬಂದ ಅನುಭವದ ಮೊತ್ತ ಎಂಬುದು ಸಾಮಾನ್ಯ ಅಭಿಪ್ರಾಯ. ಈ ವಿವರಣೆ ಜಾನಪದದ ಒಂದು ಪ್ರಮುಖ ಲಕ್ಷಣದ ಕಡೆ ನಮ್ಮ ಗಮನ ಸೆಳೆಯುತ್ತದೆ. ಆ ಲಕ್ಷಣದ ಪ್ರಕಾರ ಅಕ್ಷರಸ್ಥ ಆಧುನಿಕ ಸಮಾಜದಿಂದ ಬೇರೆಯಾದ ನಿರಕ್ಷರ ಕುಕ್ಷಿಗಳಲ್ಲಿ ಮೌಖಿಕ ಸಂಪ್ರದಾಯದಲ್ಲಿ ಉಳಿದು ಬಂದ ಸಮಸ್ತ ಜ್ಞಾನವೂ ಜಾನಪದ. ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳಲ್ಲಿ ಇಂದಿಗೂ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬೇರೆಯಾಗಿರುವ ಅನಕ್ಷರಸ್ಥ ಚಿಕ್ಕ ಚಿಕ್ಕ ಗುಂಪುಗಳಲ್ಲಿ ವಾಕ್ ಸಂಪ್ರದಾಯ ತನ್ನ ಪರಿಶುದ್ಧತೆಯನ್ನು ಹೆಚ್ಚಾಗಿ ಉಳಿಸಿ ಕೊಂಡಿರುವುದು ನಮ್ಮ ಅನುಭವಕ್ಕೆ ಬಂದ ವಿಚಾರ.6 ಇಂಥ ಪರಿಶುದ್ಧವಾದ ಸಂಸ್ಕೃತಿಯ ಸಮಸ್ತ ವಿಷಯಗಳೂ ಶುದ್ಧ ಜಾನಪದವೆಂಬುದು ಅಭಿಪ್ರಾಯ. ಆದರೆ ಜಾನಪದ ಎನ್ನುವುದು ಕೇವಲ ಅಶಿಕ್ಷಿತ ಸಮೂಹ, ಆದಿವಾಸಿ ಗುಂಪು ಅಥವಾ ಗ್ರಾಮಾಂತರವಾಸಿಗಳ ಜೀವನಕ್ಕೆ ಮಾತ್ರ ಸೀಮಿತವಾದುದಲ್ಲ. ಅದರ ವ್ಯಾಪ್ತಿ ನಗರ ಆವರಣಕ್ಕೂ ವಿಸ್ತರಿಸುತ್ತದೆ. ಆದರೆ ಅವನ್ನು ಅನುಸರಿಸುವ, ಅದರ ವ್ಯಾಪ್ತಿಯ ರೇಖೆ ಯಲ್ಲಿ ಬರುವ ಗುಂಪನ್ನೊ ಸಮೂಹವನ್ನೊ ಸಾಮಾಜಿಕ ವರ್ಗವನ್ನೊ ಅದು ಅವಲಂಬಿಸಿರುತ್ತದೆ ಎಂಬುದು ಮಾತ್ರ ಸತ್ಯ.7

ಮತ್ತೊಂದು ಗಮನಾರ್ಹ ವಿಚಾರವೆಂದರೆ ಜಾನಪದದ ಮೌಖಿಕಗುಣ ಅದನ್ನು ಸಂಸ್ಕೃತಿಯ ಇತರ ವಿಷಯಗಳಿಂದ ಪ್ರತ್ಯೇಕಿಸಲಾರದು ಎಂಬುದು. ಏಕೆಂದರೆ ಮೌಖಿಕ ಸಂಸ್ಕೃತಿಯಲ್ಲಿ ಎಲ್ಲವೂ ಜಾನಪದವೇ ಆಗುತ್ತದೆ.8 ಆದರೆ ಈ ಹೇಳಿಕೆಯನ್ನು ಎಲ್ಲ ವಿದ್ವಾಂಸರೂ ಒಪ್ಪಿಕೊಂಡಿಲ್ಲ. ಮೌಖಿಕ ಸಂಪ್ರದಾಯದಲ್ಲೇ ಸಾಗುವ ಭಾಷೆ, ಬೇಟೆಯ ತಂತ್ರ, ಮದುವೆ ಕ್ರಮಗಳು ಜಾನಪದವಲ್ಲವೆಂಬುದು ಅವರ ತರ್ಕ. ಹಾಗೆಯೇ ಅಕ್ಷರಸ್ಥ ಸಂಸ್ಕೃತಿಗಳಲ್ಲಿ ಮೌಖಿಕ ರೂಪದಲ್ಲಿ ವಹನಗೊಳ್ಳುವ ವಾಹನ ನಡೆಸುವ ವಿಧಾನದ ತಿಳಿವಳಿಕೆ, ಕುಂಚಗಳಿಂದ ಹಲ್ಲುಜ್ಜುವ ವಿಧಾನ ಇತ್ಯಾದಿಗಳನ್ನು ಅವರು ಜಾನಪದ ಎಂದು ಪರಿಗಣಿಸುವುದಿಲ್ಲ. ಈ ದೃಷ್ಟಿಯಿಂದ All folklore is orally transmitted but not all that is orally transmittad is folklore9 ಎಂಬ ಬಾಸ್ಕಮ್ ಅವರ ಮಾತು ಗಮನಿಸಬೇಕಾದುದು. ಇದರಿಂದ ಜಾನಪದದಿಂದ ಹೊರತಾದ ವಿಷಯಗಳೂ ಮೌಖಿಕ ಸಂಪ್ರದಾಯದಲ್ಲಿ ವಹನಗೊಳ್ಳುತ್ತವೆ ಎಂದಂತಾಯಿತು.

ಜಾನಪದವಲ್ಲದ ವಿಷಯಗಳೂ ಮೌಖಿಕ ಸಂಪ್ರದಾಯದಲ್ಲಿರುವುದರಿಂದ ಜಾನ ಪದ ಸ್ವರೂಪ ನಿರ್ಣಯಕ್ಕೆ ಮೌಖಿಕ ಸಂಪ್ರದಾಯ ಆಧಾರ ಸೂತ್ರವೆನಿಸುವುದಿಲ್ಲ. ಪ್ರೇಮ ಸಮಾಚಾರದ ಪತ್ರದ ಒಕ್ಕಣೆಗಳು, ಆಟೋಗ್ರಾಫ್‌ಗಳಂಥ ಲಿಖಿತ ಜಾನಪದ

ದಲ್ಲೂ ಮೌಖಿಕ ಸಂಪ್ರದಾಯಕ್ಕೆ ಮಹತ್ತ್ವವಿಲ್ಲ. ಇದೇ ರೀತಿಯಲ್ಲಿ ಶಾರೀರಿಕ ಚಲನೆಗಳು, ಜನಪದ ನೃತ್ಯಗಳು, ಆಟಗಳು, ಸಂಜ್ಞೆಗಳು ಮುಂತಾದವುಗಳಲ್ಲೂ ಕಂಠಸ್ಥ ಸಂಪ್ರದಾಯದ ಪಾತ್ರ ಏನೂ ಇಲ್ಲ. ನೋಡಿ ಅನುಕರಿಸುವುದರ ಮೂಲಕ ಇವನ್ನು ಸಾಧಿಸಲಾಗುತ್ತದೆ.10 ಆದ್ದರಿಂದ ಜಾನಪದವು ಕೇಳುವುದು–ನೆನಪಿಡುವುದು ; ನೋಡುವುದು–ಅನುಕರಣೆ ಮಾಡುವುದು—ಈ ಎರಡು ಸೂತ್ರಗಳನ್ನು ಅವಲಂಬಿಸಿರುತ್ತದೆ.11 ಹೀಗೆ ನೋಡಿದಾಗ ಜಾನಪದ ಜನಪದದ ಶ್ರುತಿಯೂ ಹೌದು, ಸ್ಮೃತಿಯೂ ಹೌದು. ಕರ್ಣಾಕರ್ಣಿಯಾಗಿ ಕೆಲವು ವಿಷಯಗಳು ಹರಿದು ಬಂದರೆ ನೆನಪಿನ ಮೂಲಕ, ಅನುಕರಣೆಯ ಮೂಲಕ ಕೆಲವು ವಿಷಯಗಳು ಸಾಗಿ ಬರುತ್ತವೆ.12

ಮಾನವಿಕ ವಿಜ್ಞಾನಗಳ ವಿಭಾಗದಲ್ಲೇ, ಜಾನಪದ ಅತ್ಯಂತ ವ್ಯಾಪಕವಾದ ವಿಷಯ. ಅದು ಯಾವುದೇ ಒಂದು ಸಾಂಸ್ಕೃತಿಕ ಸಮೂಹದ ಸಮಗ್ರ ಬದುಕನ್ನು ಕ್ರಮಬದ್ಧ ರೀತಿಯಲ್ಲಿ ಅಧ್ಯಯನ ಮಾಡುತ್ತದೆ. ಜಾನಪದ ಗ್ರಾಮಾಂತರ ಬದುಕಿಗೆ ಮಾತ್ರ ಸೀಮಿತವಾದುದಲ್ಲ. ಜನಪದ ವರ್ಗಗಳೆಂದರೆ ಗ್ರಾಮಾಂತರ ಜನರಷ್ಟೇ ಅಲ್ಲ. ಸಮಾನವಾದ ಅಂಶವನ್ನು ಹೊಂದಿರುವ ಯಾವ ಒಂದು ವರ್ಗವಾದರೂ ಒಂದು ಜನಪದ ವರ್ಗ (folk group) ಎನಿಸಿಕೊಳ್ಳುತ್ತದೆ. ಆದರೆ ಈ ವರ್ಗಕ್ಕೆ ಸೇರಿದ ಜನರಿಗೆ ಸಮಾನವಾದ ಪರಂಪರೆ ಇರಬೇಕು. ಈ ವರ್ಗದ ವ್ಯಕ್ತಿಗಳಿಗೆ ಪರಸ್ಪರ ಪರಿಚಯವಿಲ್ಲದಿದ್ದರೂ ಪ್ರತಿಯೊಬ್ಬನಿಗೂ ತನ್ನ ಪರಂಪರೆಯ ಬಗ್ಗೆ ತಿಳಿದಿರುತ್ತದೆ. ಈ ವರ್ಗದ ಜನರನ್ನು ಒಂದುಗೂಡಿಸುವ ಸಾಮಾನ್ಯ ಸೂತ್ರ ಒಂದು ವೃತ್ತಿಯಾಗಿರಬಹುದು, ಒಂದು ಧರ್ಮವಾಗಿರಬಹುದು ಅಥವಾ ಒಂದು ಭಾಷೆಯಾಗಿರಬಹುದು. ಒಂದು ವರ್ಗದಲ್ಲಿ ಇಬ್ಬರಿಗಿಂತ ಹೆಚ್ಚು ಜನರಿರಬಹುದು. ಇವರು ಒಂದೇ ಪರಂಪರೆಗೆ ಸೇರಿದವರಾಗಿರುತ್ತಾರೆ.13 ಒಂದು ಜನಪದ ವರ್ಗ ಒಂದೇ ಭೌಗೋಳಿಕ ಪರಿಸರದಲ್ಲಿ ನೆಲೆಸಬೇಕೆಂದೇನೂ ಇಲ್ಲ. ಭಾರತಾದ್ಯಂತ ಇರುವ ಹರಿಜನರು ಒಂದು ಜನಪದ ವರ್ಗವಾಗುತ್ತಾರೆ. ಇದೇ ರೀತಿಯಲ್ಲಿ ಒಂದೇ ವೃತ್ತಿಯುಳ್ಳ ಕಾರ್ಮಿಕರು, ಒಂದೇ ಧರ್ಮವುಳ್ಳ ತೊದವರು, ಒಂದೇ ಭಾಷೆಯನ್ನಾಡುವ ಕೊಡವರು ಒಂದೊಂದು ಜನಪದ ವರ್ಗಕ್ಕೆ ಸೇರುತ್ತಾರೆ. ನೌಕರಿಯಿಂದ ನಿವೃತ್ತಿ ಹೊಂದಿದ ಜನಗಳದೇ ಒಂದು ಜನಪದ ವರ್ಗವಾಗಬಹುದು. ಒಂದೇ ವಯಸ್ಸಿನ ಶಾಲಾ ಮಕ್ಕಳು ಅಥವಾ ಕಾಲೇಜು ವಿದ್ಯಾರ್ಥಿಗಳು ಒಂದೊಂದು ಜನಪದ ವರ್ಗವನ್ನು ರೂಪಿಸುತ್ತಾರೆ. ಅಷ್ಟೇ ಏಕೆ ಒಂದೊಂದು ಕುಟುಂಬವೂ ಒಂದೊಂದು ಜನಪದ ವರ್ಗವೆನಿಸಿಕೊಳ್ಳುತ್ತದೆ. ಈ ಪ್ರತಿಯೊಂದು ಜನಪದ ವರ್ಗಕ್ಕೂ ತನ್ನದೇ ಆದ ಜಾನಪದವಿರುತ್ತದೆ. ಆದ್ದರಿಂದ ಜಾನಪದ ಸರ್ವವ್ಯಾಪಿಯಾದದ್ದು ಎಂಬುದನ್ನು ಒಪ್ಪಿಕೊಳ್ಳಬೇಕು. ಅದರ ಕುರುಹುಗಳು ನಾಗರಿಕತೆಯ ತುತ್ತತುದಿಯನ್ನೇರಿದ ಪಟ್ಟಣವಾಸಿಗಳಲ್ಲೂ ಇರಲು ಸಾಧ್ಯ. ಇದನ್ನು ಮನಗಂಡೇ ಎಸ್ಪಿನೋಸ ಅವರು Folklore has its very deepest roots even among the people that have achieved the high

state of culture ಎಂದು ಹೇಳಿದ್ದಾರೆ.[14] ವಿದ್ಯಾರ್ಥಿಗಳು, ಕಾರ್ಮಿಕರು, ವಕೀಲರು, ಟ್ಯಾಕ್ಸಿ ಅಥವಾ ಆಟೋ ಚಾಲಕ ಸಮೂಹ ಎಲ್ಲರಲ್ಲೂ ಜಾನಪದ ಬೇರು ಬಿಟ್ಟಿರುತ್ತವೆ. ಅದು ಕೇವಲ ಹಳ್ಳಿಗರ, ಮೂಲನಿವಾಸಿಗಳ ಮತ್ತು ಅಶಿಕ್ಷಿತರ ಬದುಕಿನ ಅವಲಂಬನೆಯನ್ನು ಪಡೆಯಬೇಕಾದ ಅನಿವಾರ್ಯತೆ ಇಲ್ಲ. ನಾಗರಿಕನಾದವನು ಸುಸಂಸ್ಕೃತನೆನಿಸಿದವನು ಅದರ ಸೆಳೆತಕ್ಕೆ ಒಳಗಾದರೆ ಆಶ್ಚರ್ಯ ಪಡಬೇಕಾಗಿಲ್ಲ.[15]

ಮೊದಲಿಗೆ, ಜಾನಪದವು ಅತ್ಯಂತ ಪ್ರಾಚೀನಕಾಲದಲ್ಲಿ ಪ್ರಚಲಿತವಿದ್ದ ಅಂಶವೆಂದೂ, ಈಗ ಅದು ನಾಗರಿಕತೆಯಿಂದ ನಶಿಸಿಹೋಗುತ್ತಿದೆಯೆಂಬ ಭ್ರಮೆಯೂ ಇತ್ತು.[16] ಹಳೆಯದು ಮಾತ್ರ ಜಾನಪದ ಎಂಬ ಪರಿಕಲ್ಪನೆಯಿಂದ ಅನೇಕರು ಇಂದಿಗೂ ಜಾನಪದವನ್ನು ಪ್ರಾಚೀನ ಸಂಸ್ಕೃತಿಯ ಅತ್ಯುತ್ತಮ ಭಾಗವೆಂದು ಪ್ರಶಂಸಿಸುತ್ತ ಅದನ್ನು ಸಂರಕ್ಷಿಸಬೇಕೆಂಬ ಕಳಕಳಿ ತೋರುತ್ತಿದ್ದಾರೆ. ವಾಸ್ತವವಾಗಿ, ಜಾನಪದ ನಶಿಸಿ ಹೋಗುವಂಥದಲ್ಲ; ಉಳಿಸಬೇಕೆಂದು ಅದು ಎಂದೂ ಬಯಸುವುದಿಲ್ಲ. ಈ ಸತ್ಯವನ್ನು ಕಂಡುಕೊಂಡ ಸಿ. ಎಫ್. ಪಾಟರ್ ಅವರು Folklore is a lively fossil which refuses to die ಎಂದು ಘೋಷಿಸಿ ಜಾನಪದದ ಮೂಲಭೂತ ಲಕ್ಷಣವನ್ನು ಸ್ಪಷ್ಟಪಡಿಸಿದ್ದಾರೆ.[17] ಸಹಜವಾಗಿ ಕಾಲಕಾಲಕ್ಕೆ ಪ್ರತಿಯೊಂದು ಜನಪದ ವರ್ಗದಲ್ಲಿಯೂ ಜನಪದದ love ಸೃಷ್ಟಿಯಾಗುತ್ತದೆ; ಈ ಸೃಷ್ಟಿಕ್ರಿಯೆ ನಿರಂತರವಾದುದು. For the modern student the subject Folklore is a living and inextingnishable force, ebbing and flowing with the rhythm of life and carrying in to the present the traditions of the past, constantly adapting into the changing conditions of time.[18] ಈ ಮಾತಿನಂತೆ ಜಾನಪದ ಹಳೆಯ ತಲೆಮಾರಿನ ಪರಂಪರೆಯನ್ನು ಹೊಸ ತಲೆಮಾರಿಗೆ ತಲುಪಿಸುವ ಕಾರ್ಯವನ್ನು ನಿರ್ವಹಿಸುವುದರ ಜೊತೆಗೆ ಹೊಸ ಪರಿಸರಕ್ಕನುಗುಣವಾಗಿ ಹೊಸತನ್ನು ಸೃಷ್ಟಿಸುವ ಕಾರ್ಯವನ್ನೂ ಮಾಡುತ್ತದೆ. ಪರಿಸರ ಬದಲಾದಂತೆ ಅದು ಕೂಡ ಬದಲಾಗುತ್ತದೆ. ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಂಡು ಆಗುತ್ತಿರುವ ವ್ಯತ್ಯಾಸವನ್ನು ಸ್ವೀಕರಿಸುವ ಜಾನಪದ ಅಂಶಗಳು ಉಳಿದು ಬರುತ್ತವೆ. ಅತಿ ಮಡಿವಂತಿಕೆಯಿರುವ ಆಚರಣೆಯಲ್ಲಿ ಬಿಗಿ ಇರುವ, ಬದಲಾವಣೆಗೆ ತಲೆಬಾಗದ ಜಾನಪದ ಅಂಶಗಳು ಇಲ್ಲವಾಗುತ್ತವೆ. ಅಥವಾ ಅವುಗಳ ಜಾಗದಲ್ಲಿ ಹೊಸ ಅಂಶಗಳು ತಲೆ ಎತ್ತುತ್ತವೆ. ವ್ಯಕ್ತಿಯೊಬ್ಬ ಹುಟ್ಟಿದಾಗ ಹೊಸ ಜಾನಪದ ಅಂಶವೊಂದು ಸೃಷ್ಟಿಯಾದರೆ ವ್ಯಕ್ತಿಯೊಬ್ಬ ಸತ್ತಾಗ ಒಂದು ಜಾನಪದ ಅಂಶ ಸಾಯುತ್ತದೆ. ಜಾನಪದ ಅಂಶಗಳು ನಿತ್ಯ ಜನನ ನಿತ್ಯ ಮರಣ ಪಡೆದಂತಹವುಗಳು.[19] ಜೀವಂತಿಕೆಯೇ ಜಾನಪದದ ಲಕ್ಷಣ. ಒಂದು ರೂಪ ಕಣ್ಮರೆಯಾದರೂ ಇನ್ನೊಂದು ರೂಪದಲ್ಲಿ ಅದು ತಲೆ ಎತ್ತಿಕೊಳ್ಳುತ್ತದೆ, ಬೆಳೆಯುತ್ತದೆ, ಉಳಿಯುತ್ತದೆ.[20] ಜಾನಪದ ಸದಾ ಪರಿವರ್ತನಾಶೀಲವಾದುದು, ಜೀವಂತವಾದುದು, ಹೊಸ ಹೊಸ ಅಂಶ

ಗಳನ್ನು ಕಾಲಕಾಲಕ್ಕೆ ಸ್ವೀಕರಿಸುತ್ತ ಬೆಳೆಯುತ್ತದೆ ಎಂಬುದನ್ನು ಮೋರಿಯಸ್‌ಬಾರ್ಬ್ಯೆ ಅವರು ಸ್ಪಷ್ಟಮಾತುಗಳಲ್ಲಿ ಹೀಗೆ ಹೇಳಿದ್ದಾರೆ—Whenever in many callings the knowledge, experience, wisdom, skiil, the habits and practices of the past are handed down by example or spoken word, by the older to the new generations without reference to book, print or school teacher; then we have folklore in its own perennial domain at work as ever alive and shifting, always apt to grasp and assimlate new elements on its way.[21] ಈ ಕಾರಣದಿಂದಾಗಿ ಜಾನಪದ ಎಂಬುದು ಕೇವಲ ಹಳೆಯ ವಸ್ತು ವಿಶೇಷಗಳಷ್ಟೇ ಅಲ್ಲ; ಹಳ್ಳಿಗಾಡಿನದು ಮಾತ್ರ ಅಲ್ಲ; ನಗರ ಜೀವನದಲ್ಲೂ ಅದರ ಸೆಲೆಯನ್ನು, ನೆಲೆಯನ್ನು ಗುರುತಿಸಬಹುದು ಎಂದು ಅಭಿಪ್ರಾಯಪಟ್ಟಿರುವ ಆಧುನಿಕ ವಿದ್ವಾಂಸರ ನಿಲುವನ್ನು ಒಪ್ಪಬೇಕಾಗುತ್ತದೆ. ಅಂತೆಯೇ ಜಾನಪದ ಬರಿಯ ಹಳೆಯ ಉಳಿಕೆ, ಹಿಂದಿನ ತಲೆಮಾರುಗಳ ಸಮೃದ್ಧ ಆಸ್ತಿ ಎಂಬ ನಿಲುವನ್ನು ಹೊಂದಿರುವ ಅಲ್ಫ್ರೆಡ್‌ನೆಟ್[22], ಕರ್ವಾಲೊ ನೆಟೊ[23] ಅವರ ಅಭಿಪ್ರಾಯಗಳಿಗೆ ಹೆಚ್ಚು ಮಹತ್ತ್ವ ನೀಡಬೇಕಾಗಿಲ್ಲ. ಒಟ್ಟಿನಲ್ಲಿ Folklore is an echo of the past, but at the same time it is also the vigorous voice of the present.[24] ಜಾನಪದವು ಜೀವಂತ ನಿಧಿ. ಆದ್ದರಿಂದ ಅದನ್ನು ಕೇವಲ ಪ್ರಾಚೀನತೆಯ ದೃಷ್ಟಿಯಿಂದ ನೋಡುವುದಾಗಲೀ ಅದಕ್ಕೆ ಪ್ರಾಚೀನತ್ವವನ್ನು ಆರೋಪಿಸುವುದಾಗಲೀ ಸರಿಯಲ್ಲ. ಈ ದೃಷ್ಟಿಯಿಂದ Many of the customs and crafts and works of art are still functional in a sense tha they play a significant part in the isolated folk who preserve them[25] ಎಂಬ ಅಭಿಪ್ರಾಯ ಗಮನಾರ್ಹ.

ಅಡಿ ಟಿಪ್ಪಣಿಗಳು

1. ನಾಯಕ, ಹಾ. ಮಾ. (ಡಾ.)., ಜಾನಪದ ಸ್ವರೂಪ, 1971, ಪು. 16
2. Kenneth and Mary Clarke, *Introducing Folklore*, 1966, p. 3.
3. Maria Leach (Ed.); *Standard Dictionary of Folklore, Mythology and Legend*, 1949, p. 398

4. ಈ ವಿದ್ವಾಂಸರಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿರುವ ಭಿನ್ನಾಭಿಪ್ರಾಯಗಳನ್ನು ಕುರಿತು ಡಾ. ಜೀ.ಶಂ. ಪರಮಶಿವಯ್ಯನವರು ತಮ್ಮ ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ನೋಡಿ: ಪು. 11–16

5. ಪರಮಶಿವಯ್ಯ ಜೀ.ಶಂ. (ಡಾ.) 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು,' 1979, ಪು. 5

6. ನಾಯಕ ಹಾ. ಮಾ. (ಡಾ.), ಜಾನಪದ ಸ್ವರೂಪ, 1971, ಪು. 37

7. Alan Dundes (Ed.), *The Study of folklore*, 1965, p. ,2

8. Maria Leach (Ed); *Standard Dictionary of Folklore Mythology and Legend*, 1949, p. 398

9. Bascom, W. R , in his article Folklore and Anthropology–*The Study of Folklore*, 1965, p. 28

10. ಪರಮಶಿವಯ್ಯ, ಜೀ.ಶಂ. (ಡಾ.), ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, 1979, ಪು. 17

11. Kenneth and Mary Clarke. *Introducing Folklore* 1966, p. 1

12. ಪರಮಶಿವಯ್ಯ, ಜೀ.ಶಂ. (ಡಾ.), ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, 1979, ಪು. 47

13. Alan Dundes (Ed.); *The Study of Folklore*, 1965, pp 2-3

14. Maria Leach (Ed.), *Standard Dictionary of Folklore: Mythology and Legend*, p. 399

15. ಪರಮಶಿವಯ್ಯ ಜೀ.ಶಂ. (ಡಾ.), ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, 1979, ಪು. 10

16. *Encyclopaedia Britannica*, 1964, vol. 9, p-520

17. Maria Leach (Ed): *Standard Dictionary of Folklore, Mythology and Legend* p. 48

18. *Encyclopaedta Britannica*, 1964, vol. 9, p. 520

19. ರಂಗಾರೆಡ್ಡಿ ಕೋಡಿರಾಂಪುರ, ಲಿಖಿತ ಜಾನಪದ, ಗೌರಿಬಿದನೂರು, 1979, ಪು. 2

20. ಪರಮಶಿವಯ್ಯ ಜೀ.ಶಂ. (ಡಾ.), ಜಾನಪದ–ಕೆಲವು ಮುಖಗಳು, ಬೆಂಗಳೂರು, 1975, ಪುಟ. 5

21. Maria Leach (Ed.), *Standard Dictionary of Folklore, Mythology and Legend*, p-398

22. Dorson R. M., *Peasant customs and Savage Myth*, 1968, p. 341

23. Paulo de Carvalho Neto: *The Concept of Folklore*, 1971, p. 80

24. Quoted, Dorson R. M.: *Folklore and Folklife*, p. 17

25. Tristram Coffin iii (Ed): *American Folklore*, p. 8

ಈಚಿನ ವರ್ಷಗಳಲ್ಲಿ ಜಾನಪದದ ಬಗ್ಗೆ ಆಸಕ್ತಿ, ಉತ್ಸಾಹಗಳು ಹೆಚ್ಚು ಹೆಚ್ಚಾಗಿ ತೋರುತ್ತಿರುವುದರಿಂದ, ಇನ್ನು ಈ ಕ್ಷೇತ್ರ ಹಿಂದುಳಿಯಲಾರದೆಂದು ಭರವಸೆ ತಾಳ ಬಹುದೇನೋ. ಈ ಭರವಸೆ ಸಫಲವಾಗಬೇಕಾದರೆ ಜಾನಪದ ಅಧ್ಯಯನವನ್ನು ಪಂಡಿತ ವಿಷಯವೆಂದು ನೋಡಬೇಕು ; ಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಬೇಕು. ಆಗ ಮಾತ್ರ ಎಲ್ಲ ಸಭೆ, ಸಮ್ಮೇಳನ, ಸೆಮಿನಾರುಗಳು ಸಫಲವಾಗುತ್ತವೆ. ವೈಜ್ಞಾನಿಕ ದೃಷ್ಟಿಯಿಂದ ವಿಷಯ ಪರಿಶೀಲನೆಗೆ ತೊಡಗದೆ ಹೋದರೆ ಜಾನಪದ "ಹಳ್ಳಿ ಹಾಡು ಗಳಂತೆ ಕಂತೆ"ಯಾಗಿಯೇ ಉಳಿಯುತ್ತದೆ. ಇಂದು ಗೋಡೆಗಳನ್ನು ಕಟ್ಟುತ್ತಿರುವ ಮನುಷ್ಯ ಒಂದು ಕಾಲದಲ್ಲಿ ಸೇತುವೆಗಳನ್ನು ನಿರ್ಮಿಸುತ್ತಿದ್ದನೆಂಬ ಸತ್ಯ ಎಂದೂ ನಮ್ಮ ಗಮನಕ್ಕೆ ಬರುವುದಿಲ್ಲ.

— ಡಾ. ಹಾ. ಮಾ. ನಾಯಕ
(ಜಾನಪದ ಸ್ವರೂಪ, ಪು. 49)

ಕೆ. ಎಸ್. ರಾಮಕೃಷ್ಣರಾವ್

ಅರಿಸ್ಟಾಟಲ್

ಗ್ರೀಕ್ ತತ್ವಶಾಸ್ತ್ರಜ್ಞರಲ್ಲಿ ಅತ್ಯಂತ ಬುದ್ಧಿಶಾಲಿ ಎನಿಸಿದ ಅರಿಸ್ಟಾಟಲ್ ಕ್ರಿ.ಪೂ. 384 ರಲ್ಲಿ ಜನಿಸಿದನು. ಆತನ ಬಹುಮುಖ ಪ್ರತಿಭೆಯು ಅವನು ನಿರೂಪಿಸಿದ ತತ್ವಗಳಲ್ಲಿ ಮತ್ತು ನೀತಿಶಾಸ್ತ್ರದಲ್ಲಿ ಪ್ರತಿಬಿಂಬಿತವಾಗಿದೆ. ಆತನು ಸತ್ಯಪ್ರೇಮಿಯು, ನಿಷ್ಪಕ್ಷಪಾತವಾದ ವಿಚಾರವಾದಿಯು, ಹಲವಾರು ವಿಷಯಗಳಲ್ಲಿ ಪರಿಣಿತನು, ತಜ್ಞನೂ ಆಗಿದ್ದನು. ಆತನು ತರ್ಕಶಾಸ್ತ್ರ, ಆಧ್ಯಾತ್ಮಶಾಸ್ತ್ರ, ವಾದವಿದ್ಯೆ, ಭೌತಶಾಸ್ತ್ರ, ಜೀವಶಾಸ್ತ್ರ, ಮನಶ್ಯಾಸ್ತ್ರ, ಅರ್ಥಶಾಸ್ತ್ರ, ನೀತಿಶಾಸ್ತ್ರ ಇವೇ ಮುಂತಾದ ವಿಷಯಗಳಲ್ಲಿ ವಿಶೇಷ ಜ್ಞಾನ ಪಡೆದಿದ್ದನಲ್ಲದೆ ಅವುಗಳ ಬಗ್ಗೆ ಹಲವಾರು ಗ್ರಂಥಗಳನ್ನು ಬರೆದಿರುಹನು.

ತನ್ನ ಗುರುವಾದ ಪ್ಲೇಟೋವಿನ ಸಜೀವವಾದ ಮತ್ತು ಆದರ್ಶವಾದಗಳನ್ನು ಅರಿಸ್ಟಾಟಲ್ ಒಪ್ಪಿಕೊಂಡರೂ ಈ ಪ್ರಪಂಚವು ಅಸತ್ಯ. ಸತ್ಯವಾದ ಸಾಮಾನ್ಯಗಳು ತಮ್ಮದೇ ಆದ ಬೇರೊಂದು ಪ್ರಪಂಚದಲ್ಲಿರುತ್ತವೆ ಎಂಬ ಪ್ಲೇಟೋವಿನ ಅಭಿಪ್ರಾಯವನ್ನು ಅವನು ಅಂಗೀಕರಿಸಲಿಲ್ಲ. ಅರಿಸ್ಟಾಟಲನ ಪ್ರಕಾರ ಸಾಮಾನ್ಯಗಳೆಲ್ಲವೂ ಇದೇ ಪ್ರಪಂಚದಲ್ಲಿದ್ದು ಇಲ್ಲಿಯ ವಸ್ತುಗಳಿಗೆ ಆಕಾರವನ್ನು, ಜೀವವನ್ನು ನೀಡುತ್ತವೆ. ನಮ್ಮ ಅನುಭವದ ಪ್ರಪಂಚವು ನಂಬಲರ್ಹವಲ್ಲದ ಮಿಥ್ಯಾ ಪ್ರಪಂಚವಲ್ಲ. ಅದು ನಾವು ಅನುಭವಿಸಿ ತಿಳಿದುಕೊಳ್ಳಬಹುದಾದಂತಹ ಒಂದು ಸತ್ಯ. ಅನುಭವವೇ ನಮ್ಮ ಜ್ಞಾನದ ಮೂಲವಾಗಿದ್ದು ಅದರ ಗುರಿಯು ಪರಮತತ್ವಗಳನ್ನು ತಿಳಿಯುವುದರಲ್ಲಿ ಅಡಗಿದೆ. ಇಷ್ಟಾದರೂ ಸಮಂಜಸವಾದ ಜ್ಞಾನವು ಕೇವಲ ವಸ್ತು ಸಂಪರ್ಕದಿಂದ ಮಾತ್ರ ಬರಲಾರದು. ವಸ್ತುಗಳನ್ನು ಅವುಗಳ ನೈಜ ಸ್ವರೂಪ ಮತ್ತು ಮೂಲಗಳೊಂದಿಗೆ ತಿಳಿದಾಗ ಮಾತ್ರ ಅದು ಸರಿಯಾದ ಜ್ಞಾನವಾಗುತ್ತದೆ. ವಸ್ತುಗಳ ಬಗ್ಗೆ ಜ್ಞಾನವನ್ನು ಗಳಿಸುವ ನಮ್ಮ ಪ್ರಯತ್ನವು ಪ್ರಾರಂಭಿಕವಾಗಿ ಅಧ್ಯಾತ್ಯಶಾಸ್ತ್ರರೂಪದಲ್ಲಿರುತ್ತದೆ. ಈ ಅಧ್ಯಾತ್ಮಶಾಸ್ತ್ರವು ವಸ್ತುಗಳ ಮೂಲ ಅಸ್ತಿತ್ವದ ಬಗ್ಗೆ ತಿಳುವಳಿಕೆಯನ್ನು ಕೊಟ್ಟರೆ ಇತರ ವಿಜ್ಞಾನಗಳು ಅದೇ ಸತ್ಯದ ವಿಭಾಗಗಳ ಅರಿವನ್ನು ಕೊಡುತ್ತದೆ. ಅರಿಸ್ಟಾಟಲನ ತಾತ್ವಿಕ ವಿಚಾರಗಳನ್ನು ಆತನ ತರ್ಕಶಾಸ್ತ್ರ ಅಧ್ಯಾತ್ಮ ಶಾಸ್ತ್ರ,

ಕಾರ್ಯಕಾರಣ ಸಿದ್ಧಾಂತ, ಮನಶ್ಶಾಸ್ತ್ರ ಮತ್ತು ನೀತಿಶಾಸ್ತ್ರಗಳ ಮುಖಾಂತರ ತಿಳಿಯಬಹುದು.

ತರ್ಕಶಾಸ್ತ್ರ

ತರ್ಕಶಾಸ್ತ್ರವು ಅಧ್ಯಾತ್ಮ ಶಾಸ್ತ್ರದ ಆಧಾರವಾದ ನಮ್ಮ ವಿಚಾರದ ಮೊದಲ ಹಂತವಾಗಿದೆ. ಜ್ಞಾನವನ್ನು ಹೇಗೆ ಮತ್ತು ಯಾವ ಪದ್ಧತಿಯನ್ನು ಅನುಸರಿಸಿ ಪಡೆಯ ಬೇಕು ಎಂಬುದನ್ನು ತಿಳಿಸುವುದು ತರ್ಕಶಾಸ್ತ್ರದ ಮುಖ್ಯ ಗುರಿ. ಸತ್ಯದ ನಿರೂಪಣೆ ಯನ್ನು ಕೊಡಲು ಪ್ರಯತ್ನಿಸಿದ ಅರಿಸ್ಟಾಟಲ್ ಸತ್ಯವೆನ್ನುವುದು ಸ್ವಯಂಸಿದ್ಧವಾದ ಅಂಶವಾಗಿದ್ದು ಅದು ಸತ್ಯವಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ ಎನ್ನುತ್ತಾನೆ. ಅಂದರೆ ಅವನ ಅಭಿಪ್ರಾಯದಲ್ಲಿ ಸತ್ಯ ಹೇಗಿದೆ ಎಂಬುದನ್ನು ಮಾತ್ರ ತಿಳಿಸಿದರೆ ಸಾಲದು. ಅದೇ ಹೇಗೆ ಸತ್ಯವಾಗಿದೆ, ಬೇರೊಂದು ಏಕೆ ಆಗಿಲ್ಲ ಎಂಬುದನ್ನು ತಿಳಿಯಪಡಿಸಬೇಕು. ಈ ವಾದವನ್ನು ಸಮರ್ಥಿಸಲು ಅರಿಸ್ಟಾಟಲ್ ನಿಗಮನದ ಮುಖ್ಯ ರೂಪವಾದ ಸಿಲೋಜಿಸಮ್, (Syllogism)ನ ಸಹಾಯವನ್ನು ಪಡೆಯುತ್ತಾನೆ. ಸಮಂಜಸವಾದ ವಿವರಣೆಯು ಸಿಲೋಜಿಸಮ ರೂಪದಲ್ಲಿರಬೇಕೆಂದು ಅರಿಸ್ಟಾಟಲನ ಅಭಿಮತ. ಸಿಲೋಜಿಸಮ ಆಧಾರ ವಾಕ್ಯಗಳು ಸಾರ್ವತ್ರಿಕವಾಗಿದ್ದು ಕೆಲವು ಗೃಹೀತ ತತ್ವಗಳನ್ನು ಒಳಗೊಂಡಿರುತ್ತದೆ. ಈ ಗೃಹೀತ ತತ್ವಗಳು ಸ್ವತಃ ಪ್ರಾಮಾಣ್ಯವಾದವುಗಳಾಗಿದ್ದು ಆತ್ಮದ ವಿಚಾರ ಶೀಲ ಭಾಗದಲ್ಲಿ ಅಡಗಿರುತ್ತದೆ. ಈ ತತ್ವಗಳು ವಿಚಾರದ ಸಹಾಯದಿಂದ ನೇರವಾಗಿ ಮತ್ತು ಆಂತರಿಕವಾಗಿ ತಿಳಿಯಲ್ಪಡುವ ಪ್ರತಿಭಾಗಗಳ ರೂಪಗಳಾಗಿವೆ. ತರ್ಕಶಾಸ್ತ್ರದ ಮತ್ತೊಂದು ವಿಭಾಗವಾದ ನಿಗಮನವು ಸಿಲೋಜಿಸಮಗೆ ಪೂರಕವಾದ ಒಂದು ವಿಚಾರ ಕ್ರಮವಾಗಿದೆ. ವಿಜ್ಞಾನದ ದೃಷ್ಟಿಯಿಂದ ವಿಗಮನವು ವಿಜ್ಞಾನಕ್ಕೆ ಅವಶ್ಯಕವಾದ ಸಾಮಾನ್ಯ ನಿಯಮಗಳನ್ನು ನೀಡುವ ಒಂದು ಕ್ರಿಯೆ. ನಿಗಮನವು ಪ್ರಾರಂಭಿಸುವ ಮೂಲ ಹಾಗೂ ಗೃಹೀತ ವಿಚಾರಗಳು ಪ್ರತಿಭಾನದ ಸ್ವರೂಪಗಳಲ್ಲಿದ್ದರೂ ಅವುಗಳಿಗೆ ವಾಸ್ತವಿಕತೆ ಬರಬೇಕಾದರೆ ವಿಗಮನದ ಸಹಕಾರ ಬೇಕಾಗುತ್ತದೆ. ಆದುದರಿಂದಲೇ ಅರಿಸ್ಟಾಟಲನು ವಿಗಮನ—ನಿಗಮನಗಳೆರಡನ್ನು ಒಂದುಗೂಡಿಸಿ ಅವುಗಳ ನಡುವೆ ಸಾಮರಸ್ಯವನ್ನು ಕಲ್ಪಿಸುತ್ತಾನೆ. ಅನುಭವವಿಲ್ಲದೆ ಜ್ಞಾನವಿಲ್ಲ ಎಂಬ ಮಾತು ಸತ್ಯ. ಆದರೆ ಕೇವಲ ಅನುಭವದ ಆಧಾರವನ್ನು ಹೊಂದಿರುವ ಜ್ಞಾನವು ನಿರ್ದಿಷ್ಟತೆಯಿಂದ ಕೂಡಿರದೇ ಕೇವಲ ಸಂಭಾವ್ಯವಾಗುತ್ತದೆ. ಅನುಭವ ಜ್ಞಾನಕ್ಕೆ ನಿರ್ದಿಷ್ಟತೆ ಬರ ಬೇಕಾದರೆ ಅದು ಗೃಹೀತ ನಿಯಮಗಳನ್ನು ಆಧಾರವಾಗಿ ಪಡೆದಿರಬೇಕು. ಅಂದರೆ ಜ್ಞಾನ ಎಂಬ ಸಂಪೂರ್ಣ ಸತ್ಯವು ಒಂದು ಕಡೆಯಲ್ಲಿ ಗೃಹೀತ ತತ್ವಗಳ ಆಧಾರವನ್ನು ಮತ್ತೊಂದು ಕಡೆ ಅನುಭವ ಸತ್ಯವನ್ನು ಪ್ರತಿಪಾದಿಸುವಂತಿರಬೇಕು.

ಅಧ್ಯಾತ್ಮ ಶಾಸ್ತ್ರ

ಅರಿಸ್ಟಾಟಲನ ಪ್ರಕಾರ "ಸತ್ಯ"ದ ನೈಜಸ್ವರೂಪವನ್ನು ಪಡೆಯಲು ಕೆಲವು ಪದಾರ್ಥಗಳ ಸಹಾಯ ಅಗತ್ಯವಾಗಿದೆ. ಅಂತಹ ಪದಾರ್ಥಗಳಲ್ಲಿ ದ್ರವ್ಯ, ಗುಣ, ಪ್ರಮಾಣ, ಸಂಬಂಧ, ದೇಶ, ಕಾಲ, ಚಟುವಟಿಕೆ, ಜಡತ್ವ ಮುಂತಾದುವುಗಳು ಪ್ರಮುಖವಾದವುಗಳಾಗಿವೆ. ಇವುಗಳ ಸಹಾಯವಿಲ್ಲದೆ ಸತ್ಯವೇನೆಂದು ಅರಿಯಲು ಸಾಧ್ಯವಿಲ್ಲ. ಇವು ಕೇವಲ ವಿಚಾರದ ರೂಪಗಳಾಗಿರದೆ ಅಥವಾ ಕಲ್ಪನೆಗಳಾಗಿರದೆ ಸತ್ಯದಲ್ಲೇ ಅಡಗಿರುವ ಅಂಶಗಳಾಗಿವೆ. ಈ ಅಂಶಗಳನ್ನು ಸತ್ಯದಿಂದ ತಾತ್ವಿಕವಾಗಿ ಮಾತ್ರ ಬೇರ್ಪಡಿಸಬಹುದಲ್ಲದೆ ಭೌತಿಕವಾಗಿ ಬೇರ್ಪಡಿಸಲು ಸಾಧ್ಯವಿಲ್ಲ. ಈ ಪದಾರ್ಥಗಳಲ್ಲೆಲ್ಲಾ ಅತ್ಯಂತ ಪ್ರಮುಖವಾದುದು ಮತ್ತು ಪ್ರಧಾನವಾದುದು "ದ್ರವ್ಯ". ಉಳಿದ ಎಲ್ಲಾ ಪದಾರ್ಥಗಳು ದ್ರವ್ಯವನ್ನು ಅವಲಂಬಿಸಿರುತ್ತವೆ. ಈ ದ್ರವ್ಯದ ಬಗ್ಗೆ ಸ್ಪಷ್ಟವಾದ ಮತ್ತು ಸಂಪೂರ್ಣವಾದ ಜ್ಞಾನವನ್ನು ಪಡೆಯುವುದೇ ವಿಜ್ಞಾನದ ಗುರಿಯಾಗಿದೆ. ಈ ಗುರಿಯನ್ನು ತಲುಪಲು ಮಾಡುವ ಪ್ರಯತ್ನವನ್ನೇ ಅರಿಸ್ಟಾಟಲ್ ಅಧ್ಯಾತ್ಮ ಶಾಸ್ತ್ರ ಎಂದು ಕರೆದಿದ್ದಾನೆ.

ದ್ರವ್ಯದ ವಿವರಣೆಯಲ್ಲಿ ಅರಿಸ್ಟಾಟಲ್‌ನ ಅಭಿಪ್ರಾಯವು ಪ್ಲೇಟೋನ ಅಭಿಪ್ರಾಯದಿಂದ ತೀರ ಭಿನ್ನವಾಗಿದೆ. ಪ್ಲೇಟೋನ ಪ್ರಕಾರ ದ್ರವ್ಯ ಎನ್ನುವುದು ತನ್ನದೇ ಆದ ಪ್ರಪಂಚದಲ್ಲಿದ್ದು ಸ್ವಸತ್ಯವನ್ನು ಹೊಂದಿರುವ "ಸಾಮಾನ್ಯ"ವಾಗಿದೆ. ಈ ಸಾಮಾನ್ಯವು ಅದರ ತದ್ರೂಪವನ್ನು ಹೊಂದಿರುವ ಪ್ರಾಪಂಚಿಕ ವಸ್ತುಗಳಿಂದ ಸಂಪೂರ್ಣವಾಗಿ ಬೇರೆಯಾದುದಾಗಿದೆ. ಪ್ಲೇಟೋ ಸಾಮಾನ್ಯಗಳಿಗೆ ತಮ್ಮದೇ ಆದಂತಹ ಒಂದು ಪ್ರಪಂಚವನ್ನು ನಿರ್ಮಿಸಿದ್ದು ಆ ಪ್ರಪಂಚ ಮಾತ್ರ ಸತ್ಯವಾದದ್ದು ಮತ್ತು ಅದರ ಪ್ರತಿಬಿಂಬವಾದ ಈ ಪ್ರಪಂಚವು ಅಸತ್ಯವೆಂದು ವಾದಿಸಿದ್ದಾನೆ. ಅರಿಸ್ಟಾಟಲ್ ಈ ವಾದವನ್ನು ನಿರಾಕರಿಸುತ್ತಾನೆ. ಅವನ ಪ್ರಕಾರ ದ್ರವ್ಯ ಎನ್ನುವುದು ಒಂದು ವಿಶಿಷ್ಟ ವಸ್ತು. ಅದು ಇತರ ಅಂಶಗಳಿಗೆ (ಗುಣಗಳಿಗೆ) ಆಧಾರವಾದುದಾಗಿದೆ. ಪ್ಲೇಟೋ ನಿರೂಪಿಸಿರುವ ಸಾಮಾನ್ಯವು ಅಥವಾ ರೂಪವು ವಸ್ತುವಿನಿಂದ ಬೇರೆಯಾದ್ದುದಾಗಿದೆ. ಆದರೆ ಅರಿಸ್ಟಾಟಲನ ದೃಷ್ಟಿಯಲ್ಲಿ ಸಾಮಾನ್ಯ ಅಥವಾ ರೂಪವು ವಸ್ತುವಿನಿಂದ ಬೇರ್ಪಟ್ಟಿರದೆ ಸಂಯೋಜಿತವಾಗಿವೆ. ವಸ್ತುವಿಲ್ಲದೆ ರೂಪವಿಲ್ಲ, ರೂಪವಿಲ್ಲದೆ ವಸ್ತುವಿಲ್ಲ ಎಂದು ಅರಿಸ್ಟಾಟಲನ ವಾದ. ರೂಪ ಅಥವಾ ಆಕಾರ ಮತ್ತು ವಸ್ತುಗಳು ಪರಸ್ಪರ ಅವಲಂಬಿಗಳಾಗಿದ್ದು ಒಂದನ್ನೊಂದು ಎಂದೂ ಬಿಟ್ಟಿರದ ಅಂಶಗಳಾಗಿವೆ. ನಿತ್ಯವೂ ಬದಲಾವಣೆ ಹೊಂದುತ್ತಿರುವ ಹಾಗೂ ಪ್ರತ್ಯಕ್ಷ ಪ್ರಮಾಣಕ್ಕೆ ಸಿಗುವ ವಸ್ತುಗಳು ಯಾವ ಉದ್ದೇಶವೂ ಇಲ್ಲದ ಭೌತ ವಸ್ತುಗಳಲ್ಲ. ಪ್ರತಿಯೊಂದು ವಸ್ತುವಿನ ಹಿಂದೆಯೂ ಆ ವಸ್ತುವನ್ನು ನಿರ್ದೇಶಿಸುವ ಮತ್ತು ಅದನ್ನು ಒಂದು ಉದ್ದೇಶದ ಕಡೆ ಕೊಂಡೊಯ್ಯುವ ರೂಪ (ಆಕಾರ)ವೊಂದು ಇದ್ದೇ ಇದೆ. ಪ್ಲೇಟೋ ಪ್ರಪಂಚದ

ವಸ್ತುಗಳನ್ನು ಸಾಮಾನ್ಯಗಳ ಮುದ್ರೆಗಳೆಂದು ಪರಿಗಣಿಸಿದ್ದರೆ ಅರಿಸ್ಟಾಟಲ್ ಅವುಗಳನ್ನೇ ಸತ್ಯ ವಸ್ತುಗಳೆಂದು ಪರಿಗಣಿಸುತ್ತಾನೆ. ಆದರೂ ಆ ವಸ್ತುಗಳು ಅನುಭವದ ದೃಷ್ಟಿಯಿಂದ ಮಾತ್ರ ಸತ್ಯ. ಅಂದರೆ ಅವು ತೋರಿಕೆಯ ಸತ್ಯಗಳಾಗಿದ್ದು ಅವುಗಳ ನೈಜ ಸತ್ಯತೆ ಮತ್ತು ಪರಿಪೂರ್ಣತೆ ಅವುಗಳ "ಗುರಿ"ಯಾದ ಪರಿಪೂರ್ಣ ರೂಪದಲ್ಲಿ ಅಡಗಿರುತ್ತದೆ. ವಾಸ್ತವಿಕ ಪ್ರಪಂಚದ ವಸ್ತುಗಳು ಅಸಂಖ್ಯಾತವಾಗಿದ್ದು ಅವು ಆರೋಹಣ ಕ್ರಮದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟಿವೆ. ಅರಿಸ್ಟಾಟಲನ ಪ್ರಕಾರ ಈ ವ್ಯವಸ್ಥೆಯ ಅತ್ಯಂತ ಕೆಳಮಟ್ಟದಲ್ಲಿ ಆಕಾರದ ಪರಿಪೂರ್ಣತೆಯಾದ ಅಭೌತ ದೇವರಿದ್ದಾನೆ. ಭೌತ ವಸ್ತುಗಳು, ಸಸ್ಯಗಳು, ಪ್ರಾಣಿಗಳು ಮತ್ತು ಮಾನವರಿಂದ ಕೂಡಿದ ದ್ರವ್ಯಗಳ ಸಂಪೂರ್ಣ ಸರಣಿಯು ಈ ಎರಡು ಅಂಚುಗಳ ನಡುವೆ ಇವೆ. ನಮ್ಮ ಅನುಭವಕ್ಕೆ ಸಿಗುವ ಪ್ರತಿಯೊಂದು ವಸ್ತುವು ಭೌತ ವಸ್ತು ಮತ್ತು ಆಕಾರದ ಸಂಯೋಗವಾಗಿದೆ. ಅರಿಸ್ಟಾಟಲನ ಪ್ರಕಾರ "ಆಕಾರ"ವು ವಿಶಿಷ್ಟ ವಸ್ತುಗಳ ಸಾಮಾನ್ಯ ಅಂಶವಾಗಿದ್ದು ಅದರ ಸಾರಯುಕ್ತ ಏಕತೆಯನ್ನು ಎಲ್ಲಾ ವಿಶಿಷ್ಟ ವಸ್ತುಗಳು ಪಡೆದಿರುತ್ತವೆ. ಹಾಗೆಯೇ ವಸ್ತುಗಳಿಗೆ ವಿಶಿಷ್ಟತೆಯನ್ನು, ವೈವಿಧ್ಯತೆಯನ್ನು ನೀಡುವ ಅಂಶವು ಮೂಲ ವಸ್ತುವಾಗಿದೆ. ಪ್ರಪಂಚದ ವಸ್ತುಗಳಲ್ಲಿ ಆಕಾರ ಮತ್ತು ಮೂಲವಸ್ತುಗಳ ವಿಭಜನೆ ಅಸಾಧ್ಯ. ಅಂದರೆ ಇಲ್ಲಿ ಆಕಾರವಿಲ್ಲದ ವಸ್ತುವಿಲ್ಲ ಮತ್ತು ವಸ್ತುವಿಲ್ಲದ ಆಕಾರವೂ ಇಲ್ಲ. ಅರಿಸ್ಟಾಟಲನ ಈ ಅಭಿಪ್ರಾಯವೂ ಪ್ಲೇಟೋವಿನ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿದೆ. ರೂಪ ಮತ್ತು ವಸ್ತುಗಳು ಸಂಪೂರ್ಣವಾಗಿ ಬೇರೆ ಬೇರೆ ಎಂದೂ ಅವು ತಮ್ಮದೇ ಆದ ಬೇರೆ ಬೇರೆ ಪ್ರಪಂಚಗಳಲ್ಲಿರುವವು ಎಂದು ಪ್ಲೇಟೋ ವಾದಿಸಿದ್ದನು. ಆದರೆ ಅರಿಸ್ಟಾಟಲನ ವಾದದಂತೆ ವಿಶಿಷ್ಟ ವಸ್ತುಗಳಲ್ಲಿ ಉಂಟಾಗುವ ಬದಲಾವಣೆ ಮತ್ತು ಬೆಳವಣಿಗೆಗೆ ಅದರ ಮೂಲ ವಸ್ತುವೇ ಕಾರಣವೆಂದು ಮತ್ತು ಈ ಬೆಳವಣಿಗೆಯಲ್ಲಿ ಒಂದು ವಸ್ತುವನ್ನು ಅದು ಬೆಳವಣಿಗೆ ಪಡೆದರೂ ಅದೇ ವಸ್ತುವೆಂದು ಗುರುತಿಸಲು ಅದರ ರೂಪ ಅಥವಾ ಆಕಾರ ಸಹಕಾರಿಯಾಗಿರುತ್ತದೆ. ಮೂಲವಸ್ತುವು ಬೇರೆ ಬೇರೆ ಹಂತಗಳನ್ನು ಪಡೆದು ಬದಲಾವಣೆ ಹೊಂದಿದರೂ ರೂಪ ಎನ್ನುವುದು ಈ ಬದಲಾವಣೆಗೆ ಒಳಗಾಗುವುದಿಲ್ಲ. ಆದುದರಿಂದ ಎಲ್ಲಾ ರೀತಿಯ ರೂಪಗಳು ನಿತ್ಯವಾದುವುಗಳಾಗಿವೆ. ಆದರೆ ಅವುಗಳನ್ನು ಪಡೆದಿರುವ ವಿಶಿಷ್ಟ ವಸ್ತುಗಳು ಮಾತ್ರ ತಾತ್ಕಾಲಿಕವಾದವುಗಳಾಗಿವೆ.

ಆಕಾರ ಮತ್ತು ವಸ್ತುಗಳ ವ್ಯತ್ಯಾಸದ ಆಧಾರದಿಂದ ಅರಿಸ್ಟಾಟಲನು ತನ್ನ "ಸಾಧ್ಯ ತತ್ವ" ಮತ್ತು "ಸಿದ್ಧಿ ತತ್ವ" ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ. ಈ ಸಿದ್ಧಾಂತದ ಮೂಲಕ ಆತನು ಬದಲಾವಣೆ ಮತ್ತು ವಿಕಾಸದ ಬಗ್ಗೆ ತನ್ನ ಸ್ಪಷ್ಟ ವಿವರಣೆಯನ್ನು ಕೊಡುತ್ತಾನೆ. ಅವನ ಪ್ರಕಾರ ಸಾಧ್ಯ ತತ್ವ ಮತ್ತು ಸಿದ್ಧಿ ತತ್ವಗಳು ಒಂದು ದ್ರವ್ಯದ ಬೆಳವಣಿಗೆಯ ಎರಡು ಪ್ರಮುಖ ಹಂತಗಳಾಗಿವೆ. ಇವುಗಳಲ್ಲಿ ಸಾಧ್ಯತತ್ವವು ಪ್ರಾರಂಭಿಕ ಹಂತವಾಗಿದ್ದು ಸಿದ್ಧಿತತ್ವವು ಅನಂತರ ಬರುವುದಾಗಿದೆ. ಒಂದು ವಸ್ತುವು ಮುಂದೆ ಯಾವ ಬದಲಾವಣೆಯನ್ನು ಹೊಂದುವುದೋ ಆ ಬದಲಾವಣೆ ಅಥವಾ ಚೈತನ್ಯ

ಸುಪ್ತವಾಗಿ ಅಡಗಿರುವ ಹಂತವೇ ಸಾಧ್ಯ ತತ್ವ. ಹಾಗೂ ಆ ವಸ್ತುವಿನ ಬೆಳವಣಿಗೆಯ ಸಂಪೂರ್ಣತೆಯೇ ಸಿದ್ಧಿತತ್ವ. ಈ ತತ್ವಗಳ ನಡುವೆ ವ್ಯತ್ಯಾಸವಿದ್ದರೂ ಅದು ಕೇವಲ ಸಾಪೇಕ್ಷ ವ್ಯತ್ಯಾಸವಾಗಿದೆ. ಅಂದರೆ ಯಾವುದೇ ಒಂದು ವಸ್ತುವನ್ನು ಅದಕ್ಕೆ ಸಂಬಂಧಿಸಿದ ಇನ್ನೊಂದು ವಸ್ತುವಿನೊಡನೆ ಹೋಲಿಸಿದಾಗ ಅದು ಸಿದ್ಧಿತತ್ವವಾಗಬಹುದು. ಅದೇ ರೀತಿ ಮತ್ತೊಂದು ವಸ್ತುವಿನೊಡನೆ ಹೋಲಿಸಿದಾಗ ಅದು ಸಾಧ್ಯತತ್ವವೂ ಆಗಬಹುದು. ಉದಾಹರಣೆಗೆ ಒಂದು ಮರವನ್ನು ಅದರ ಬೀಜಕ್ಕೆ ಹೋಲಿಸಿದರೆ ಆ ಮರವು ಆ ಬೀಜದ ಸಿದ್ಧಿ ತತ್ವವಾಗುತ್ತದೆ. ಆದರೆ ಅದೇ ಮರವನ್ನು ಅದರಿಂದ ತಯಾರಿಸಲಾದ ಒಂದು ಬಾಗಿಲಿಗೆ ಹೋಲಿಸಿದರೆ ಆ ಮರವು ಸಾಧ್ಯತತ್ವವಾಗುತ್ತದೆ.

ಸಾಧ್ಯ ತತ್ವವು ಸಿದ್ಧಿ ತತ್ವದೆಡೆಗೆ ಸಾಗಿದಂತೆಲ್ಲಾ ಅದು ಸುಧಾರಿತ ರೂಪವನ್ನು ಪಡೆಯುತ್ತಾ ಹೋಗುತ್ತದೆ. ಈ ನಿಯಮವು ಪ್ರಪಂಚದ ಎಲ್ಲಾ ವಸ್ತುಗಳಿಗೂ ಅನ್ವಯಿಸುತ್ತದೆ. ಒಂದು ವಸ್ತುವು ತನ್ನ ಬೆಳವಣಿಗೆಯ ಕೊನೆಯ ಮಟ್ಟವನ್ನು ತಲುಪಿದಾಗ ಅದು ತನ್ನ ಅರ್ಥಪೂರ್ಣ ಸ್ವರೂಪವನ್ನು ಪಡೆಯುತ್ತದೆ. ಈ ಸ್ವರೂಪವೇ ಆ ವಸ್ತುವಿನ ಗುರಿಯಾದ ಸಂಪೂರ್ಣ ರೂಪ. ಈ ಕಾರಣದಿಂದ ಎಲ್ಲಕ್ಕೂ ಮೂಲವಾದ ಭೌತ ವಸ್ತುವನ್ನು "ಸಾಧ್ಯತತ್ವ" ವೆಂದೂ ಸಂಪೂರ್ಣ ರೂಪವನ್ನು "ಸಿದ್ಧಿತತ್ವ" ವೆಂದೂ ಅರಿಸ್ಟಾಟಲ್ ಹೆಸರಿಸಿದ್ದಾನೆ. ಆದರೆ ಅರಿಸ್ಟಾಟಲನ ಈ ಎರಡು ತತ್ವಗಳು ನಮ್ಮ ವಿಚಾರದ ಕಲ್ಪನೆಗೆ ಮಾತ್ರ ಸಿಗುತ್ತದೆಯಲ್ಲದೆ ವಾಸ್ತವಿಕ ಅಸ್ತಿತ್ವವನ್ನು ಪಡೆದಿಲ್ಲ. ವಾಸ್ತವಿಕವಾಗಿ ಪ್ರತಿಯೊಂದು ದ್ರವ್ಯವು ಒಂದು ರೂಪವನ್ನು ಪಡೆದೇ ಇರುತ್ತದೆ. ರೂಪಗಳು ನಿತ್ಯತೆಯನ್ನು ಪಡೆದರೂ ಅವು ದ್ರವ್ಯದಿಂದ ಬೇರೆಯಾಗಿರದೆ ಅದರಲ್ಲೇ ಅಡಗಿರುತ್ತದೆ. ಆಕಾರ ಅಥವಾ ರೂಪವು ವಸ್ತುವಿನಲ್ಲಿಯೇ ಕೂಡಿದ್ದು ಆ ವಸ್ತುವಿನ ಚಲನೆಗೆ ಮತ್ತು ಧ್ಯೇಯ ಸಾಧನೆಗೆ ಸಹಕಾರಿಯಾಗಿರುತ್ತದೆ. ಬೆಳವಣಿಗೆಯ ಈ ಕ್ರಿಯೆಯು ಕಾರ್ಯಕಾರಣ ಸಂಬಂಧ ನಿಯಮವನ್ನು ಅವಲಂಬಿಸಿದೆ. ಪ್ರತಿಯೊಂದು ಕ್ರಿಯೆಯು ಅರಿಸ್ಟಾಟಲನು ಕಾರಣಗಳೆಂದು ಕರೆಯುವ ನಾಲ್ಕು ನಿಯಮಗಳಿಗನುಸಾರವಾಗಿ ಪಡೆಯುತ್ತವೆ. ಅರಿಸ್ಟಾಟಲನಿಂದ ವರ್ಗೀಕರಿಸಲ್ಪಟ್ಟ ಕಾರಣಗಳು ಈ ರೀತಿ ಇವೆ.

(1) ಭೌತ ಕಾರಣ ಅಥವಾ ಉತ್ಪಾದನಾ ಕಾರಣ

ಇದು ಮೂಲದಲ್ಲಿ ರೂಪರಹಿತವಾಗಿದ್ದು ವಿವಿಧ ವಸ್ತುಗಳ ಮೂಲವಸ್ತುವಾಗಿದೆ. ಯಾವ ಒಂದು ವಸ್ತು ಯಾವ ಮೂಲವಸ್ತುವಿನಿಂದ ಮಾಡಲ್ಪಟ್ಟಿದೆಯೋ ಅದೇ ಭೌತ ಕಾರಣ. ಉದಾಹರಣೆಗೆ ಮುಂದೆ ಪ್ರತಿಮೆಯಾಗಬಹುದಂತಹ ಆದರೆ ಈಗ ನಿರ್ದಿಷ್ಟ ರೂಪವಿಲ್ಲದ ದ್ರವ್ಯವಾದ ಕಂಚು.

(2) ಸಾಮಾನ್ಯ ಕಾರಣ

ಇದು ಒಂದು ವಸ್ತುವಿನಲ್ಲಿ ಕಾಣಿಸಿಕೊಳ್ಳುವ ಆಕಾರ ಅಥವಾ ರೂಪವಾಗಿದ್ದು ಇದರ ಸಹಾಯದಿಂದ ಬೇರೆ ಬೇರೆ ವಸ್ತುಗಳ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸ ಬಹುದಾಗಿದೆ. ಈ ಗುಣವು ಒಂದು ಕಲ್ಪನೆಯಾಗಿದ್ದು ಭೌತ ವಸ್ತುವಿನಿಂದ ಬೇರೆ ಯಾಗಿದೆ. ಉದಾಹರಣೆಗೆ ಶಿಲ್ಪಿಯ ಚಿತ್ರ. ಮನಸ್ಸಿನಲ್ಲಿರುವ ಪ್ರತಿಮೆಯ ಆಕೃತಿಯ ಕಲ್ಪನೆ.

(3) ನಿಮಿತ್ತ ಕಾರಣ

ಇದು ಒಂದು ವಸ್ತುವಿಗೆ ಆಕಾರವನ್ನು ನೀಡಲು ಸಮರ್ಥವಾದ ಕರ್ತೃ. ಈ ಕಾರಣದಿಂದ ಭೌತ ಕಾರಣವು ಕಾರ್ಯವಾಗಿ ಮಾರ್ಪಡುತ್ತದೆ. ಇದೊಂದು ಕುಶ ಲತೆಯ ಮೂಲವಾಗಿದೆ. ಉದಾಹರಣೆಗೆ : ಅನಿರ್ದಿಷ್ಟರೂಪದ ಕಂಚಿನ ತುಂಡಿಗೆ ನಿರ್ದಿಷ್ಟ ಆಕೃತಿಯನ್ನು ಕೊಡುವ ಶಿಲ್ಪಿ.

(4) ಪ್ರಯೋಜನ ಕಾರಣ ಅಥವಾ ನೈಗಮ ಕಾರಣ

ಇದು ಒಂದು ಸಿದ್ಧ ವಸ್ತುವನ್ನು ಸೂಚಿಸುತ್ತದೆ. ಮಾತ್ರವಲ್ಲದೆ ಆ ವಸ್ತುವು ಆಕಾರವನ್ನು ಪಡೆಯುವ ಧ್ಯೇಯವನ್ನು ಸೂಚಿಸುತ್ತದೆ. ಉದಾಹರಣೆಗೆ : ಪ್ರತಿಮೆ

ಯಾವುದೇ ಒಂದು ವಸ್ತುವಿನ ಪೂರ್ಣತೆಗೆ ಈ ನಾಲ್ಕು ಕಾರಣಗಳು ಅವಶ್ಯಕ ವಾಗಿವೆ. ಅರಿಸ್ಟಾಟಲನ ಪ್ರಕಾರ ರೂಪವೇ ಅದರ ವಸ್ತುವಿನ ಧ್ಯೇಯವಾಗಿದೆ. ಈ ರೂಪ ತತ್ವದ ನಿರ್ದೇಶನದಂತೆ ದ್ರವ್ಯಗಳು ವಿವಿಧ ರೂಪಗಳನ್ನು ಪಡೆಯುತ್ತವೆ. ಬೀಜವು ಕೇವಲ ಮರವಾಗುತ್ತದೆಯಲ್ಲದೆ ಅದು ಬೇರೇನೂ ಆಗದಿರಲು ಈ ನಿಯಮವೇ ಕಾರಣ. ಪ್ರತಿಯೊಂದು ವಸ್ತುವೂ ಈ ನಿಯಮವನ್ನು ಅನುಸರಿಸಿ ನಡೆದರೂ ಪ್ರಪಂಚದ ವಸ್ತು ಗಳು ಇನ್ನೂ ಅಪರಿಪೂರ್ಣವಾಗಿಯೇ ಉಳಿದಿವೆ. ವಿಚಾರದ ಅಭಾವವೇ ಈ ಅಪರಿ ಪೂರ್ಣತೆಗೆ ಕಾರಣ ಎಂದು ಅರಿಸ್ಟಾಟಲನ ಅಭಿಪ್ರಾಯ. ದ್ರವ್ಯದ ಮೇಲೆ ರೂಪದ ಪ್ರಭಾವವು ಎಷ್ಟೇ ಶಕ್ತಿಯುತವಾಗಿ ಬಿದ್ದರೂ ದ್ರವ್ಯವು ತನ್ನ ರೂಪವನ್ನು ಸಂಪೂರ್ಣ ವಾಗಿ ಪಡೆಯಲು ನಿರಾಕರಿಸುವುದೇ ಈ ಅಸಂಪೂರ್ಣತೆಗೆ ಕಾರಣ.

ಅರಿಸ್ಟಾಟಲನ ಪ್ರಕಾರ ಚಲನೆ ಮತ್ತು ಬದಲಾವಣೆಗಳು ರೂಪ ಮತ್ತು ಭೌತ ದ್ರವ್ಯದ ಸಂಯೋಜನೆಯಿಂದ ನಡೆಯುತ್ತವೆ. ಇಲ್ಲಿ ರೂಪವು ಚಾಲಕ ಶಕ್ತಿಯಿಂದ ಕೂಡಿದ್ದು ದ್ರವ್ಯವು ಚಲನೆಗೆ ಒಳಪಟ್ಟ ವಸ್ತುವಾಗಿದೆ. ರೂಪವು ಚಲನೆಯ ಮೂಲ ವಾದರೂ ಅದು ಸ್ವತಃ ಚಲಿಸುವುದಿಲ್ಲ. ಚಲನೆ ಮತ್ತು ಬದಲಾವಣೆಗಳು ಭೌತ ದ್ರವ್ಯಕ್ಕೆ ಮಾತ್ರ ಸೀಮಿತವಾಗಿವೆ. ದ್ರವ್ಯದಲ್ಲಿ ರೂಪವನ್ನು ಪಡೆಯುವ ಆಕಾಂಕ್ಷೆ ಸದಾ ಇದ್ದು ರೂಪ ಮತ್ತು ದ್ರವ್ಯಗಳು ನಿತ್ಯವಾಗಿರುವುದರಿಂದ ಚಲನೆ, ಬದಲಾವಣೆ ಮತ್ತು ವಿಕಾಸಗಳು ನಿತ್ಯವಾಗಿವೆ.

(2) ದೇವರ ಕಲ್ಪನೆ

ಅರಿಸ್ಟಾಟಲನ ದೇವತಾ ವಾದಕ್ಕೆ ಆತನ ಆಧ್ಯಾತ್ಮ ಶಾಸ್ತ್ರವೇ ಆಧಾರವಾಗಿದೆ. ಪ್ರಕೃತಿಯಲ್ಲಿ ಕಂಡು ಬರುವ ಬದಲಾವಣೆಯು ಯಾವುದೋ ಒಂದು ಅಚಲವಾದ ಆದರೆ ಸರ್ವಚಲನೆಗೂ ಆಧಾರವಾದ ಒಂದು ಶಕ್ತಿಯನ್ನು ಸೂಚಿಸುತ್ತದೆ ಎಂದು ಅರಿಸ್ಟಾಟಲನ ಅಭಿಪ್ರಾಯ. ಇಂತಹ ಶಕ್ತಿಯು ತಾನು ಸ್ವತಃ ಚಲಿಸದಿದ್ದರೂ ಇತರ ಚಲನೆಗಳಿಗೆ ಆಧಾರವಾಗಿರುತ್ತದೆ. ಅರಿಸ್ಟಾಟಲನ ವಿವರಣೆಯು ಈ ಶಕ್ತಿಯನ್ನು ಆಧುನಿಕ ತತ್ವಜ್ಞಾನಿಗಳು ದೇವರ ಅಸ್ತಿತ್ವವನ್ನು ಸಾಧಿಸಲು ಬಳಸಿಕೊಂಡಿರುವ ವಿಶ್ವ ಸಿದ್ಧಾಂತವನ್ನಾಗಿ ರೂಪಿಸಿಕೊಂಡಿದ್ದಾರೆ. ಆದರೆ ಅರಿಸ್ಟಾಟಲನ ಈ ಅಚಲ ಚಾಲಕ ಸಿದ್ಧಾಂತವು ಒಂದು ಅಧ್ಯಾತ್ಮಿಕ ಆಶ್ಚರ್ಯವೇ ಆಗಿದೆ. ಏಕೆಂದರೆ ಕಾರಣವಿಲ್ಲದ ಕಾರ್ಯವನ್ನು ಊಹಿಸುವುದು ಎಷ್ಟು ಕಷ್ಟವೋ ಚಲನೆ ಇಲ್ಲದ ಚಾಲಕ ಶಕ್ತಿಯನ್ನು ಊಹಿಸುವುದು ಅಷ್ಟೇ ಕಷ್ಟ. ಆದರೂ ಅರಿಸ್ಟಾಟಲ್ ವಿಜ್ಞಾನಿಗಳಿಗೂ, ತತ್ವಜ್ಞಾನಿಗಳಿಗೂ ಸರಿಹೊಂದುವಂತಹ ಒಂದು ಪರಿಹಾರವನ್ನು ಕೊಡಲು ಪ್ರಯತ್ನಿಸುತ್ತಾನೆ.

ಅವನ ವಾದದಂತೆ ಮಾನವನ ಇಚ್ಛಾಶಕ್ತಿಯು ಪ್ರಾಪಂಚಿಕ ವಸ್ತುಗಳಿಂದ ಹೇಗೆ ಆಕರ್ಷಿಸಲ್ಪಡುತ್ತದೆಯೋ ಅಥವಾ ಪ್ರೇರಿತವಾಗುತ್ತದೆಯೋ ಅದೇ ರೀತಿ ದೇವರ ಇರುವಿಕೆಯು ಮಾನವನು ಸೇರಿದಂತೆ ಎಲ್ಲಾ ಜೀವಿಗಳಲ್ಲಿ ಚಲನೆಗೆ ಪ್ರೇರೇಪಣೆಯಾಗುತ್ತದೆ. ಅಂದರೆ ದೇವರು ಪರೋಕ್ಷವಾಗಿ ಅಚಲವಾದ ವಸ್ತು ಅಥವಾ ಜೀವಿಗಳಲ್ಲಿ ಚಲನೆಯನ್ನುಂಟು ಮಾಡುತ್ತಾನೆ. ದೇವರು ಒಂದು ಪರಿಪೂರ್ಣ ಆಕಾರವಾಗಿರುವುದರಿಂದ ಆ ಆಕಾರದತ್ತ ಜೀವಿಗಳಲ್ಲಿ ಚಲನೆಯುಂಟಾಗುತ್ತದೆ. ಇಚ್ಛಿಸಿದ ವಸ್ತು ಇದೇ ರೀತಿಯಾಗಿ ತಾನು ಚಲಿಸದಿದ್ದರೂ ಇಚ್ಛಿಸಿದವನ ಚಲನೆಗೆ ಕಾರಣವಾಗುತ್ತದೆ. ಒಂದು ಸುಂದರ ಚಿತ್ರವು ಅಥವಾ ದೃಶ್ಯವು ನಮ್ಮ ಮನಸ್ಸು ಮತ್ತು ಇಚ್ಛೆಯ ಮೇಲೆ ಪರಿಣಾಮವನ್ನು ಬೀರಿ ಹೇಗೆ ಅವುಗಳ ಚಲನೆಗೆ ಕಾರಣವಾಗುತ್ತದೋ ಅದೇ ರೀತಿ ಪ್ರಪಂಚದ ಚಲನೆಗೆ ದೇವರು ಕಾರಣನಾಗಿದ್ದಾನೆ. ಅರಿಸ್ಟಾಟಲನ ಪ್ರಕಾರ ದೇವರು ಈ ಪ್ರಪಂಚ ಮತ್ತು ಅದರ ವಸ್ತುಗಳ ಪ್ರಯೋಜನ ಅಥವಾ ನೈಗಮ ಕಾರಣನಾಗಿದ್ದಾನೆ. ಅಂದರೆ ದೇವರೇ ಪ್ರಪಂಚದ ವಸ್ತುಗಳ ಮತ್ತು ಜೀವಿಗಳ ಧ್ಯೇಯವಾಗಿದ್ದಾನೆ. ಪ್ರಪಂಚದ ಸರ್ವ ಜೀವಿಗಳು (ಮಾನವರು ಸೇರಿದಂತೆ) ದೇವರಲ್ಲಿ ತಮ್ಮ ಅತ್ಯುನ್ನತ ಸ್ಥಿತಿಯನ್ನು ಅಥವಾ ಪರಿಪೂರ್ಣತೆಯನ್ನು ಹೊಂದಬೇಕೆಂಬ ಆಕಾಂಕ್ಷೆಯನ್ನು ಸಹಜವಾಗಿ ಪಡೆದಿರುತ್ತಾನೆ. ಅಂದರೆ ಆ ದೇವರ ಇರುವಿಕೆಯೇ ಈ ಜೀವಿಗಳ ಆಕಾಂಕ್ಷೆಗೆ ಮೂಲ ಕಾರಣ. ಆದುದರಿಂದ ದೇವರು ಪ್ರಪಂಚವನ್ನು ಒಂದುಗೂಡಿಸುವ ಮತ್ತು ನಿರ್ದೇಶಿಸುವ ನಿತ್ಯ ನಿಯಾಮಕನಾಗಿದ್ದಾನೆ. ಈ ದೃಷ್ಟಿಯಿಂದ ದೇವರು ನಿಮಿತ್ತ ಕಾರಣನು ಆಗಿದ್ದಾನೆ. ದೇವರನ್ನು ಸೇರಬೇಕೆಂಬ ಗುರಿಯಿಂದ ಪ್ರತಿಂಯೊಂದು ಜೀವಿಯು ತನ್ನ ಗುರಿ ಸಾಧಿಸುವ

ಪ್ರಯತ್ನವನ್ನು ನಡೆಸುತ್ತಾನೆ. ಈ ಪ್ರಯತ್ನವು ವಿವಿಧ ವ್ಯವಸ್ಥೆಗಳ ರೂಪದಲ್ಲಿ ಪ್ರಕಟಗೊಳ್ಳುವುದರಿಂದ ಆವ್ಯವಸ್ಥೆಗಳಿಗೂ ಅವನೇ ಮೂಲ ಕಾರಣನಾಗಿದ್ದಾನೆ.

ಅರಿಸ್ಟಾಟಲನ ಪ್ರಕಾರ ದೇವರು ಮಲಿನತೆಯಿಂದ ಮುಕ್ತನಾದ "ಶುದ್ಧರೂಪ"ವಾಗಿದ್ದಾನೆ. ಯಾವುದೇ ಭೌತವಸ್ತುವಿನ ಸಂಪರ್ಕವಿಲ್ಲದಿರುವುದರಿಂದ ದೇವರೆಂಬ ಈ ಆಕಾರವು ಶುದ್ಧ ಹಾಗೂ ಪರಿಪೂರ್ಣವಾಗಿರಲೇಬೇಕು. ಪ್ರಥಮ ಕಾರಣವಾದ ದೇವರು ತಾನು ಚಲಿಸದೆ ಇತರ ವಸ್ತುಗಳ ಚಲನೆಗೆ ಕಾರಣವಾಗಿರುವುದರಿಂದ ಮತ್ತು ಚಲನೆಯು ಭೌತ ದ್ರವ್ಯಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಅವನು ಭೌತ ದ್ರವ್ಯದಿಂದ ಸಂಪೂರ್ಣವಾಗಿ ಬೇರ್ಪಟ್ಟ ಶುದ್ಧ ರೂಪವಾಗಿರಲೇಬೇಕು. ಅರಿಸ್ಟಾಟಲನು ತನ್ನ ಆಧ್ಯಾತ್ಮ ಶಾಸ್ತ್ರದಲ್ಲಿ ರೂಪ ಮತ್ತು ದ್ರವ್ಯಗಳು ಬೇರೆ ಬೇರೆಯಾಗಿರಲು ಸಾಧ್ಯವೇ ಇಲ್ಲ ಎಂದು ಹೇಳಿದರೂ ದೇವರನ್ನು ಮಾತ್ರ ಈ ಹೇಳಿಕೆಗೆ ಅಪವಾದವನ್ನಾಗಿ ರೂಪಿಸಿಕೊಂಡಿದ್ದಾನೆ. ಅಂದರೆ ದೇವರು ಸಂಪೂರ್ಣವಾದ "ಸಿದ್ಧಿತತ್ವ"ವಾಗಿದ್ದು ಯಾವುದೇ "ಸಾಧ್ಯತತ್ವ"ದ ಅಂಶವೂ ಇಲ್ಲದ ಧ್ಯೇಯವಾಗಿದ್ದಾನೆ. ಈ ದೇವರು ಎಲ್ಲಾ ಜೀವಿಗಳಿಗಿಂತಲೂ ಉನ್ನತವಾಗಿರುವ ದ್ರವ್ಯ. ಮಾನವನ ಚಟುವಟಿಕೆಗಳಲ್ಲಿ ಒಂದಾದ ವಿಚಾರವನ್ನು ಮಾತ್ರ ದೇವರಲ್ಲಿ ಕಾಣಬಹುದು. ಅರಿಸ್ಟಾಟಲನ ಪ್ರಕಾರ ದೇವರು ವಿಚಾರಶಕ್ತಿಯ ಒಂದು ಕುಲುಮೆಯಲ್ಲಿದ್ದು ಮಾನವನಲ್ಲಿರುವ ವಿಚಾರಶಕ್ತಿಯು ಆತನ ವಿಚಾರ ಶಕ್ತಿಯೆಂಬ ಕುಲುಮೆಯಿಂದ ಸಿಡಿಯುವ ಒಂದು ಕಿಡಿ ಮಾತ್ರವಾಗಿದೆ. ಈ ದೇವರಲ್ಲಿ ತಿಳಿದುಕೊಳ್ಳುವ ಮನಸ್ಸು, ತಿಳಿಯಲ್ಪಡುವ ವಸ್ತು ಮತ್ತು ತಿಳುವಳಿಕೆಯ ಹಂತಗಳ ವ್ಯತ್ಯಾಸವಿರುವುದಿಲ್ಲ. ದೇವರ ದೃಷ್ಟಿಯಲ್ಲಿ ಅವೆಲ್ಲವೂ ಒಂದೇ ಆಗಿವೆ. ದೇವರ ಇರುವಿಕೆ ಮತ್ತು ಆತನ ಚೈತನ್ಯಶಕ್ತಿಯು ನಮ್ಮ ವಿಚಾರದ ಮೂಲಕ, ವಸ್ತುಗಳ ಸಾರದ ಮೂಲಕ ಅಥವಾ ಸೌಂದರ್ಯದ ಅನುಭವದ ಮೂಲಕ ಗೋಚರವಾಗುತ್ತದೆ.

ಮನಶ್ಶಾಸ್ತ್ರ ಮತ್ತು ನೀತಿಮಾರ್ಗ

ಈ ಪ್ರಪಂಚದ ಜೀವಿಗಳಲ್ಲೆಲ್ಲಾ ಮಾನವನೇ ಅತ್ಯಂತ ಉನ್ನತಮಟ್ಟದಲ್ಲಿದ್ದು ಮಾನವನ ಹಂತವನ್ನು ತಲುಪುವುದೇ ಇತರ ಎಲ್ಲ ಜೀವಿಗಳ ಗುರಿಯಾಗಿದೆ. ವಿಚಾರಶಕ್ತಿಯು ಮಾನವನಲ್ಲಿ ಮಾತ್ರವಿದ್ದು ಇತರ ಜೀವಿಗಳು ಕೇವಲ ಭಾವನೆ ಮತ್ತು ಕೆಳಮಟ್ಟದ ಆಲೋಚನೆ ಹೊಂದಿರುವುದರಿಂದ ಉನ್ನತ ವಿಚಾರವು ಇತರ ಜೀವಿಗಳ ಧ್ಯೇಯವಾಗಿರುವುದಿಲ್ಲ. ಸಸ್ಯಗಳಲ್ಲಿರುವಂತೆ ಮಾನವನಲ್ಲಿ ಜೀವವಿದೆ, ಪ್ರಾಣಿಗಳಲ್ಲಿರುವಂತೆ ಇಂದ್ರಿಯ ಜ್ಞಾನ, ಸ್ಮೃತಿ, ಕೆಲವು ಕಲ್ಪನೆಗಳು, ಆಸೆ-ನಿರಾಸೆಗಳು, ಸುಖ–ದುಃಖಗಳು ಅವನಲ್ಲಿವೆ. ಆದರೆ ಇವೆಲ್ಲಕ್ಕೂ ಮೀರಿದ ಆಕಾಂಕ್ಷೆಯಿಂದ ಕೂಡಿದ ವಿಚಾರ ಮತ್ತು ಕಲ್ಪನಾಶಕ್ತಿ ಮಾನವನಲ್ಲಿದೆ. ಈ ವಿಚಾರಶಕ್ತಿಯ ಸಹಾಯದಿಂದ ಆತನು ವಿಶಿಷ್ಟ ವಸ್ತುಗಳನ್ನೇ ಅಲ್ಲದೆ ಸಾಮಾನ್ಯಗಳನ್ನು, ಸಂಬಂಧಗಳನ್ನು, ಅನಿವಾರ್ಯ ನಿಯಮಗಳನ್ನು ತಿಳಿಯುವ ಸಾಮರ್ಥ್ಯವನ್ನು ಪಡೆದಿದ್ದಾನೆ. ಆತನಲ್ಲಿರುವ ವಿಚಾರಶಕ್ತಿಯು ಆತನು

ತಿಳಿದಿರುವ ವಸ್ತುಗಳ ಮತ್ತು ಜೀವಿಗಳ ಸಾಧ್ಯತತ್ತ್ವವಾಗಿದೆ. ಅಂದರೆ ವಿಚಾರವು ಮಾನವನ ಆಲೋಚನೆಯ ಮತ್ತು ಕಲ್ಪನೆಯ ಮೂಲವಾಗಿದೆ. ಕಲ್ಪನಾ ಸಹಿತವಾದ ವಿಚಾರಶಕ್ತಿಯು ಆತನ ಆಲೋಚನೆಯ ಸಿದ್ಧಿತತ್ತ್ವವಾಗಿದೆ. ಇತರ ಪ್ರಾಣಿಗಳಲ್ಲಿರುವಂತಹ ಸಾಮಾನ್ಯ ಆಲೋಚನೆಗಳು ಮಾನವರಲ್ಲಿ ಹೇಗೆ ಕಲ್ಪನಾ ಸಹಿತವಾದ ವಿಚಾರವಾಗುತ್ತದೆ ಎನ್ನುವುದು ಇಲ್ಲಿ ಉದ್ಭವಿಸುವ ಪ್ರಶ್ನೆ. ಇದಕ್ಕೆ ಉತ್ತರವಾಗಿ ಅರಿಸ್ಟಾಟಲನು ಆಲೋಚನೆಯನ್ನು ಎರಡು ವಿಧವಾಗಿ ವರ್ಗೀಕರಿಸಿ ಅವುಗಳ ಸ್ವಭಾವ ಮತ್ತು ಕಾರ್ಯಗಳನ್ನು ನಿರೂಪಿಸುತ್ತಾನೆ. ಪ್ರಜ್ಞೆಯನ್ನು ಆತನು ನಿಷ್ಕ್ರಿಯಾತ್ಮಕ ಮತ್ತು ಸಕ್ರಿಯಾತ್ಮಕ ಎಂಬ ಎರಡಂಶಗಳನ್ನು ಗುರುತಿಸಿ ಸಾಧ್ಯತತ್ತ್ವದ ಹಂತದಲ್ಲಿರುವ ಸಾಮಾನ್ಯ ಆಲೋಚನೆ ಕಲ್ಪನೆ ಮತ್ತು ಭಾವನೆಗಳನ್ನು ನಿಷ್ಕ್ರಿಯಾತ್ಮಕ ಪ್ರಜ್ಞೆಯ ಕೆಳಗೆ ತರುತ್ತಾನೆ. ಕಲ್ಪನಾ ಸಹಿತವಾದ ವಿಚಾರ, ಪ್ರಪಂಚದ ನೈಜ ತಿಳುವಳಿಕೆಗಳು ಸಕ್ರಿಯಾತ್ಮಕ ಪ್ರಜ್ಞೆಯ ಕೆಳಗೆ ಬರುತ್ತವೆ. ನಿಷ್ಕ್ರಿಯಾತ್ಮಕ ಪ್ರಜ್ಞೆಯು ಇಂದ್ರಿಯಾನುಭವ, ಅವುಗಳಿಂದ ಕೂಡಿದ ಕಲ್ಪನೆ ಮತ್ತು ಸ್ಮೃತಿಗಳು ಶರೀರದ ಪ್ರಕೃತಿಯನ್ನು ಅವಲಂಬಿಸಿದ್ದು ಶರೀರದ ನಾಶದೊಡನೆ ಅವು ನಶಿಸುತ್ತವೆ. ಆದರೆ ಇಂದ್ರಿಯಗಳ ಮಿತಿಗೆ ಒಳಪಡದ ಸಕ್ರಿಯಾತ್ಮಕ ವಿಚಾರವು ಶರೀರ ಮತ್ತು ಮನಸ್ಸುಗಳಿಗಿಂತ ಪೂರ್ವಭಾವಿಯಾಗಿರುವುದರಿಂದ ಅದಕ್ಕೆ ನಾಶವಿಲ್ಲ. ಇಂತಹ ಸಕ್ರಿಯಾತ್ಮಕ ವಿಚಾರವು ದೇವರ ಜ್ಞಾನದ ಒಂದು ಕಿಡಿಯಂತಿದೆ. ಇದು ವೈಯಕ್ತಿಕ ವಿಚಾರವಲ್ಲದ್ದರಿಂದ ವೈಯಕ್ತಿಕವಾದ ಮೃತ್ಯು ನಿಯಮವು ಇದನ್ನು ಸೋಕಲಾರದು. ಆದುದರಿಂದ ಸಕ್ರಿಯಾತ್ಮಕ ವಿಚಾರವು ಸಾರ್ವತ್ರಿಕವು, ಅಮರವು ಆಗಿದೆ. ಇಂತಹ ಸಕ್ರಿಯಾತ್ಮಕ ವಿಚಾರದ ಹಂತಕ್ಕೇರಿ ಆತ್ಮ ಸಾಕ್ಷಾತ್ಕಾರವನ್ನು ಪಡೆಯುವುದು ಮಾನವನ ಗುರಿ, ಅಥವಾ ಸಿದ್ಧಿ ತತ್ತ್ವವಾಗಿದೆ. ಈ ಹಂತವನ್ನು ತಲುಪುವ ಮಾರ್ಗದ ವಿವರಣೆ ಆತನ ನೀತಿ ಶಾಸ್ತ್ರದಲ್ಲಿ ಕಾಣಬಹುದು.

ಸಾಕ್ರಟೀಸನು ಮುಂದಿಟ್ಟ ಅತ್ಯಂತ ಶುಭ ಅಥವಾ ಮಾನವ ಕಲ್ಯಾಣದ ಸಮಸ್ಯೆಯೇ ಅರಿಸ್ಟಾಟಲನ ನೀತಿಮಾರ್ಗದ ಸಮಸ್ಯೆಯಾಗಿದೆ. ಅವನ ಪ್ರಕಾರ ಮಾನವನ ಪ್ರತಿಯೊಂದು ಕೆಲಸವೂ ಒಂದು ವಿಶಿಷ್ಟ ಗುರಿಯನ್ನು ಸೂಚಿಸುತ್ತದೆ. ಆ ಗುರಿಯು ಮತ್ತೊಂದು ಗುರಿಯನ್ನು ಸೂಚಿಸುತ್ತದೆ. ಅದು ಮತ್ತೊಂದನ್ನು. ಈ ರೀತಿ ಒಂದು ಗುರಿಯು ಮತ್ತೊಂದನ್ನು ಅವಲಂಬಿಸಿದರೂ ನಮ್ಮ ವಿಚಾರವು ಅನಂತವಾದ ಯಾವುದಾದರೊಂದು ಪರಮಗುರಿಯನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ನಮ್ಮ ವಿಚಾರವು ಯಾವುದಾದರೊಂದು ನಿರ್ಣಯವನ್ನು ತಲುಪದಿದ್ದರೆ ಅಂತಹ ವಿಚಾರದಿಂದ ಯಾವ ಪ್ರಯೋಜನವೂ ಇಲ್ಲ. ಪ್ರತಿಯೊಂದು ವಸ್ತುವಿಗೂ ತನ್ನ ಮುಂದಿನ ಹಂತವೇ ಸಮೀಪದ ಹಾಗೂ ಪ್ರಥಮ ಗುರಿಯಾಗಿದೆ. ಆ ಗುರಿಯನ್ನು ಪಡೆಯುವುದರಲ್ಲೇ ಅದರ ಶುಭ ಅಥವಾ ಒಳಿತು ಅಡಗಿದೆ. ಹೀಗೆಯೇ ಅದು ತನ್ನ ಸಮೀಪದ ಗುರಿಯನ್ನು ಒಂದೊಂದಾಗಿ ದಾಟಿ ಅತ್ಯಂತ ಶುಭದ ಅನುಭವ

ವನ್ನು ಪಡೆಯಬೇಕು. ಅಂದರೆ ಒಂದು ವಸ್ತುವು ತನ್ನ ವಿಶೇಷ ಸ್ವಭಾವವನ್ನು ಸಂಪೂರ್ಣವಾಗಿ ಗಳಿಸುವುದೇ ಅದರ ಗುರಿ ಅಥವಾ ಶುಭವಾಗಿದೆ. ಪ್ರತಿಯೊಂದು ಜೀವಿಯೂ ತನ್ನ ಜೀವಿತದ ಸಂಪೂರ್ಣತೆಯನ್ನು ಅಥವಾ ಸಾರವನ್ನು ಪಡೆಯಲು ಹವಣಿಸುತ್ತದೆ. ಆದುದರಿಂದ ಆ ಪರಿಪೂರ್ಣತೆಯು ಅದರ ಗುರಿ ಹಾಗೂ ಶುಭ. ಮಾನವನ ಬಗ್ಗೆ ಹೇಳುವುದಾದರೆ ಇತರ ಪ್ರಾಣಿಗಳಂತೆ ಕೆಳಮಟ್ಟದ ಆಲೋಚನೆ ಮತ್ತು ಭಾವನೆಗಳೊಡಗೂಡಿ ಜೀವಿಸುವುದು ಆತನ ಗುರಿಯಾಗಲಾರದು. ಸಕ್ರಿಯಾತ್ಮಕ ವಿಚಾರ ವಿಚಾರ ಯುಕ್ತ ಉನ್ನತ ಜೀವನ ನಡೆಸುವುದೇ ಈತನ ಧ್ಯೇಯ. ಆದುದರಿಂದ ಮಾನವನನ್ನು ಪ್ರಾಣಿ ಹಂತದಿಂದ "ಮಾನವತೆ"ಯ ಕಡೆಗೆ ಸಾಗಿಸುವ ವಿವಿಧ ಕ್ರಿಯೆಗಳೇ ಆವನಿಗೆ ಶುಭವಾದುವುಗಳಾಗಿವೆ. ಇದನ್ನು ಅರಿಸ್ಟಾಟಲ್ ಗ್ರೀಕ್ ಭಾಷೆಯಲ್ಲಿ 'ಯುಡಿಮೋನಿಯಾ' ಎಂದು ಕರೆದಿದ್ದಾನೆ. ಮಾನವನಿಗೆ ಹರ್ಷದಾಯಕವಾದ ಕ್ರಿಯೆ ಎಂಬ ಅರ್ಥದಲ್ಲಿ ಈ ಶಬ್ದವನ್ನು ಬಳಸಿದ್ದಾನೆ. ಮಾನವನು ತನ್ನ ವಿವಿಧ ಚಟುವಟಿಕೆಗಳ ಮೂಲಕ ವಿಚಾರಯುಕ್ತ ಜೀವನದ ಪರಮಾವಧಿಯನ್ನು ತಲುಪುವುದೇ ಆತನ ಜೀವನದ 'ಶುಭ' ಮತ್ತು 'ಆನಂದ'ವಾಗಿದೆ.

ವಿಚಾರಶಕ್ತಿ ಮಾನವನಲ್ಲಿ ಇರಲೇಬೇಕಾದ ಅಂಶವಾದರೂ ಆತನ ಆತ್ಮವು ವಿಚಾರದಿಂದ ದೂರವಾದ ಭಾವನೆ, ಆಸೆ, ರಾಗ ದ್ವೇಷ ಮುಂತಾದ ಕೀಳುಮಟ್ಟದ ಅಂಶಗಳಿಂದಲೂ ಕೂಡಿರಬಹುದು. ನಮ್ಮ ಭಾವನೆಗಳು ನಮ್ಮ ಎಲ್ಲಾ ಕೆಲಸ ಕಾರ್ಯಗಳ ಮೇಲೆ ಬಹಳವಾಗಿ ಪರಿಣಾಮ ಬೀರುವುದರಿಂದ ನಮ್ಮ ಜೀವನವು ಇತರ ಪ್ರಾಣಿಗಳ ಜೀವನಕ್ಕೆ ಸಮಾನವಾಗಿರುತ್ತದೆ. ಆದರೆ ಪ್ರಾಣಿ ಜೀವನದಿಂದ ಮೇಲೇರಿ ಮಾನವತೆಯ ಪರಿಪೂರ್ಣತೆಯನ್ನು ತಲಪುವುದೇ ಆತನ ಧ್ಯೇಯವಾಗಿದೆ. ಈ ಧ್ಯೇಯ ಸಾಧನೆಯಾಗಬೇಕಾದರೆ ಆತನ ವಿಚಾರಶಕ್ತಿ ಮತ್ತು ಇತರ ಭಾವನೆ ಹಾಗೂ ಕಲ್ಪನೆಗಳಲ್ಲಿ ಪರಸ್ಪರ ಸೌಹಾರ್ದ ಏರ್ಪಡಬೇಕು. ಶರೀರದ ಎಲ್ಲಾ ಭಾಗಗಳೂ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿದರೆ ವ್ಯಕ್ತಿತ್ವವು ವಿಕಾಸ ಹೊಂದಿ ಪೂರ್ಣತೆಯನ್ನು ಪಡೆಯಬಲ್ಲದು. ಶಾರೀರಕ ಭಾಗಗಳ ಬೆಳವಣಿಗೆ ಮತ್ತು ವಿಕಾಸಕ್ಕೆ ಆರ್ಥಿಕ ಸರಕುಗಳ ಅವಶ್ಯಕತೆಯನ್ನು ಅರಿಸ್ಟಾಟಲ್ ವ್ಯಕ್ತಪಡಿಸುತ್ತಾನೆ. ಆತ್ಮವು ಗುಣಶೀಲವಾಗಿ ಬೆಳೆಸಬೇಕಾದರೆ ನಮ್ಮ ವ್ಯಕ್ತಿತ್ವದ ಮೂರು ವಿಭಾಗಗಳಾದ ವಿಚಾರ, ಭಾವನೆ, ಮತ್ತು ಇಚ್ಛೆಗಳು ಸೌಹಾರ್ದಯುತ ಬೆಳವಣಿಗೆಯನ್ನು ಪಡೆಯಬೇಕು. ಯಾವ ವ್ಯಕ್ತಿಯಲ್ಲಿ ಇಂತಹ ಸೌಹಾರ್ದಯುತ ಬೆಳವಣಿಗೆ ಇದೆಯೋ ಅವನನ್ನು ಸುಸಂಸ್ಕೃತ, ಸದ್ಗುಣಿ ಎಂದು ಕರೆಯಲಾಗುವುದು. ಈ ವಿಚಾರಯುಕ್ತ ಕ್ರಿಯೆಯು ಆತ್ಮದಲ್ಲಿ ನೆಲೆನಿಂತರೆ ಆತನು ನೈತಿಕ ಸದ್ಗುಣವನ್ನು ಪಡೆದಂತಾಗುತ್ತದೆ. ಧೈರ್ಯ, ಉದಾರತೆ, ಸೌಹಾರ್ದತೆ, ವಿವೇಕ, ಕರುಣೆ ಮುಂತಾದ ಗುಣಗಳು ನೈತಿಕ ಸದ್ಗುಣದ ಪ್ರಾಮುಖ್ಯ ವಿಭಾಗಗಳಾಗಿವೆ. ಇವುಗಳ ಸಹಾಯದಿಂದ ನಮ್ಮಲ್ಲಿರುವ ಶಾರೀರಕ ಮತ್ತು ಮಾನಸಿಕ ಇಚ್ಛೆಗಳು, ಭಯ, ಕ್ರೋಧ, ಮತ್ಸರ, ಸ್ವಾರ್ಥ ಮುಂತಾದ ಕೀಳುಮಟ್ಟದ ಭಾವನೆ

ಗಳನ್ನೇ ವಿಚಾರಯುಕ್ತವನ್ನಾಗಿ ಪರಿವರ್ತಿಸಬಹುದಾಗಿದೆ. ಅರಿಸ್ಟಾಟಲನ ಅಭಿಪ್ರಾಯ ದಲ್ಲಿ ಇಂತಹ ಸದ್ಗುಣಗಳೇ " ಸುವರ್ಣಪಥ "ಗಳಾಗಿವೆ. ಎರಡು ವೈಪರೀತ್ಯಗಳ ಅಥವಾ ಅತಿರೇಕಗಳ ನಡುವೆ ಬರುವ ಸದ್ಗುಣಗಳು ಸಹಜವಾದ ಮಧ್ಯಮ ಮಾರ್ಗವನ್ನು ತೋರಿಸುತ್ತವೆ. ಉದಾಹರಣೆಗೆ ಧೈರ್ಯವು ಹೇಡಿತನ ಮತ್ತು ಮೂರ್ಖತನದ ನಡುವೆ ಇರುವ ಸುವರ್ಣಪಥವಾಗಿದೆ. ಇಂತಹ ಗುಣಗಳು ನೀತಿ ಮಾರ್ಗದ ಆದರ್ಶಗಳಾಗಿದ್ದರೂ ಮಾನವನ ಕೀಳು ಮಟ್ಟದ ಆಸೆ ಆಕಾಂಕ್ಷೆಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ದ್ವೇಷ, ಅಸೂಯೆ, ನಾಚಿಕೆಗೇಡುತನ, ಕಳ್ಳತನ, ಹಿಂಸೆ, ಮುಂತಾದ ಕೀಳು ಭಾವನೆಗಳು ನಮ್ಮಲ್ಲಿರುತ್ತವೆ. ಮಾತ್ರವಲ್ಲದೆ ಅರಿಸ್ಟಾಟಲ್ ಸೂಚಿಸುವ ಮಧ್ಯಮ ವರ್ಗವು ಸಾರ್ವತ್ರಿಕವಾಗಿದ್ದು ಎಲ್ಲರಿಗೂ ಅನ್ವಯಿಸಬಹುದಾಗಿದೆ ಎಂದು ಹೇಳಲಾಗುವುದಿಲ್ಲ. ಈ ಪಥಗಳು ವೈಯಕ್ತಿಕವಾಗಿಲ್ಲವಾದರೂ ಅವುಗಳನ್ನು ಅನುಸರಿಸುವಲ್ಲಿ ವ್ಯತ್ಯಾಸವನ್ನು ಕಾಣಬಹುದು. ಆದರೆ ಅರಿಸ್ಟಾಟಲನ ಪ್ರಕಾರ ಅವು ವಿಚಾರದ ಆಧಾರದಿಂದ ನಿರ್ಣಯಿ ಸಲ್ಪಟ್ಟಿರುವುದರಿಂದ ಅವು ವ್ಯಕ್ತಿಯ ಭಾವನೆ ಮತ್ತು ಇಚ್ಛೆಗಳಿಗೆ ಒಳಪಡುವುದಿಲ್ಲ. ಆದರೆ ನೈತಿಕ ನಡತೆ ಹೇಗಿರಬೇಕೆಂಬುದನ್ನು ಎಲ್ಲರೂ ನಿರ್ಧರಿಸುವಂತಿಲ್ಲ. ಅವನ ಪ್ರಕಾರ ನೈತಿಕ ನಡತೆಯನ್ನು ನಿರ್ಧರಿಸುವವರು ವಿಚಾರಯುಕ್ತರಾದವರು, ಸದ್ಗುಣ ಶೀಲರು, ನಂಬಲರ್ಹರಾದವರು ಮಾತ್ರವಾಗಿದ್ದಾರೆ. ಮಾತ್ರವಲ್ಲದೆ ನೈತಿಕ ಪಥವು ಒಂದು ವಿಶಿಷ್ಟ ಕ್ರಿಯೆಯಾಗಿರದೆ ನಮ್ಮ ಜೀವನದ ಪ್ರತಿಯೊಂದು ವಿಭಾಗದಲ್ಲಿಯೂ ಮಧ್ಯಮ ಮಾರ್ಗವಾಗಿ ಅನುಸರಿಸಿ ನಡೆಸುವ ಸಂಪೂರ್ಣ ಜೀವನವೇ ಆಗಿದೆ. ಇಂತಹ ಜೀವನವು ಇತರರ ಒತ್ತಾಯದಿಂದ ನಡೆಸುವ ಜೀವನವಲ್ಲ. ಅದು ಅಂತರಾಳದಿಂದ ತಾನಾಗಿಯೇ ಉದ್ಭವಿಸುವ ಪ್ರೀತಿ.

ಮಾನವನ ಮಹತ್ತರ ಗುರಿ ಅಥವಾ ಧ್ಯೇಯವಾದ ಶುಭ ಆತನ ಆತ್ಮಜ್ಞಾನ ವಾಗಿದೆ ಎಂದು ಅರಿಸ್ಟಾಟಲನ ಅಭಿಪ್ರಾಯ. ಆದರೆ ಈ ಆತ್ಮಜ್ಞಾನವು ಸ್ವಾರ್ಥದಿಂದ ಕೂಡಿದ ವೈಯಕ್ತಿಕ ಭಾವನೆಯಲ್ಲ. ಒಬ್ಬ ವ್ಯಕ್ತಿಯು ತನ್ನ ವಿಚಾರ ಶಕ್ತಿಯನ್ನು ಮತ್ತು ಶಾರೀರಕ ಸಾಮರ್ಥ್ಯವನ್ನು ಜನಸೇವೆಯಲ್ಲಿ ಮತ್ತು ದೇಶ ಸೇವೆಯಲ್ಲಿ ವಿನಿಯೋಗಿಸಿದರೆ ಮಾತ್ರ ಆತನಲ್ಲಿ ಆತ್ಮಜ್ಞಾನ ಉಂಟಾಗುತ್ತದೆ. ಸಮಾಜಕೋಸ್ಕರ ಅಥವಾ ದೇಶ ಕೋಸ್ಕರ ಒಬ್ಬ ವ್ಯಕ್ತಿಯು ಮಾಡುವ ಕೆಲಸವು ಪ್ರೀತಿಭಾವದಿಂದಲೂ, ನಂಬಿಕೆ ಯಿಂದಲೂ ಕೂಡಿರಬೇಕು. ಹಾಗಾದರೆ ಮಾತ್ರ ಆತನಲ್ಲಿ ಆತ್ಮಜ್ಞಾನ ಉಂಟಾಗು ತ್ತದೆ. ಸಮಾಜಕೋಸ್ಕರ ಅಥವಾ ದೇಶಕ್ಕೋಸ್ಕರ ಒಬ್ಬ ವ್ಯಕ್ತಿಯು ಮಾಡುವ ಕೆಲಸವು ಪ್ರೀತಿಭಾವದಿಂದಲೂ; ನಂಬಿಕೆಯಿಂದಲೂ ಕೂಡಿರಬೇಕು. ಹಾಗಾದರೆ ಮಾತ್ರ ಆತನಲ್ಲಿ ವಿಚಾರದ ಪೂರ್ಣ ಬೆಳವಣಿಗೆಯಾಗಿದೆ ಎನ್ನಬಹುದು. ದೇಶ ಪ್ರೇಮಿ ಯಾದ ಅಂತಹ ವ್ಯಕ್ತಿಯು ತನ್ನ ಐಶ್ವರ್ಯ ಮತ್ತು ಗೌರವಗಳನ್ನು ಸಮಾಜದ ಏಳಿಗೆ ಗಾಗಿ ಮುಡಿಪಾಗಿಟ್ಟು ತನ್ನ ಗಣ್ಯತೆಯನ್ನು ಮಾತ್ರ ಉಳಿಸಿಕೊಳ್ಳುತ್ತಾನೆ. ಗಣ್ಯ

ವ್ಯಕ್ತಿಯಾಗಿ ಜನಿಸುವುದು ಒಂದು ಆಕಸ್ಮಿಕ ಘಟನೆ. ಆದರೆ ಗಣ್ಯನಾಗಿ ಸಾಯುವುದು ಒಂದು ಮಹಾಸಾಧನೆ ಎನ್ನುವುದೇ ಅರಿಸ್ಟಾಟಲನ ತತ್ವದ ತಿರುಳು.

ಯಾವ ವ್ಯಕ್ತಿ ತನ್ನ ಇಚ್ಛಾಭಾವನೆಗಳನ್ನು ಮತ್ತು ವಿಚಾರಗಳನ್ನು ಯೋಗ್ಯ ರೀತಿಯಿಂದ ಅನುಸರಿಸಿ ತನ್ನ ಎಲ್ಲ ಕಾರ್ಯಗಳು ವಿಚಾರ ಯುಕ್ತವಾಗುವಂತೆ ನೋಡಿ ಕೊಳ್ಳುವನೋ ಅವನೇ ಸದ್ಗುಣಿ, ನ್ಯಾಯವಾದಿ ಮತ್ತು ಧರ್ಮಿಷ್ಟ. ಈ ಸದ್ಗುಣದಲ್ಲಿ ಮೇಲು-ಕೀಳೆಂಬ ಭಾವನೆಯಿಲ್ಲದೆ, ಆಳು-ಅರಸ ಎಂಬ ಭೇದವಿಲ್ಲದೆ ಎಲ್ಲರನ್ನೂ ಸಮನ್ವಯ ದೃಷ್ಟಿಯಿಂದ ನೋಡುವ ಮತ್ತು ಗೌರವಿಸುವ ಭಾವನೆಗಳು ಅಡಕವಾಗಿವೆ. ಇಂತಹ ಭಾವನೆಗಳನ್ನು ಕಾರ್ಯಗತಗೊಳಿಸಿದಾಗ ಇತರರ ಶ್ರೇಯಸ್ಸಿನೊಡನೆ ಈ ಧರ್ಮಿಷ್ಟನ ಶ್ರೇಯಸ್ಸು ಉಂಟಾಗುತ್ತದೆ. ಇಂತಹ ಸದ್ಗುಣಗಳೆಲ್ಲವನ್ನೂ ಅರಿತು ಆ ಜಾಡಿನಲ್ಲಿ ನಡೆಯುವ ವ್ಯಕ್ತಿ ನ್ಯಾಯ ತತ್ಪರನೆನಿಸಿಕೊಳ್ಳುತ್ತಾನೆ. ನ್ಯಾಯದ ಆಚರಣೆಯಿಂದ ಅವನ್ನು ಆಚರಿಸುವವನು ಸಂತುಷ್ಟನಾಗುತ್ತಾನೆ. ಆದರೆ ಈ ಸಂತುಷ್ಟಿ ಸೋಫಿಷ್ಟರು ಸಾರಿದಂತಹ ಭೌತ ವಸ್ತುಗಳಿಂದ ಲಭಿಸುವ ಸಂತುಷ್ಟಿಯಲ್ಲ. ಸದ್ಗುಣಿಯ ಸಂತುಷ್ಟಿ ಆತನ ಆಚಾರದ ಪರಿಪೂರ್ಣತೆಯನ್ನು ಪ್ರತಿಬಿಂಬಿಸುತ್ತದೆ. ಅರಿಸ್ಟಾಟಲನ ಪ್ರಕಾರ ಆಚರಣೆಗಳ ಪರಿಪೂರ್ಣತೆಯು ಧ್ಯಾನದಲ್ಲಿ ಕೊನೆಗೊಳ್ಳುತ್ತದೆ. ಇಂತಹ ತಪಸ್ಸಿದ್ಧಿಯಿಂದ ಕೂಡಿದ ಜೀವನವೇ ಅತ್ಯಂತ ಹಿರಿದಾದುದು, ಸಂತುಷ್ಟಿಯಿಂದ ಕೂಡಿದುದೂ ಆಗಿದೆ. ಆದರೆ ಈ ತಪಸ್ಸಿದ್ಧಿ ತೀರ ಕಷ್ಟಸಾಧ್ಯವಾದ ವಿಷಯವಾಗಿದೆ. ವ್ಯಕ್ತಿಯಲ್ಲಿ ವಿಚಾರ ಶಕ್ತಿಯು ಪರಮಾವಧಿಯನ್ನು ತಲುಪಿ ದೈವಿಕ ಶಕ್ತಿಯನ್ನು ಪಡೆದರೆ ಮಾತ್ರ ಅವನಿಗೆ ಜೀವನದ ಸಂಪೂರ್ಣ ಅರ್ಥ ಲಭಿಸುವುದು. ಈ ದೃಷ್ಟಿಯಿಂದ ಸಾಕ್ರಟೀಸನ ಹೇಳಿಕೆಯಾದ "ಜ್ಞಾನವೇ ಸದ್ಗುಣ" ಎನ್ನುವುದು ಅಷ್ಟೊಂದು ಪರಿಣಾಮಕಾರಿಯಲ್ಲ. ಅರಿಸ್ಟಾಟಲ್ ವಾಸ್ತವವಾದಿಯಾದುದರಿಂದ ಪ್ರಾಪಂಚಿಕ ಚಟುವಟಿಕೆಗಳನ್ನು ನಿರ್ಲಕ್ಷಿಸದೆ ಅವುಗಳನ್ನು ಸಂಪೂರ್ಣವಾಗಿ ವಿಚಾರಯುಕ್ತವನ್ನಾಗಿ ಮಾಡುವಂತೆ ಅಪೇಕ್ಷಿಸಿದನು. ಮಾನವ ಒಬ್ಬ ಸಮಾಜ ಸಂಘ ಜೀವಿಯಾಗಿದ್ದು ಸಮಾಜದಲ್ಲಿ ಸಾಮಾಜಿಕ ಪ್ರಕ್ರಿಯೆಗಳು ಅನಿವಾರ್ಯವಾದುದರಿಂದ ಒಬ್ಬ ವ್ಯಕ್ತಿ ಎಷ್ಟೇ ಜ್ಞಾನಿಯಾದರೂ ತಾನು ಪ್ರತ್ಯೇಕವಾಗಿರಲಾರನು. ಪ್ರತಿಯೊಬ್ಬ ವ್ಯಕ್ತಿಯೂ ತಾನು ಜೀವಿಸಿರುವ ಸಮಾಜದ ಮೂಲಕವೇ ತನ್ನ ಗುರಿ ಮುಟ್ಟುತ್ತಾನೆ. ಆದುದರಿಂದ ಸಮಾಜ ಸೇವೆಯೇ ತನ್ನ ವೈಯಕ್ತಿಕ ಸೇವೆಯಾಗಿದೆ.

ಎಂ. ಜಯಂತಿ ಬಾಯಿ

ಕನ್ನಡಕ್ಕೆ ಕಿಟೆಲ್ ಮತ್ತಿತರ ಮಿಶನರಿಗಳ ಕೊಡುಗೆ

ಕರ್ನಾಟಕಕ್ಕೆ ಮಿಶನರಿಗಳ ಆಗಮನ

ಹೊಸಗನ್ನಡ ಸಾಹಿತ್ಯದಲ್ಲಿ 19ನೆಯ ಶತಮಾನದ ಅವಧಿ ಅನೇಕ ದೃಷ್ಟಿಗಳಿಂದ ಗಮನಾರ್ಹವಾಗಿದೆ. ಆಗ ಹಳತು ಹೊಸತರ ಸಂಧಿಕಾಲ ಆರಂಭವಾಯಿತು. ಕ್ರಮಕ್ರಮವಾಗಿ ಜನಜಾಗೃತಿ ಮೂಡಿತು. ಸ್ವಾತಂತ್ರ್ಯ ಚಳವಳಿ, ಆಧ್ಯಾತ್ಮಿಕ ಪುನರುಜ್ಜೀವನಗಳಿಂದ ಹೊಸ ಸಾಮಾಜಿಕ ಕ್ರಾಂತಿಯುಂಟಾಗುವ ಸೂಚನೆಗಳು ಕಂಡುಬರಲಾರಂಭಿಸಿದುವು. ಇಂಥ ಸಂಧಿಕಾಲದಲ್ಲಿಯೇ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದಿಂದ ದೇಶೀಯ ಭಾಷಾ ಸಾಹಿತ್ಯಗಳಲ್ಲಿ ಹೊಸ ಮನ್ವಂತರ ಆರಂಭವಾಯಿತೆಂದು ಹೇಳಬಹುದು.

ಇಂಥ ಕಾಲದಲ್ಲಿ ಹಲವಾರು ಮಂದಿ ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬಂದರು. ಕ್ರೈಸ್ತಧರ್ಮಸಭೆಯವರು ತಮ್ಮ ಮತಪ್ರಚಾರಕ್ಕಾಗಿ ಈ ಮಿಶನರಿಗಳನ್ನು ಕಳುಹಿಸಿದ್ದರು. ಅವರು ಆಯಾ ಧರ್ಮಸಭೆಯಿಂದ, ಸ್ಥಳೀಯ ಸಂಘಸಂಸ್ಥೆಗಳ ಸಹಾಯದಿಂದ ಶಾಲೆ ಮುಂತಾದ ಸಾರ್ವಜನಿಕ ಸಂಸ್ಥೆಗಳನ್ನು ನಡೆಸಬೇಕಾಗಿತ್ತು ; ಜೊತೆಗೆ ಧರ್ಮಪ್ರಚಾರವನ್ನೂ ಮಾಡಬೇಕಿತ್ತು. ಹೀಗೆ ಭಾರತಕ್ಕೆ ಬಂದ ಮಿಶನರಿಗಳಲ್ಲಿ ಹಲವರು ಕರ್ನಾಟಕಕ್ಕೂ ಆಗಮಿಸಿದರು ; ಅವರಿಗೆ ಆಯಾ ಕಾಲದ ರಾಜ ಮಹಾರಾಜರು ಪರೋಕ್ಷವಾಗಿ ನೆರವು ನೀಡಿದರು. ಹೀಗಾಗಿ ತಮ್ಮ ಮತ ಪ್ರಚಾರಕ್ಕೆಂದು ಬಂದ ಕ್ರೈಸ್ತ ಮಿಶನರಿಗಳು ಇಲ್ಲಿನ ಜನಭಾಷೆಯಾದ ಕನ್ನಡವನ್ನು ಕಲಿತರು ; ಇಲ್ಲಿನ ಜನರ ಆಚಾರ, ವಿಚಾರ, ಸಾಹಿತ್ಯ, ಸಂಸ್ಕೃತಿ, ನಡೆ–ನುಡಿ ಮುಂತಾದುವುಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿದರು. ಜೊತೆಗೆ ಭಾರತೀಯ ಭಾಷೆ, ಸಾಹಿತ್ಯಗಳ ವ್ಯಾಸಂಗದಲ್ಲಿಯೂ ವಿಶೇಷ ಆಸಕ್ತಿ ವಹಿಸಿದರು. ಆ ಕಾಲದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳೂ ಕೂಡ ಮಿಶನರಿಗಳ ಜೊತೆಗೆ ಕನ್ನಡ ಭಾಷೆ ಸಾಹಿತ್ಯಗಳ ಕಡೆಗೆ ವಿಶೇಷ ಗಮನ ಹರಿಸಿದರು. ಹೀಗೆ ಕರ್ನಾಟಕಕ್ಕೆ ಆಗಮಿಸಿದ ವಿವಿಧ ಪಂಥಗಳ ಸುಮಾರು 120 ಮಂದಿ ಕ್ರೈಸ್ತ ಮಿಶನರಿಗಳು ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಗೆ ಅನೋಘ ಸೇವೆ ಸಲ್ಲಿಸಿದರು.

ಮತಪ್ರಸಾರದ ದೃಷ್ಟಿಯಿಂದ ಅವರು ಹಲವಾರು ಪುಸ್ತಕ, ಪುಸ್ತಿಕೆಗಳನ್ನು ಪ್ರಕಟಿಸಿದರು ; ಶಾಸ್ತ್ರ, ಪುರಾಣಗಳನ್ನು ಅನುವಾದಿಸಿ ಪ್ರಕಟಿಸಿದರು ; ಆಗ ಕನ್ನಡ ನಾಡಿನ ದೇಶೀಯ ಜನರೂ ಕೂಡ ತಮ್ಮದೇ ಆದ ರೀತಿಯಲ್ಲಿ ಸಾಹಿತ್ಯ ರಚಿಸ ತೊಡಗಿದರು. ಆ ಕಾಲದಲ್ಲಿ ಸ್ವತಂತ್ರ ಕೃತಿಗಳಿಗಿಂತಲೂ ಅನುವಾದ, ಪರಿಷ್ಕರಣ ಕಾರ್ಯಗಳೇ ಹೆಚ್ಚಾಗಿ ನಡೆದುವು. ಹೀಗಾಗಿ ಅನೇಕ ಪ್ರಾಚೀನ ಗ್ರಂಥಗಳು ಬೆಳಕು ಕಂಡವು. ಎಲ್ಲಕ್ಕಿಂತ ಮಿಗಿಲಾಗಿ ಮಿಶನರಿಗಳು ಕನ್ನಡ–ಇಂಗ್ಲಿಷ್ ಕೋಶಗಳ, ವ್ಯಾಕರಣ ಗ್ರಂಥಗಳ ರಚನೆಗೆ ವಿಶೇಷ ಗಮನ ನೀಡಿದರು. ಮಿಶನರಿಗಳ ಅಂದಿನ ಆ ಪರಿಶ್ರಮವೇ ಇಂದು ಕನ್ನಡಕ್ಕೆ ಸಿಕ್ಕ ಸ್ಥಾನಮಾನಗಳಿಗೆ ಬಹುಮಟ್ಟಿಗೆ ಕಾರಣವಾಗಿದೆ ಯೆಂದರೆ ಅತಿಶಯೋಕ್ತಿಯಲ್ಲ. ಮಿಶನರಿಗಳ ಕನ್ನಡ ಸೇವೆಯ ಬಗ್ಗೆ ಡಾ. ವರದರಾಜ ಹುಯಿಲಗೋಳ ಅವರು "ಕನ್ನಡ ನುಡಿಯನ್ನು ರಕ್ತಗತ ಮಾಡಿಕೊಂಡು ವಿದ್ವತ್ ಪೂರ್ಣವಾದ ಗ್ರಂಥಗಳನ್ನು ಪ್ರಕಾಶನಗೊಳಿಸಿ, ಕಗ್ಗತ್ತಲೆಯಲ್ಲಿದ್ದ ಕನ್ನಡನಾಡಿಗೆ ಬೆಳಕು ತೋರಿರುವರು. ಬಹು ದೂರದಿಂದ ಬಂದವರಾದರೂ ನಮಗೆ ಅತ್ಯಂತ ಸನಿಹ ದವರಾಗಿರುವರು "[1] ಎಂದು ಪ್ರಶಂಸಿರುವುದು ಅತಿಶಯೋಕ್ತಿಯೇನಲ್ಲ.

ಕನ್ನಡ ಸಾಹಿತ್ಯವು ಮಡುಗಟ್ಟಿ ನಿಂತಾಗ ಅದಕ್ಕೆ ಒಂದು ಹೊಸ ಚೇತನವನ್ನು ತುಂಬಿದವರೆಂದರೆ ಈ ಮಿಶನರಿಗಳೆನ್ನಲು ಅಡ್ಡಿಯಿಲ್ಲ. ಹೊಸಗನ್ನಡದ ಆರಂಭಕಾಲೀನ ಸಾಹಿತ್ಯ ಪ್ರಪಂಚದಲ್ಲಿ ಇವರೆಲ್ಲರ ಹೆಸರು ಕಲ್ಪಾಂತರ ಸ್ಥಾಯಿಯಾಗಿದೆ. East is East and West is West, never the twain shall meet ಎಂಬ ಮಾತು ಇವರ ಕೃತಿಗಳಿಂದ, ಪರಿಶ್ರಮದಿಂದ ಹುಸಿಯಾಯಿತು. ಈ ಮಿಶನರಿಗಳೇ ಪೂರ್ವ ಪಶ್ಚಿಮಗಳನ್ನು ಸೇರಿಸುವ ಸೇತುವಾದರು. ಉಷ್ಣವಲಯದ ವಾಯುಗುಣದ ಒತ್ತರದಲ್ಲಿದ್ದುಕೊಂಡು, ಆಧುನಿಕ ವ್ಯವಸ್ಥಿತ ಸಾಧನ–ಸಹಕಾರವಿಲ್ಲದೆ, ದೇಶಿಯ ಜನರ ತಿರಸ್ಕಾರ, ಉಪೇಕ್ಷೆಗಳನ್ನು ಸಹಿಸಿಕೊಂಡು ಹಗಲಿರುಳೂ ದುಡಿದು ಕನ್ನಡದ ಕಾಯಕ ವನ್ನು ಮಾಡಿದ ಮಿಶನರಿಗಳಿಗೆ ಕನ್ನಡಿಗರು ಕೃತಜ್ಞರಾಗಿರಬೇಕಾಗುತ್ತದೆ. ಮಿಶನರಿ ಗಳ ಬಗ್ಗೆ ಶ್ರೀ ಇ. ಪಿ. ರೈಸ್ ಅವರು It deserves to be added that Kanarese is indebted to the missionaries. Missionaries have also led the way in the careful study of the language and literature" ಎಂದು ಬರೆದಿದ್ದಾರೆ.[2] ಇದು ಶೀರ ಪ್ರಶಂಸೆಯ ಮಾತಾಗಿರದೆ ನಾವು ಕೃತಜ್ಞತೆಯಿಂದ ಸ್ಮರಿಸಬೇಕಾದ ಮಾತಾಗಿದೆ.

ಕರ್ನಾಟಕದ ಭಾಷೆ ಸಾಹಿತ್ಯದ ಅಧ್ಯಯನಕ್ಕೆ ಮಿಶನರಿಗಳು ಸಲ್ಲಿಸಿದ್ದ ಸೇವೆ ಯನ್ನು ಕುರಿತು A number of western scholars like Mackenzee, Fleet, Wilkics, Kittel, Zugler, Stokes and Rice made valuable contributions not only to the

historical studies but also to the study of the literature and language of Karnataka ಎಂದು ಬರೆಯಲಾಗಿದೆ.[3]

ಕರ್ನಾಟಕಕ್ಕೆ ಆಗಮಿಸಿದ ವಿವಿಧ ಪಂಥಗಳ ಮಿಶನರಿಗಳು

ಕರ್ನಾಟಕಕ್ಕೆ ಬಂದ ಕ್ರೈಸ್ತಮಿಶನರಿಗಳಲ್ಲಿ, ಗೋವೆಯ ಜೆಸೂಯಿಟ್ ಪಾದ್ರಿಗಳು, ಲಂಡನ್‌ಮಿಶನ್ ಸಂಸ್ಥೆಯ ಮಿಶನರಿಗಳು, ವೆಸ್ಲಿಯನ್ ಮೆಥಾಡಿಸ್ಟರು ಮತ್ತು ಬಾಸೆಲ್‌ಮಿಶನ್ನಿನ ಮಿಶನರಿಗಳು ಮುಖ್ಯರು. ತಮ್ಮ ಮತ ಪ್ರಚಾರ ಕಾರ್ಯ ಅಡೆತಡೆಯಿಲ್ಲದೆ ಸಾಗಬೇಕಾದರೆ ದೇಶೀಯ ಭಾಷೆಗಳಲ್ಲಿ ಗ್ರಂಥರಚನೆಯಾಗಬೇಕು ; ಅವರ ತಾಯುನುಡಿಯಲ್ಲೇ ಬೋಧನೆ ನಡೆಯಬೇಕು ; ಆಗ ಮಾತ್ರ ಅದು ಅವರ ಮನಸ್ಸನ್ನು ತಟ್ಟಬಲ್ಲದು ಎಂಬ ಸತ್ಯವನ್ನು ಮಿಶನರಿಗಳು ಮನಗಂಡರು. ಮೊದಮೊದಲು ಅವರು ದೇಶೀಯರ ಅನಾದರ ಮತ್ತು ಪ್ರತಿಭಟನೆಗಳನ್ನು ಎದುರಿಸಬೇಕಾಯಿತು. ಆದರೂ ಅವರು ತಾಳ್ಮೆಯಿಂದ ಕಾರ್ಯನಿರ್ವಹಿಸಿದರು ; ಇಲ್ಲಿನ ಜನಭಾಷೆಯನ್ನು ಕಲಿತರು ; ಬೈಬಲ್ ಮತ್ತಿತರ ಮತತತ್ವದ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಮುದ್ರಣಾಲಯಗಳನ್ನು ಸ್ಥಾಪಿಸಿ ಆ ಗ್ರಂಥಗಳನ್ನು ಅಚ್ಚಿಸಿದರು ; ಜೊತೆಗೆ ಎಲ್ಲ ಪಂಥಗಳ ಮಿಶನರಿಗಳು ಕನ್ನಡ ಭಾಷೆಯ ವ್ಯಾಕರಣ ಕೋಶಗಳನ್ನು ರಚಿಸಿದರು. ಮಿಶನ್ನುಗಳು ಶಾಲಾ ಮಕ್ಕಳಿಗಾಗಿ ಪಠ್ಯಪುಸ್ತಕಗಳನ್ನು ರಚಿಸಿದುವು.

1. **ಜೆಸೂಯಿಟ್ ಪಾದ್ರಿಗಳು :** ಇವರು ಕರ್ನಾಟಕಕ್ಕೆ ಬಂದ ಮೊದಲ ಮಿಶನರಿಗಳು. ಕ್ರಿ.ಶ. 16ನೇ ಶತಮಾನದಿಂದ 18ನೆಯ ಶತಮಾನದವರೆಗೆ ಗೋವೆಯನ್ನು ತಮ್ಮ ಕೇಂದ್ರವನ್ನಾಗಿಸಿ ದಕ್ಷಿಣ ಭಾರತದಲ್ಲಿ ಕೊಂಕಣಿ, ಮರಾಠಿ, ತಮಿಳು ಮಲಯಾಳಂ ಭಾಷೆಗಳಲ್ಲಿ ಗ್ರಂಥರಚನೆ ಮಾಡಿದರು. ಕರ್ನಾಟಕಕ್ಕೆ ಆಗಮಿಸಿದ್ದ ಜೆಸೊಯಿಟ್ ಪಾದ್ರಿಗಳು ಗೋವೆಯಲ್ಲಿ ಕೆಲವಾರು ಕನ್ನಡ ಗ್ರಂಥಗಳನ್ನು ಮುದ್ರಿಸಿದ್ದರೆಂದು ತಿಳಿದುಬರುತ್ತದೆ ಮೈಸೂರು ಅರಸರಾಗಿದ್ದ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಲಿಯೋನಾರ್ಡೋಸಿನ್ನಾಮಿ (1609–1676) ಸನ್ಯಾಸಿವೇಷದಲ್ಲಿ ಮೈಸೂರು ಸಂಸ್ಥಾನಕ್ಕೆ ಆಗಮಿಸಿದರು. ನರಸರಾಜ ಒಡೆಯರು ಅವರಿಗೆ ರಕ್ಷಣೆ ನೀಡಿದರು, ಮತ ಪ್ರಚಾರಕ್ಕೂ ಅನುಮತಿ ನೀಡಿದರು. ಸಿನ್ನಾಮಿಯು ಶ್ರೀರಂಗಪಟ್ಣ, ಮೈಸೂರುಗಳಲ್ಲಿ ನಿಂತು ಮತ ಪ್ರಸಾರಕಾರ್ಯವನ್ನು ಕೈಗೊಂಡರು. ಫಾದರ್ ಸಿನ್ನಾಮಿಯವರು ಮೈಸೂರಿನ ಭಾಷೆಯ ಕೋಶ ಮತ್ತು ವ್ಯಾಕರಣ ಗ್ರಂಥಗಳನ್ನು ಬರೆದರು. ಅವರು ಬರೆದ ಕನ್ನಡ ಗ್ರಂಥಗಳು ನಮಗೆ ದೊರೆತಿಲ್ಲ. ಆದರೆ ಸೋಮರ್ ಫೊಗೆಲ್ ಅವರ ವರದಿಯಂತೆ ಫಾದರ್ ಸಿನ್ನಾಮಿಯು ಕ್ರೈಸ್ತಧರ್ಮದ ರಹಸ್ಯ ತತ್ವಗಳನ್ನು ಕುರಿತ ಸುದೀರ್ಘ ಪ್ರಶ್ನೋತ್ತರ ; ಅದರ ಸಾರರೂಪ ಕ್ರೈಸ್ತಸಂತರ ಜೀವನಚರಿತ್ರೆ, ಕ್ರೈಸ್ತಮತದ ಸಮರ್ಥನೆ ; ಮೈಸೂರ ಜನರ ಜಾತಿಗಳು, ಮೂಢ ನಂಬಿಕೆಗಳು, ಇವುಗಳ ಖಂಡನೆ ; ಕನ್ನಡ ವ್ಯಾಕರಣ ಕನ್ನಡಕೋಶ. ಎಂಬ ಕೃತಿಗಳನ್ನು ರಚಿಸಿದ್ದರೆಂದು

ತಿಳಿದು ಬಂದಿದೆ. ಅವರು ಬರೆದ ಪ್ರಶ್ನೋತ್ತರ ರೂಪದ ಮತೀಯ ಕೃತಿಗಳು ಸಿಕ್ಕಿಲ್ಲ; ಅವರು ರಚಿಸಿದ ಕನ್ನಡ ಭಾಷೆ ಮತ್ತು ವ್ಯಾಕರಣಗಳು ನಮಗೆ ವಿಶೇಷ ಮಹತ್ವದವು ಗಳಾದರೂ ಅವು ದೊರೆತಿಲ್ಲ. ಬಹುಶಃ ರೋಮ್, ಲಂಡನ್, ಲಿಸ್ಬನ್, ಪ್ಯಾರಿಸ್ ನಗರಗಳ ಗ್ರಂಥಸಂಗ್ರಹಾಲಯಗಳಲ್ಲಿ ಅವು ಸಿ ರೆಯಬಹುದೆಂದು ಕಾಣುತ್ತದೆ. "ಇದೇ ಹೊಸಗನ್ನಡದ ಮೊತ್ತಮೊದಲಿನ ವ್ಯಾಕರಣವಾಗಿದ್ದು, ಆ ಗೌರವವು ಒಬ್ಬ ಇಟಾಲಿ ಯನ್ನನಿಗೆ ಸಲ್ಲುತ್ತದೆ" ಎಂಬ ಫಿಲಿಯೋಜಿ ಹೇಳಿಕೆಯ ಆಧಾರದ ಮೇಲೆ ಸಿನ್ನಾಮಿ ಯನ್ನು ಹೊಸಗನ್ನಡದ ಮೊದಲ ಗ್ರಂಥಕಾರನೆಂದು ಹೇಳಬಹುದು.

ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಚಾರ್ಬೊನಾ ಎಂಬ ಜೆಸೂಯಿಟ್ ಪಾದ್ರಿ ಗಳು ಮೈಸೂರು ಸಂಸ್ಥಾನದ ಪ್ರಥಮ ಕೆಥೋಲಿಕ್ 'ವಿಕಾರ್ ಎಪೋಸ್ಟಲಿಕ್' ಎಂದು ನೇಮಕಗೊಂಡರು (1850). ಅವರಿಗೆ ಕೃಷ್ಣರಾಜರು ವಿಶೇಷ ಮನ್ನಣೆ ನೀಡಿದರು. ಆ ಕಾಲದಲ್ಲಿ ಸ್ಥಾಪಿತವಾದ 'ಕೆಥೋಲಿಕ್ ಪ್ರೆಸ್'ನಿಂದ ಮೂವತ್ತಕ್ಕೂ ಹೆಚ್ಚಿನ ಕನ್ನಡ ಗ್ರಂಥಗಳು ಮುದ್ರಿತವಾದುವು; ಕೆಥೋಲಿಕರ ಗ್ರಂಥೋದ್ಯಮವು ಹೀಗೆ ಚೆನ್ನಾಗಿ ನಡೆಯಿತು. ನಮಗೆ ಅವುಗಳಲ್ಲಿ ದೊರೆತ ಮೊದಲ ಕನ್ನಡ ಪುಸ್ತಕವೇ 'ದೈವಪರೀಕ್ಷೆ' (1862): ಇದು ಬೆಸ್ಕಿಯ ತಮಿಳು ಕೃತಿಯ ಕನ್ನಡಾನುವಾದ. ಚಾರ್ಬೊನಾ ಇದನ್ನು ಅನುವಾದಿಸಿದ್ದಾರೆ. ಜೊತೆಗೆ ಚಾರ್ಬೊನಾ ಅವರು, 'ಸತ್ಯ ವೇದ ಪರೀಕ್ಷೆ' (1852), 'ದಿವ್ಯವಾತ್ಸಕೆ' (1862), 'ಸುಕೃತ ಮಂತ್ರಗಳು' (1866) ಮುಂತಾದ ಕನ್ನಡಾನುವಾದಗಳನ್ನು ಹೊರತಂದರು. ಅಲ್ಲದೆ ಅವರು 'ಕೆನರಾ ಲ್ಯಾಟಿನಂ' (1853) ಮತ್ತು 'ಲ್ಯಾಟಿನೊ ಕೆನರೀಸ್' (1861) ಎಂಬ ಎರಡು ಅಮೂಲ್ಯ ಕೋಶಗಳನ್ನೂ ರಚಿಸಿದರು.

ಇದೇ ಜೆಸೂಯಿಟ್ ಸಂಸ್ಥೆಯ ಜೆ. ಬ್ಯಾರಿಲ್, ಎ. ಬೌತೆಲೋನ ಅವರು 'ಸತ್ಯೋಪದೇಶ' ಎಂಬ ಮಾಲಿಕೆಯಲ್ಲಿ ಕೆಲವು ಪುಸ್ತಿಕೆಗಳನ್ನು ಅನುವಾದಿಸಿದರು. ಬೌತೆಲೋ ಸಂಕ್ಷಿಪ್ತ ಬೈಬಲನ್ನು ರಚಿಸಿದರು.4 ಜೊತೆಗೆ ರೋಮನ್ ಕೆಥೋಲಿಕ್ ಚರ್ಚ್‌ನ ಇತಿಹಾಸವನ್ನು ಅನುವಾದಿಸಿದರು. ಚಾರ್ಬೊನಾ ಕೈಗೊಂಡಿದ್ದ ಕನ್ನಡ-ಲ್ಯಾಟಿನ್ ವ್ಯಾಕರಣ ಗ್ರಂಥರಚನೆಯನ್ನು ಮುಂದುವರಿಸಿ 'ಲತೀನು ವ್ಯಾಕರಣ'ವನ್ನು ಬರೆದನು.5 ಅದೇ ವರ್ಷ ಲ್ಯಾಟಿನ್ ಭಾಷೆಯಲ್ಲಿ ಕನ್ನಡ ಛಂದಸ್ಸನ್ನು ಕುರಿತ ಸಣ್ಣ ಪುಸ್ತಿಕೆಯನ್ನು ಪ್ರಕಟಿಸಿದನು.

2. **ಲಂಡನ್ ಮಿಶಿನ್ ಸಂಸ್ಥೆಯ ಮಿಶನರಿಗಳು :** ಈ ಸಂಘಕ್ಕೆ ಸೇರಿದ ಜಾನ್ ಹ್ಯಾಂಡ್ಸ್ ಕರ್ನಾಟಕಕ್ಕೆ ಆಗಮಿಸಿದ್ದ ಆದ್ಯ ಮಿಶನರಿ. ಅದ್ದರಿಂದ ಮುಂದೆ ಬರುವ ಮಿಶನರಿಗಳಿಗಾಗಿ ಕನ್ನಡದ ಪಾಠಕಲಿಕೆಗೆ ಇವರು ಸಿದ್ಧತೆಗಳನ್ನು ನಡೆಸಬೇಕಾ ಯಿತು. ತಾವು ಸ್ವತಃ ಕನ್ನಡ ಕಲಿತುಕೊಂಡು ಇವರು ತನ್ನ ಸಹೋದ್ಯೋಗಿಗಳಿಗಾಗಿ ಕನ್ನಡ ವ್ಯಾಕರಣ ಮತ್ತು ಶಬ್ದಕೋಶ ರಚನೆಯ ತಯಾರಿ ನಡೆಸಿದರು (1812-13)

ಆದರೂ ಅದು ಪ್ರಕಟವಾಗಲಿಲ್ಲ. ಮುಂದೆ ರೀವ್ ಮತ್ತಿತರರು ಕೋಶ, ವ್ಯಾಕರಣ ಭಾಷಾ ಕೈಪಿಡಿಗೆ ಹ್ಯಾಂಡ್ಸನ ಈ ಸಂಗ್ರಹವನ್ನು ಬಳಸಿಕೊಂಡಿರಬೇಕೆಂದು ಕಾಣುತ್ತದೆ. ಹ್ಯಾಂಡ್ಸ್ ಬೈಬಲನ್ನು ಕನ್ನಡಕ್ಕೆ ಅನುವಾದಿಸಿದ್ದರು. 1817ರಲ್ಲಿ ಹ್ಯಾಂಡ್ಸ್ ತಮ್ಮ ಸಹೋದ್ಯೋಗಿಗಳೊಡನೆ ಶ್ರೀರಾಮಪುರದ ದೇಶೀ ಕ್ರಿಸ್ತೀಯರಾಗಿದ್ದ 'ಪೀತಾಂಬರ ಸಿಂಹನ ನೆನಹುಗಳು', 'ಯೇಸುಕ್ರಿಸ್ತನ ಅವತಾರ', 'ಪರಿಶುದ್ಧಿಯ ಮಾರ್ಗ ವಿವರಣೆ' ಇವುಗಳನ್ನ ಅನುವಾದಿಸಿ ಬೈಬಲ್ ಸಂಘದ ಮೂಲಕ ಪ್ರಕಟಿಸಿದರು. ಬೈಬಲ್ಲಿನ ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳನ್ನು ಪ್ರಕಟಿಸಿದರು. ಹೀಗೆ ಕನ್ನಡದಲ್ಲಿ ಸಮಗ್ರ ಬೈಬಲ್ ಅನ್ನು ಮೊದಲ ಬಾರಿಗೆ ತಂದ ಶ್ರೇಯಸ್ಸು ಹ್ಯಾಂಡ್ಸ್ ಅವರಿಗೆ ಸಲ್ಲುತ್ತದೆ. ಕರ್ನಾಟಕದ ಮೇಲೆ ಅಪಾರ ಅಭಿಮಾನ ತಾಳಿದ ಇವರು ಕರ್ನಾಟಕದಲ್ಲಿ ಪ್ರೊಟೆಸ್ಟಂಟ್ ಮತಪ್ರಸಾರಕ್ಕೆ ಭದ್ರ ಬುನಾದಿ ಹಾಕಿ ಕನ್ನಡದಲ್ಲಿ ಮುದ್ರಣ ಕಾರ್ಯವನ್ನು ಆರಂಭಿಸಿದ್ದರಿಂದ ಕನ್ನಡಿಗರು ಹ್ಯಾಂಡ್ಸ್‌ಅವರ ಹೆಸರನ್ನು ಮರೆಯುವಂತಿಲ್ಲ. ಇದೇ ಪಂಥದ ಜಾನ್ ರೀಡ್, ಬೆಯ್ನನ್, ಕ್ಯಾಂಬೆಲ್ ಮುಂತಾದ ಮಿಶನರಿಗಳು ಮತಪ್ರಸಾರದ ಜೊತೆಗೆ ಕನ್ನಡ ಭಾಷಾ ಸಾಹಿತ್ಯಗಳ ಬೆಳವಣಿಗೆಗೂ ದುಡಿದರು. ಹಾಂಡ್ಸನಿಗೆ ಬೈಬಲಾನುವಾದಕ್ಕೆ ನೆರವು ನೀಡಿದ ಮಿಶನರಿ ರೀಡ್ ಕನ್ನಡ ಮತ್ತು ಇಂಗ್ಲಿಷ್‌ನ ಕೆಲವಾರು ಮತ ಪುಸ್ತಕಗಳನ್ನು ತೆಲುಗಿಗೆ ಅನುವಾದಿಸಿದರು. 'ಇಂಗ್ಲಿಷ್ ಭಾಷೆಯನ್ನು ಕಲಿಯುವುದಕ್ಕೆ ಸಹಾಯವು' ಎನ್ನುವುದು ರೀಡ್‌ನ ವಿಶಿಷ್ಟ ಕೃತಿ (1835). ರೀಡ್‌ನ ಭಾಷಾ ಸಾಹಿತ್ಯ ಸೇವೆಯ ಬಗೆಗೆ ಕಲ್ಕತ್ತೆಯ ಮುಂಡಿ ಎಂಬ ಮಿಶನರಿಯು "ಈ ಅವಧಿಯಲ್ಲಿ ಅವನು ಪಟ್ಟಶ್ರಮ, ತೋರಿದ ಪ್ರಗತಿ ನನ್ನನ್ನು ಬೆರಗುಗೊಳಿಸಿದುವು. ಅಷ್ಟರೊಳಗೆ ಅವನು ಹೊಸ ಒಡಂಬಡಿಕೆಯ ಕನ್ನಡ ರೂಪವನ್ನು ಸುಲಭವಾಗಿ ಓದಬಲ್ಲವನಾಗಿದ್ದನು. ವ್ಯಾಕರಣದ ತೊಡಕಿನ ಅಂಶಗಳನ್ನು ಅರಿತುಕೊಂಡಿದ್ದು ಇಂಗ್ಲೀಷ್-ಕನ್ನಡ ಕೋಶದಿಂದ (ರೀವ್‌ನದು) ಜನಬಳಕೆಯ ಐದಾರು ಸಾವಿರ ಕನ್ನಡ ಶಬ್ದಗಳನ್ನು ಆಯ್ದು ಕನ್ನಡದಲ್ಲಿ ಬರೆದಿಟ್ಟುಕೊಂಡಿದ್ದನು" ಎಂದು ಬರೆದಿದ್ದಾನೆ.[6]

ಡಬ್ಲ್ಯು. ಬೆಯ್ನನ್, ಬಿ. ಎಚ್. ರೈಸ್ ಎಂಬ ಈ ಪಂಥಕ್ಕೆ ಸೇರಿದ ಮಿಶನರಿಗಳು ಕರ್ನಾಟಕಕ್ಕೆ ಆಗಮಿಸಿದರು. ಬೆಯ್ನನ್ ಅವರು ಜಾನ್ ಬನ್ಯನ್‌ರ 'ಪಿಲ್‌ಗ್ರಿಮ್ಸ್ ಪ್ರೋಗ್ರೆಸ್' ಎಂಬ ಕೃತಿಯನ್ನು 'ದೇಶಾಂತ್ರಿಯ ಪ್ರಯಾಣ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಇನ್ನೂ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದರು.[7] ಕ್ಯಾಂಬೆಲ್ ಮೈಸೂರಿನಲ್ಲಿ ತಮ್ಮ ಮಿಶನ್ನಿನ ವತಿಯಿಂದ 1835ರಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿದರು, ಪ್ರಾಥಮಿಕ ಶಾಲೆಯನ್ನೂ ಆರಂಭಿಸಿದರು. ಮಕ್ಕಳಿಗಾಗಿ 'ಕನ್ನಡ ವ್ಯಾಕರಣಸಾರ' ಎಂಬ ಪುಸ್ತಕ ಬರೆದರು. ಈ ವಿಷಯದಲ್ಲಿ ಇದೇ ಕನ್ನಡದ ಮೊತ್ತಮೊದಲ ಪಠ್ಯಪುಸ್ತಕ. ಆಗ ಮುಂಬೈನ ಶಿಕ್ಷಣಾಧಿಕಾರಿಯಾಗಿದ್ದ ಜಾಂಭೇಕರ್ ಇದರ ಪ್ರತಿಗಳನ್ನು ತರಿಸಿಕೊಂಡಿದ್ದರಂತೆ. 1894ರಲ್ಲಿ ಈ ಪುಸ್ತಕದ 12ನೆಯ ಆವೃತ್ತಿ ಪ್ರಕಟವಾಗಿದ್ದು, ಇದು ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಆವಶ್ಯಕ ಕ್ರಮಿಕ ಪುಸ್ತಕವಾಗಿ

ಮುಂದುವರಿದಿರಬೇಕೆಂದು ತೋರುತ್ತದೆ. 1850ರ ನಂತರ ಬೆಂಗಳೂರಿನ ಸೆಮಿನರಿಯಲ್ಲಿ ಇವರು ಕನ್ನಡ ಬೋಧನೆ ಮಾಡಿದರು. ಜೊತೆಗೆ ಅನೇಕ ಕನ್ನಡ ಪಠ್ಯಪುಸ್ತಕಗಳನ್ನು ರಚಿಸಿದರು. ಮುಂದೆ ಮಿಶನರಿಯಾಗಿ ಆಗಮಿಸಿದ ಈ ಪಂಥದ ಬಿ. ಎಚ್. ರೈಸ್ ಮತ ಪ್ರಸಾರದ ಜೊತೆಗೆ ಶಿಕ್ಷಣ, ಪಠ್ಯ ಮತ್ತಿತರ ಗ್ರಂಥಗಳನ್ನು ರಚಿಸಿದರು. ಅವರು ಪ್ರತಿ ಕೋಶ್ಯಮದಲ್ಲಿಯೂ ಕೈಯಾಡಿಸಿದರು. 'ಕನ್ನಡ ಸಂಗೀತಗಳು', ಗಣಿತ ಭೂಗೋಲಗಳ ಪ್ರಾರಂಭಿಕ ಪುಸ್ತಕಗಳು 'ಚಿಕ್ಕವರಿಗೆ ತಕ್ಕಪಾಠಗಳು' ಎಂಬ ವಾಚನ ಮಾಲೆಯನ್ನು ಸಂಪಾದಿಸಿದರು. ತನ್ನ ಸಹೋದ್ಯೋಗಿಯಾಗಿದ್ದ ಸಿವೆಲ್‌ನ ಜೊತೆಯಲ್ಲಿ ಬೈಬಲ್ಲಿನ ಒಂದು ನೂರು ಪ್ರಮುಖ ಅಂಶಗಳನ್ನಾಯ್ದು ಟಿಪ್ಪಣಿಸಹಿತ 'ವೇದಸಂಗ್ರಹ' ಎಂದು ಗ್ರಂಥರೂಪದಲ್ಲಿ ಪ್ರಕಟಿಸಿದರು (1844). ಮೂಲ ಕನ್ನಡ ಬೈಬಲ್‌ಗಿಂತಲೂ ಹೆಚ್ಚಾಗಿ ಇದು ಪ್ರಸಾರಹೊಂದಿ ಅನೇಕ ಮರು ಮುದ್ರಣಗಳನ್ನು ಕಂಡಿತು. ಕ್ರೈಸ್ತ ಮತ ಪ್ರಸಾರಕ್ಕಾಗಿ 'ಅರುಣೋದಯ'ವೆಂಬ ಆಂಗ್ಲ-ಕನ್ನಡ ಮಾಸಪತ್ರಿಕೆಯನ್ನು ಆರು ವರ್ಷಗಳವರೆಗೆ ನಡೆಸಿದರು (1861 ರಿಂದ). ಮಿಶನರಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದ ಇವರನ್ನು ಸಾರ್ವಜನಿಕರು ಎರಡೆರಡು ಬಾರಿ ಸತ್ಕರಿಸಿದರು. ಅವರ ಅನಂತರ ಲೂಯಿ ಮತ್ತು ಎಡ್ವರ್ಡ್ ರೈಸ್ ಕನ್ನಡದ ಕಾರ್ಯವನ್ನು ಮುಂದುವರಿಸಿದರು ಹೀಗೆ ಹೊಸಗನ್ನಡದ ಇತಿಹಾಸದಲ್ಲಿ ರೈಸ್ ಮನೆತನದ ಸೇವೆ ಚಿರಸ್ಮರಣೀಯ.

3. **ವೆಸ್ಲಿಯನ್ ಮೆಥಾಡಿಸ್ಟರು :** ಕರ್ನಾಟಕಕ್ಕೆ ಕ್ರೈಸ್ತ ಮತ ಪ್ರಚಾರಕ್ಕೆ ಆಗಮಿಸಿದ ಮಿಶನರಿಗಳಲ್ಲಿ ಹೆಚ್ಚಿನವರು ಈ ಪಂಥಕ್ಕೆ ಸೇರಿದವರು. ಇವರು ಸ್ವಯಂ ಗ್ರಂಥರಚನೆಗೆ ವಿಶೇಷ ಗಮನ ನೀಡಲಿಲ್ಲ. ಆದರೆ ಶಿಕ್ಷಣ ಮತ್ತು ಮುದ್ರಣ ರಂಗಗಳಲ್ಲಿ ವಿಶೇಷವಾಗಿ ದುಡಿದರು. ಜಾನ್ ಗ್ಯಾರೆಟ್, ಡ್ಯಾನಿಯಲ್ ಸ್ಯಾಂಡರ್ಸನ್, ಜಾನ್ ಸ್ಟೀವೆನ್ಸನ್ ಮತ್ತು ಹೆನ್ರಿಹೇಗ್ ಕರ್ನಾಟಕಕ್ಕೆ ಆಗಮಿಸಿದ್ದ ಈ ಪಂಥದ ಮುಖ್ಯ ಮಿಶನರಿಗಳು. ಬೆಂಗಳೂರಿನಲ್ಲಿ ಸ್ಥಾಪಿತವಾಗಿದ್ದ ಮಿಶನ್ನಿನ ಇಂಗ್ಲಿಷ್ ಶಾಲೆಯ ಉತ್ಕರ್ಷಕ್ಕಾಗಿ ಜಾನ್‌ಗ್ಯಾರೆಟ್ ಸಲ್ಲಿಸಿದ್ದ ಸೇವೆಯನ್ನು ಮನಗಂಡು ಆಗಿನ ಮೈಸೂರು ಸರ್ಕಾರದ ಕಮಿಷನರು ಅವರನ್ನು ಇಡೀ ಮೈಸೂರು ಸಂಸ್ಥಾನದ ಶೈಕ್ಷಣಿಕ ಯೋಜನೆಗೆ ಸಂಬಂಧಿಸಿದಂತೆ ಶಿಕ್ಷಣಾಧಿಕಾರಿಯನ್ನಾಗಿ ಆಮಂತ್ರಿಸಿದರು.' ಚಿಕ್ಕವರಿಗೆ ತಕ್ಕಂಥ ಪಾಠಗಳು' ಎಂಬುವು ಕ್ರಮಿಕ ಪುಸ್ತಕಮಾಲಿಕೆಯಲ್ಲಿ ಪ್ರಕಟವಾದ ಇವರ ಮೊದಲ ಪುಸ್ತಕ. ಸುಮಾರು ಹನ್ನೊಂದು ಸಾವಿರ ಬಳಕೆಯ ಇಂಗ್ಲಿಷ್ ಪದಗಳ ಅರ್ಥವನ್ನೊಳಗೊಂಡ ಇಂಗ್ಲಿಷ್-ಕನ್ನಡ ನಿಘಂಟು ಎಂಬ ಸುಧಾರಿತ ಕೋಶವನ್ನು ಅವರು ಪ್ರಕಟಿಸಿದರು (200 ಪ್ರತಿಗಳು). ಮೂರು ತಿಂಗಳಲ್ಲಿಯೇ ಈ ಪ್ರತಿಗಳು ಮುಗಿದುಹೋದುವು. ಹೀಗಾಗಿ ಇದರ ತಿದ್ದಿದ ಆವೃತಿಯನ್ನು ಹೊರತರಲಾಯಿತು. ಮರುವರ್ಷ ರೀವ್‌ನ ನಿಘಂಟನ್ನಾಧರಿಸಿ ಹದಿನಾರು ಸಾವಿರಕ್ಕೂ ಮೇಲ್ಪಟ್ಟ ಶಬ್ದಗಳನ್ನೊಳಗೊಂಡ ಕನ್ನಡ-ಇಂಗ್ಲಿಷ್ ಕೋಶವನ್ನು ಹೊರತಂದರು. ಇದು ಹೊಸಗನ್ನಡದ

ಜನಪ್ರಿಯ ಕನ್ನಡ–ಇಂಗ್ಲಿಷ್ ಕೋಶವಾಗಿ ಪರಿಣಮಿಸಿತು. ಗ್ಯಾರೆಟ್, ಭಗವದ್ಗೀತೆಯ ಬಹು ಭಾಷಾ ಆವೃತ್ತಿಯನ್ನು ಹೊರತಂದರು. ಇದು ಅವರಿಗೆ ಅಖಿಲ ಭಾರತ ಮಟ್ಟದಲ್ಲಿ ಕೀರ್ತಿಯನ್ನು ತಂದುಕೊಟ್ಟಿತು. 1865ರಲ್ಲಿ ಗ್ಯಾರೆಟ್ 'ಪಂಚತಂತ್ರ'ವನ್ನು ಕನ್ನಡಿಸಿದರು. ಬಿ. ರಾಮರಾವ್ ಅವರ 'ರೇಖಾಗಣಿತ'ವನ್ನು ಸಂಪಾದಿಸಿ ವಿದ್ಯಾ ಇಲಾಖೆಯಿಂದ ಅದನ್ನು ಪ್ರಕಟಿಸಿದರು (1866). 'ಪ್ರಾಕ್ಕಾವ್ಯ ಮಾಲಿಕೆ' 'ಶಬ್ದಮಣಿ ದರ್ಪಣ'–ಇವು ಗ್ಯಾರೆಟ್ ಪ್ರಕಟಿಸಿದ ಇತರ ಪುಸ್ತಕಗಳು. ಗ್ಯಾರೆಟ್ ಅಂತಿಮವಾಗಿ ಪ್ರಕಟಿಸಿದ ಮಹತ್ವದ ಕೃತಿಯೆಂದರೆ ಹಿಂದೂ ನಾಮಕೋಶ.[8]

ಕರ್ನಾಟಕಕ್ಕೆ ಈ ಪಂಥದ ಮಿಶನರಿಯಾಗಿ ಆಗಮಿಸಿದ್ದ ಸ್ಯಾಂಡರ್ಸನ್, ಬೈಬಲ್‌ನ ಅಧಿಕೃತ ಪರಿಷ್ಕರಣ ಸಮಿತಿಯಲ್ಲಿದ್ದು ಬೈಬಲ್ ಸಾಹಿತ್ಯಕ್ಕೆ ಅಮೋಘ ಸೇವೆಸಲ್ಲಿಸಿದರು. ಸಿ. ಎನ್. ಹಾಲ್ ಅವರ Come to Jesus ಎಂಬ ಕೃತಿಯನ್ನು ಇವರು ಕನ್ನಡಕ್ಕೆ ಅನುವಾದಿಸಿದರು. 'ಕನ್ನಡ ಕಥಾಸಂಗ್ರಹ' (1863)ವನ್ನು ಪ್ರಕಟಿಸಿದರು. ಇದು ಅವರ ಜನಪ್ರಿಯ ಕೃತಿ. 'ಕನ್ನಡ–ಇಂಗ್ಲೀಷ್ ಕೋಶ' ಎಂಬುವುದು ಇದರಿಂದ ಪರಿಷ್ಕೃತವಾದ ಮಹತ್ವದ ಕೃತಿ. ಇವರು ಕನ್ನಡದಲ್ಲಿ ಜೈಮಿನಿ ಭಾರತವನ್ನೂ ಸಿದ್ಧಪಡಿಸಿದರು. ಅದರ ಮೊದಲನೆಯ ಆರು ಸಂಧಿಗಳನ್ನು ಟಿಪ್ಪಣಿ ಹಾಗೂ ಇಂಗ್ಲಿಷ್ ಅನುವಾದಗಳೊಂದಿಗೆ ಪ್ರಕಟಿಸಿದರು ಜೆ. ಹಡ್ಸನ್ನನ 'ಕನ್ನಡ ಸಂಭಾಷಣೆಯ ಸರಣಿಯ ಪುಸ್ತಕ'ವನ್ನು ಪರಿಷ್ಕರಿಸಿ ಪ್ರಕಟಿಸಿದರು. ಇದೇ ಪಂಥದ ಜೆ. ಸ್ಟೀವೆನ್ಸನ್ 'ಸತ್ಯವೇದ ಚರಿತ್ರೆ', 'ಭೂಗೋಳದ ಕ್ರಮಿಕ ಪುಸ್ತಕ', 'ಸೋಮೇಶ್ವರ ಶತಕ'ದ ಸಂಪಾದನಾ ಕಾರ್ಯ ನಡೆಸಿದರು. 1873ರಲ್ಲಿ ಕೆಂಪು ನಾರಾಯಣನ 'ಮುದ್ರಾಮಂಜೂಷ'ವನ್ನು ಪರಿಷ್ಕರಿಸಿ ಪ್ರಕಟಿಸಿದರು. ಇದು ಜನಪ್ರಿಯ ಕೃತಿಯಾಗಿ ಪರಿಣಮಿಸಿತು.

ಹೆನ್ರಿ ಹೇಗ್ ಕರ್ನಾಟಕಕ್ಕೆ ಆಗಮಿಸಿದ್ದ ಈ ಪಂಥದ ಕೊನೆಯ ಮಹತ್ವದ ಮಿಶನರಿ. ಈತನು 'ವೃತ್ತಾಂತ ಪತ್ರಿಕೆ'ಯನ್ನು ಆರಂಭಿಸಿದನು. ಅದು ಭಾರೀ ಜನ ಮನ್ನಣೆಗಳಿಸಿ ದ್ವಿತೀಯ ಮಹಾ ಯುದ್ಧದವರೆಗೂ ಮುಂದುವರಿಯಿತು. ಅವರು ವೆಸ್ಲಿಯನ್ ಮತಕ್ಕೆ ಸಂಬಂಧಿಸಿದಂತೆ "ವೆಸ್ಲಿ ಸಭೆಯ ಸಂಸ್ಕಾರಗಳು", "ವೆಸ್ಲಿ ಅಯ್ಯನವರ ಚರಿತ್ರೆ" ಎಂಬ ಪುಸ್ತಕಗಳನ್ನು ಪ್ರಕಟಿಸಿದರು. ಅಲ್ಲದೆ "ಕ್ರೈಸ್ತ ಜೀವನ್ಮುಕ್ತಿ ವಿವೇಕ ಮತ್ತು ಯಾಕೋಬನ ಪತ್ರಿಕೆ" ಎಂಬ ವ್ಯಾಖ್ಯಾನಕೃತಿಗಳನ್ನು ರಚಿಸಿದರು. ಬೈಬಲ್‌ನ ದ್ವಿತೀಯ ಪರಿಷ್ಕರಣ ಸಮಿತಿಯಲ್ಲಿ ವೆಸ್ಲಿಯನ್ ಪ್ರತಿನಿಧಿಯಾಗಿ ಜೆ. ಎ. ವೇಸ್ಸ್‌ರೊಂದಿಗೆ ಕೆಲಸ ಮಾಡಿದರು. ಆಗ ಮಿಶನರಿಯಾಗಿದ್ದ ಕ್ರಿಗ್ಲರ್ ಜೊತೆಯಲ್ಲಿ ಹೊಸ ಒಡಂಬಡಿಕೆಯ ಲ್ಯೂಕ್ ಮತ್ತು ಮಾರ್ಕ್ ಅವರ ಸುವಾರ್ತೆಗಳನ್ನು ಅನುವಾದಿಸಿದರು ; ಮುಂದೆ ಬೈಬಲ್ ಪರಿಷ್ಕರಣ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡರು. ಒಂದೆರಡಾಣೆ ಬೆಲೆಯ ಸುಮಾರು ಐವತ್ತಕ್ಕಿಂತ ಹೆಚ್ಚು ಪುಸ್ತಿಕೆಗಳನ್ನು ಅವರು ಪ್ರಕಟಿಸಿದ್ದಾರೆ. ಮತೀಯ ವಿಷಯ, ನಿತ್ಯಜೀವನ ಮತ್ತು ಪ್ರಪಂಚ ಪರಿಚಯಕ್ಕೆ ಸಂಬಂಧಿಸಿದಂತೆ ಈ ಪುಸ್ತಿಕೆಗಳನ್ನು ಸರಳವಾಗಿ ಕನ್ನಡದಲ್ಲಿ ಬರೆಯಲಾಗಿದೆ.

4. ಬಾಸೆಲ್ ಮಿಶನ್ನಿನ ಮಿಶನರಿಗಳು : ಹೊಸಗನ್ನಡ ಸಾಹಿತ್ಯರಂಗದಲ್ಲಿ ಬಾಸೆಲ್ ಮಿಶನರಿಗಳು ವಿಶೇಷ ಸೇವೆ ಸಲ್ಲಿಸಿರುವುದು ತಿಳಿದು ಬರುತ್ತದೆ. ಅವರ ಹಿರಿಮೆಯ ಬಗೆಗೆ ಡಾ. ಹಾವನೂರ್ ಅವರು "ಬಾಸೆಲ್ ಮಿಶನರಿಯವರು ತಮ್ಮ 60 ವರ್ಷಗಳ ಕಾಲಾವಧಿಯಲ್ಲಿ ಅನೇಕ ಹೊಸ ವಿಚಾರಗಳನ್ನು, ನವೀನ ರೂಪಗಳನ್ನು, ಸಾಹಿತ್ಯ ರಂಗದಲ್ಲಿ ಪ್ರತಿಷ್ಠಾಪಿಸಿದ್ದಾರೆ; ಹೊಸಗನ್ನಡ ಚರಿತ್ರೆಯಲ್ಲಿ ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ" ಎಂದು ಹೇಳಿದ್ದಾರೆ. ಜರ್ಮನಿಯಿಂದ ಈ ಪಂಥಕ್ಕೆ ಸೇರಿದ ಮಿಶನರಿಗಳು 1834 ರಿಂದ ಈ ಶತಮಾನದ ಆರಂಭದವರೆಗೆ ಸುಮಾರು ನೂರಕ್ಕೂ ಮೇಲ್ಪಟ್ಟು ಆಗಮಿಸಿದ್ದಾರೆ. ಅವರಲ್ಲಿ ಹರ್ಮನ್ ಮೊಗ್ಲಿಂಗ್, ಎಚ್. ಜೆ. ವೈಗಲ್, ಫರ್ಡಿನಾಂಡ್ ಕಿಟೆಲ್, ಜಿ. ವರ್ತ್ ಮತ್ತು ಎಫ್. ತ್ಸಿಗ್ಲರ್ ಮುಂತಾದ ಬಾಸೆಲ್ ಮಿಶನರಿಗಳು ಕನ್ನಡಕ್ಕೆ ವಿಶೇಷ ಕಾಣಿಕೆ ನೀಡಿದ್ದಾರೆ. ಗ್ರಂಥ ರಚನೆಯಲ್ಲಾಗಲೀ, ಅವುಗಳ ಗುಣ ಗಾತ್ರಗಳಲ್ಲಾಗಲೀ ಈ ಸಂಸ್ಥೆಯನ್ನು ಮೀರಿಸಿದವರಿಲ್ಲ.

ತನ್ನ ಇಬ್ಬರು ಜೊತೆಗಾರರೊಡಗೂಡಿ 1836ರಲ್ಲಿ ಮೊಗ್ಲಿಂಗ್ ಮಂಗಳೂರಿಗೆ ಆಗಮಿಸಿದರು. ಧಾರವಾಡ, ಹುಬ್ಬಳಿಗಳಲ್ಲಿ ಸುವಾರ್ತಾ ಪ್ರಸಾರ ಕಾರ್ಯ ಕೈಗೊಂಡರು. ಹೆಬಿಕ್ ಜೊತೆಯಲ್ಲಿ 'ಹೃದಯದರ್ಪಣ' ಎಂಬ ಚಿಕ್ಕ ಕೃತಿಯನ್ನು ರಚಿಸಿದರು. ಶಿಕ್ಷಣ, ಸಾಹಿತ್ಯ, ಧರ್ಮಪ್ರಸಾರ–ಹೀಗೆ ಮೂರು ರಂಗಗಳಲ್ಲಿ ಸೇವೆ ಸಲ್ಲಿಸುತ್ತ ಕರ್ನಾಟಕದಲ್ಲಿ ಸತತವಾಗಿ 24 ವರ್ಷ ಕಾಲ ನೆಲೆನಿಂತರು. ಇವರೊಬ್ಬ ಕರ್ತೃತ್ವಶಾಲಿ, ಸಾಹಸಿ, ಮತ್ತು ಭಾವುಕ ಮನೋಭಾವದ ಅಪರೂಪದ ಮಿಶನರಿಯಾಗಿದ್ದರು. ಅನಂತರ 1852ರಲ್ಲಿ ಕೊಡಗನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, 'ಮಂಗಳೂರು ಸಮಾಚಾರ' (1843–44), 'ಕನ್ನಡ ಸಮಾಚಾರ' ಮತ್ತು 'ಕನ್ನಡ ಸುವಾರ್ತಿಕ' (1857) ಗಳನ್ನು ಸಂಪಾದಿಸಿ ಆದ್ಯ ಪತ್ರಿಕಾಕಾರರಾದರು. ಅಲ್ಲದೆ ಕೊಡಗಿನ ಜನಜೀವನ, ಪುರಾಣೇತಿಹಾಸ, ಹಬ್ಬ–ಉತ್ಸವಾದಿಗಳು ಹುತ್ತರಿ ಹಾಡುಗಳನ್ನು ಪರಿಚಯಿಸುವ ಲೇಖನಮಾಲೆಯನ್ನು ಮದ್ರಾಸಿನ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಪ್ರಕಟಿಸಿದರು.[10] ಸಾಮಾನ್ಯವಾಗಿ ಮಿಶನರಿಗಳು ಮತಪುಸ್ತಕಗಳನ್ನು ಕನ್ನಡದಲ್ಲಿ ಅನುವಾದಿಸಿದ್ದರೆ, ಮೊಗ್ಲಿಂಗ್‌ರು 'ಈರಾರು ಪತ್ರಿಕೆ', ಮತ್ತು 'ದೈವ ವಿಚಾರಣೆ' ಮುಂತಾದ ಸ್ವತಂತ್ರ ಕನ್ನಡ ಕೃತಿಗಳನ್ನು ರಚಿಸಿದರು, ಕನ್ನಡ ಲಿಪಿಯ ಸುಧಾರಣೆಗೆ ಗಮನ ನೀಡಿದರು; 'ರಾಜೇಂದ್ರನಾಮೆ' ಯನ್ನು ಹೊಸ ಲಿಪಿಯಲ್ಲಿ ಮುದ್ರಿಸಿದರು; ನಾಡಿನ ಎಲ್ಲೆಡೆ ಸಂಚರಿಸಿ ಮೂರು ಸಾವಿರ ಗಾದೆಗಳನ್ನು ಸಂಗ್ರಹಿಸಿ, ಅವುಗಳ ಸಂಕಲನವನ್ನು ಹೊರತಂದರು. 'ಬಿಬ್ಲಿಯೊಥಿಕಾ ಕರ್ನಾಟಿಕಾ' ಮಾಲಿಕೆಯನ್ನು ಆರಂಭಿಸಿದರು. ಜೈಮಿನಿಭಾರತ, ಚೆನ್ನ ಬಸವಪುರಾಣ ಬಸವಪುರಾಣ, ತೊರವೆ ರಾಮಾಯಣ, ದಾಸರ ಹಾಡುಗಳು, ಕುಮಾರವ್ಯಾಸಭಾರತ, ಇವುಗಳನ್ನು ಮುದ್ರಿಸಲು ಶ್ರಮ ವಹಿಸಿದರು. ಇವೆಲ್ಲವುಗಳಿಗಿಂತ ಮಿಗಿಲಾಗಿ ಕನ್ನಡದ ಕೃತಿಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿದರು. ವೈಗಲ್‌ನೊಡನೆ 'ಯಾತ್ರಿಕನ ಸಂಚಾರ' 'ಚಿಕ್ಕವನಾದ ಹೆನ್ರಿಯೂ ಅವನ

ಬೋಯಿಯೂ' 'ದೇವವಾಕ್ಯ ವ್ಯಾಖ್ಯಾನ' ಮುಂತಾದ ಕೃತಿಗಳನ್ನು ರಚಿಸಿದರು. ಕನ್ನಡದಲ್ಲಿ ದಾಸರ ಹಾಡುಗಳ ಸಂಕಲನವನ್ನು ಹೊರತಂದರು.

ಬಾಸೆಲ್ ಮಿಶನರಿಯಾಗಿ ಕರ್ನಾಟಕಕ್ಕೆ ಆಗಮಿಸಿದ ಜಿ. ಎಚ್. ವೈಗಲ್ ಭಾರತೀಯ ತತ್ವಜ್ಞಾನವನ್ನು ಆಳವಾಗಿ ವ್ಯಾಸಂಗ ಮಾಡಿದರು. ಭಗವದ್ಗೀತೆಯ ಸಂಪಾದನ ಕಾರ್ಯದಲ್ಲಿ ಗ್ಯಾರೆಟ್‌ನಿಗೆ ನೆರವು ನೀಡಿದರು. ಗೀತಾಶ್ಲೋಕಗಳ ಅನುವಾದ ಕಾರ್ಯದಲ್ಲಿಯೂ ನೆರವಾದರು. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುರಿತು ಸವಿವರವಾದ ಲೇಖನವನ್ನು ZDMG ಪತ್ರಿಕೆಯಲ್ಲಿ ಪ್ರಕಟಿಸಿದ್ದು ಇವರ ಒಂದು ಅಮೋಘಕಾರ್ಯ (1846). ಹೀಗೆ ಕಿಟೆಲ್ಲರು 1875ರಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಧಿಕೃತವಾಗಿ ಬರೆಯುವುದಕ್ಕಿಂತ ಮೊದಲು, ಅಂದರೆ ಮೂವತ್ತು ವರ್ಷಗಳಿಗಿಂತ ಹಿಂದೆಯೇ ವೈಗಲ್ ಈ ವಿಷಯದಲ್ಲಿ ಆಸಕ್ತಿ ವಹಿಸಿದ್ದರೆಂಬುದನ್ನು ಮರೆಯುವಂತಿಲ್ಲ. 'ದೇವವಾಕ್ಯ ಬೋಧನೆ', 'ದೃಢೀಕರಣದ ಪ್ರಶ್ನೋತ್ತರ'–ಇವೆರಡು ವೈಗೆಲ್‌ನ ಮತೀಯಕೃತಿಗಳು. ಬನ್ಯನ್‌ನ 'ಪಿಲ್‌ಗ್ರಿಮ್ಸ್‌ಪ್ರೋಗ್ರೆಸ್'ನ ಮೊದಲ ಭಾಗವನ್ನು (ಯಾತ್ರಿಕನ ಸಂಚಾರ) ವೈಗಲ್ ಅನುವಾದಿಸಿದರು. 1854ರಲ್ಲಿ ಪ್ರಕಟವಾದ ಹೊಸ ಒಡಂಬಡಿಕೆಯ ಬೈಬಲ್ ಆವೃತ್ತಿಯ ಪರಿಷ್ಕರಣ ಸಮಿತಿಯ ಅಧ್ಯಕ್ಷರಾಗಿ ವೈಗಲ್ ಸೇವೆ ಸಲ್ಲಿಸಿದರು.

ಡಬ್ಲ್ಯೂವರ್ತ್ ಎಂಬ ಬಾಸೆಲ್ ಮಿಶನರಿ ಕರ್ನಾಟಕಕ್ಕೆ ಬಂದ ಮೇಲೆ ಕನ್ನಡವನ್ನು ಆಳವಾಗಿ ಅಭ್ಯಾಸ ಮಾಡಿದರು. ಸಂಸ್ಕೃತದಲ್ಲಿ ಪಾರಂಗತನಾಗಿದ್ದ ವರ್ತ್ 'ಪ್ರಾಕ್ಕಾವ್ಯಮಾಲಿಕೆ' (1868) ಎಂಬ ಕೃತಿಯನ್ನು ರಚಿಸಿದರು. ಇದರಿಂದ ಅವರು ಉತ್ತರ ಕರ್ನಾಟಕದ ಶೈಕ್ಷಣಿಕ ವಲಯದಲ್ಲಿ ಹೆಚ್ಚು ಪರಿಚಿತರಾದರು. 'ಬಸವ ಪುರಾಣ' ಮತ್ತು 'ಚೆನ್ನಬಸವ ಪುರಾಣ' ಗಳ ಸುದೀರ್ಘ ಕಥಾಸಾರವನ್ನು ಇವರು ಇಂಗ್ಲಿಷ್‌ನಲ್ಲಿ ಬರೆದು ರಾಯಲ್ ಏಶಿಯಾಟಿಕ್ ಸೊಸೈಟಿಯ ಮುಂಬೈ ಪತ್ರಿಕೆಯಲ್ಲಿ ಪ್ರಕಟಿಸಿದರು. 'ಈಸೋಪನ ನೀತಿಕಥೆ' ಮತ್ತು ಲಿಂಗಾಯತ ಹಾಗೂ ಕ್ರೈಸ್ತಮತಗಳನ್ನು ಹೋಲಿಸಿ ಒಂದು ಪುಸ್ತಕ ಬರೆದರು.

ಇವರಲ್ಲದೆ. ಡಬ್ಲ್ಯೂಹಾಕ್, ಗಸ್ತಾವ್‌ಕೀಸ್, ಜೆ. ಹೂಬರ್ ಮುಂತಾದ ಅನೇಕ ಮಂದಿ ಬಾಸೆಲ್ ಮಿಶನರಿಗಳು ಕರ್ನಾಟಕಕ್ಕೆ ಆಗಮಿಸಿ ಕನ್ನಡಕ್ಕೆ ಅಮೂಲ್ಯ ಸೇವೆ ಸಲ್ಲಿಸಿದರು.

ಫರ್ಡಿನಾಂಡ್ ಕಿಟೆಲ್ ಅವರ ಕನ್ನಡ ಸೇವೆ

ಬಾಸೆಲ್ ಮಿಶನರಿಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಸೇವೆ ಸಲ್ಲಿಸಿ ಚಿರಸ್ಮರಣೀಯರಾದ ಮತ್ತೊಬ್ಬ ಮಿಶನರಿಯೆಂದರೆ ಫರ್ಡಿನಾಂಡ್ ಕಿಟೆಲ್ ಅವರು. ಕಿಟೆಲ್ ಕನ್ನಡಕ್ಕೆ ನೀಡಿದ ಕಾಣಿಕೆ ಅಮೋಘವಾದುದು. ಗಾಟ್‌ಫ್ರಿಡ್ ಕಿಟೆಲ್ ಮತ್ತು ಹೆಲೆನ್ ಎಂಬ ಪ್ರೊಟೆಸ್ಟಂಟ್ ದಂಪತಿಗಳ ಹಿರಿಯ ಮಗನಾಗಿ ಹುಟ್ಟಿದ

(ತಾ. 7-4-1832) ಫರ್ಡಿನಾಂಡ್ ಕಿಟೆಲ್ ಅವರು ರೆಸ್ಟರ್‌ಹಾಫ್‌ನಲ್ಲಿಯೇ11 ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ಈಸ್ಟ್‌ಫ್ರಿಜಿಯಾದ ಜಾರಿಕ್ ನಗರದಲ್ಲಿ ಮಾಧ್ಯಮಿಕ ಶಿಕ್ಷಣ ಮುಂದುವರಿಸಿದರು. ಆದರೆ ಕಿಟೆಲ್‌ರಲ್ಲಿ ಅಪಾರ ಧಾರ್ಮಿಕ ಶ್ರದ್ಧೆಯಿದ್ದುದರಿಂದ ಇನ್ನೂ ನಾಲ್ಕು ವರ್ಷ ವ್ಯಾಸಂಗ ಮಾಡಬೇಕಾಗಿದ್ದರೂ ಉಚ್ಚ ಶಿಕ್ಷಣದ 5ನೇಯ ವರ್ಗದಲ್ಲಿದ್ದಾಗ ಶಾಲೆ ಬಿಟ್ಟು ಸ್ವಿಟ್ಸರ್‌ಲ್ಯಾಂಡಿನ ಬಾಸೆಲ್ ನಗರದಲ್ಲಿನ ಮಿಶನ್ ಕಾಲೇಜಿನ ಮತ ಶಿಕ್ಷಣಕ್ಕೆ ಸೇರಿಕೊಂಡರು. ಅಲ್ಲಿ ಮೂರು ವರ್ಷಗಳವರೆಗೆ ವ್ಯಾಸಂಗ ಮಾಡಿದರು. ಅಧ್ಯಯನ ಪೂರ್ಣಗೊಂಡ ಅನಂತರ ಕಿಟೆಲ್ ಬಾಸೆಲ್ ಮಿಶನ್ನಿನ ಪಾದ್ರಿಯಾಗಿ ಮಂಗಳೂರಿಗೆ ಆಗಮಿಸಿದರು (1853). ಆಗ ಕಿಟೆಲ್‌ರಿಗೆ 21 ವರ್ಷ ವಯಸ್ಸಾಗಿತ್ತು. ಮಂಗಳೂರಿನಲ್ಲಿ ಕಿಟೆಲ್ ಕನ್ನಡ ಕಲಿತುಕೊಂಡರು. ಆದರೆ ಕಿಟೆಲ್ ಕನ್ನಡವನ್ನು ಹೇಗೆ ಕಲಿತರು, ಯಾರಿಂದ ಕಲಿತರು, ಎಂಬುದು ತಿಳಿದು ಬಂದಿಲ್ಲ. 1871ರ ವೇಳೆಗೆ ಕಿಟೆಲ್ ಕನ್ನಡದಲ್ಲಿ ಅಗಾಧ ಪಾಂಡಿತ್ಯವನ್ನು ಗಳಿಸಿದರು. ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದರು. ಹಳಗನ್ನಡ ಕಾವ್ಯಗಳ ಶುದ್ಧ ಪ್ರತಿ ತಯಾರಿಸಿ ಅವುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುತ್ತ ಹೋದ ಹಾಗೆ ಕನ್ನಡ ಸಾಹಿತ್ಯದ ಬಗ್ಗೆ ಕಿಟೆಲ್‌ರಿಗೆ ಆಸಕ್ತಿ ಹೆಚ್ಚಲಾರಂಭಿಸಿತು. ಬಳಿಕ ಕಿಟೆಲ್ ಧಾರವಾಡ, ಮಂಗಳೂರು, ಹುಬ್ಬಳ್ಳಿ, ಆನಂದಪುರ, ಮಡಿಕೇರಿ ಮುಂತಾದ ಕಡೆಗಳಲ್ಲಿ ಮತ ಪ್ರಚಾರದ ಜೊತೆಗೆ ಕನ್ನಡದ ಕೆಲಸವನ್ನು ಮಾಡಿದರು.

ಆಗ ಹಳಗನ್ನಡ ಗ್ರಂಥಗಳ ವ್ಯಾಸಂಗಕ್ಕೆ ಹಸ್ತಪ್ರತಿಗಳೇ ಆಧಾರವಾಗಿದ್ದುವು. ಬಾಸೆಲ್ ಮಿಶನ್‌ನವರು ತಮ್ಮ 'ಬಿಬ್ಲಿಯೋಥಿಕಾ ಮಾಲಿಕೆ'ಯಲ್ಲಿ ಮಾತ್ರ ಇಂಥ ಕೆಲವು ಗ್ರಂಥಗಳನ್ನು ಪ್ರಕಟಿಸಿದ್ದರಷ್ಟೇ. ಕಿಟೆಲ್ ಅವರು ಉಳಿದ ಹಸ್ತಪ್ರತಿಗಳನ್ನು ನೋಡಿದಾಗ ಅವುಗಳಲ್ಲಿ ಅಶುದ್ಧತೆ ಇರುವುದನ್ನು ಕಂಡರು. ಹೀಗಾಗಿ ಅವರು ಹಳಗನ್ನಡ ಹಸ್ತಪ್ರತಿಗಳಿಂದ ತಾವೇ ಶುದ್ಧಪ್ರತಿಗಳನ್ನು ಸಿದ್ಧಪಡಿಸಿದರು, ಜೊತೆಗೆ ಅವುಗಳಿಗೆ ಸೂಕ್ತವಾದ ಟಿಪ್ಪಣಿಗಳನ್ನು ಬರೆದಿಟ್ಟುಕೊಂಡರು. ಅನಂತರ ಹತ್ತು ವರ್ಷಗಳವರೆಗೆ ಅವಿರತವಾಗಿ ಕನ್ನಡದ ಜೊತೆಗೆ ತಮಿಳು, ತೆಲುಗು, ಮಲಯಾಳಂ, ತುಳು ಭಾಷೆಗಳನ್ನೂ ಕಲಿತರು.

1860 ರಲ್ಲಿ ಕಿಟೆಲರು ಪಾಲಿನ್ ಎಫ್ ಈತ್ ಎಂಬ ಜರ್ಮನ್ ಕನ್ಯೆಯನ್ನು ಮದುವೆಯಾದರು. ಅವರಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಆದರೆ ಮದುವೆಯಾದ ನಾಲ್ಕೇ ವರ್ಷಗಳಲ್ಲಿ ಆಕೆ ತೀರಿಕೊಂಡಳು. ತನಗಾದ ದುಃಖವನ್ನು ಮರೆಯಲು ಕಿಟೆಲ್ ಇಬ್ಬರು ಮಕ್ಕಳೊಡನೆ ಒಂದು ವರ್ಷ ಕಾಲ ಯುರೋಪ್ಯ ಪ್ರವಾಸ ಮಾಡಿದರು. ಪ್ರವಾಸದಿಂದ ಮರಳಿದ ಬಳಿಕ ಹೆಂಡತಿಯ ತಂಗಿಯನ್ನು ಮದುವೆಯಾದರು.

ಕಿಟೆಲ್ಲರ ಕನ್ನಡ ಸೇವೆ

ಜರ್ಮನ್ನರಿಗೆ ಇಂದು ಕಿಟೆಲ್ಲರ ನೆನಪು ಮಾಸಿರಬಹುದು. ಆದರೆ ಕನ್ನಡಿಗರು ಕಿಟೆಲ್ಲರನ್ನು ಮರೆಯುವಂತಿಲ್ಲ. ಕಿಟೆಲ್ ಕನ್ನಡ ಭಾಷೆ, ಸಾಹಿತ್ಯಗಳಿಗೆ ಅಮೂಲ್ಯ

ಕಾಣಿಕೆಯನ್ನು ನೀಡಿದ್ದಾರೆ. ಕಿಟೆಲ್ 1862 ರಿಂದಲೇ ಕನ್ನಡ ಸಾಹಿತ್ಯ ರಚನೆಗೆ ತೊಡಗಿದರು. ಅಂದಿನಿಂದ ಆರಂಭವಾದ ಅವರ ಸಾಹಿತ್ಯ ಸೇವೆ ಸತತವಾಗಿ ಮುಂದು ವರಿಯಿತು. ಪಶ್ಚಿಮದೇಶದಲ್ಲಿ ಜನಿಸಿದ ಒಬ್ಬ ಮಿಶನರಿ ಭಾರತಕ್ಕೆ ಆಗಮಿಸಿ ದಕ್ಷಿಣದ ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ಕನ್ನಡವನ್ನು ಕಲಿತು, ಅದರಲ್ಲಿ ವಿಶೇಷವಾದ ಪಾಂಡಿತ್ಯವನ್ನು ಗಳಿಸಿದರು ಎಂಬುದು ಆಶ್ಚರ್ಯದ ವಿಷಯವೇ ಸರಿ. ಕನ್ನಡ ಭಾಷಾ ಸಾಹಿತ್ಯಕ್ಷೇತ್ರಕ್ಕೆ ಕಿಟೆಲ್ಲರು ಕೊಟ್ಟ ಅಮೂಲ್ಯ ಕಾಣಿಕೆಯೇನು ಎಂಬ ಬಗ್ಗೆ ತಿಳಿಯೋಣ.

1862ರಲ್ಲಿ ಕಿಟೆಲ್ ಬೈಬಲ್‌ನ ಹೊಸ ಒಡಂಬಡಿಕೆಯ ಕಥನ ರೂಪದಲ್ಲಿ 'ಕಥಾಮಾಲೆ' ಎಂಬ ಪದ್ಯಕೃತಿಯನ್ನು ರಚಿಸಿದರು. ಇದು ಕಿಟೆಲ್ಲರ ಮೊದಲನೆಯ ಕನ್ನಡ ಕೃತಿ. ಇದರಲ್ಲಿ ಒಟ್ಟು 475 ಪದ್ಯಗಳಿವೆ; 278 ಪದ್ಯಗಳು ಭಾಮಿನಿಷಟ್ಪದಿ ಯಲ್ಲಿಯೂ 73 ಪದ್ಯಗಳು ವಾರ್ಧಿಕ ಷಟ್ಪದಿಯಲ್ಲಿಯೂ 174 ಪದ್ಯಗಳು ಪೂರ್ವೀ ಹಾಡುಗಳ ರೂಪದಲ್ಲಿಯೂ ಇವೆ. ಕರ್ನಾಟಕಕ್ಕೆ ಆಗಮಿಸಿದ ಬೇರಾವ ಮಿಶನರಿಯೂ ಏಕಕಾಲದಲ್ಲಿ ಕನ್ನಡದಲ್ಲಿ ಇಷ್ಟೊಂದು ಪದ್ಯಗಳನ್ನು ರಚಿಸಿರುವುದು ಕಂಡು ಬಂದಿಲ್ಲ. ಈ ಕಥಾಮಾಲೆ ಕ್ರಿಸ್ತನ ಕಥೆಯ ಪದ್ಯರೂಪ. ಎಳೆಯರಿಗಾಗಿ ಕಿಟೆಲ್ ರಚಿಸಿದ ಮತ್ತೊಂದು ಮಹತ್ವದ ಕೃತಿಯೆಂದರೆ 'ಯೇಸುಕ್ರಿಸ್ತನ ಶ್ರಮೋಚರಿತ'. ಇದರಲ್ಲಿ ಶಾಂತಿದೂತನಾದ ಯೇಸುಕ್ರಿಸ್ತನ ಕೊನೆಯ ದಿನಗಳ ಗದ್ಯಚಿತ್ರಣವಿದೆ. ಕಿಟೆಲ್ ಅವರು ಮಕ್ಕಳಿಗಾಗಿ ಪಠ್ಯಪುಸ್ತಕಗಳನ್ನೂ ರಚಿಸಿದರು. ಪ್ರಸಿದ್ಧ ಪಂಚತಂತ್ರದ ಕಥೆ ಗಳನ್ನು ಅವರು ಮಕ್ಕಳಿಗಾಗಿ ಸುಲಭ ಶೈಲಿಯಲ್ಲಿ ಕನ್ನಡದಲ್ಲಿ ಬರೆದರು. ಇದು ಸ್ವಲ್ಪ ಹಳಗನ್ನಡ ರೀತಿಯಲ್ಲಿದೆ; ಈ ಪುಸ್ತಕದ ಮೇಲೆ "ಶಾಲೆಗಳ ಪ್ರಯೋಜನಾರ್ಥಕವಾದದ್ದು" ಎಂದು ಬರೆಯಲಾಗಿದೆ. ಕಿಟೆಲ್ ಇದಕ್ಕೆ 20 ಪುಟಗಳ ವಿಸ್ತಾರವಾದ ಮುನ್ನುಡಿ ಬರೆದಿರುವರು. ಅದರಲ್ಲಿ ಪಂಚತಂತ್ರದ ಕಥೆಗಳ ಮೂಲ, ಈಸೋಪನ ಕತೆಗಳಿಗೂ ಪಂಚತಂತ್ರದ ಕಥೆಗಳಿಗೂ ಇರುವ ಸಂಬಂಧಗಳನ್ನು ತಿಳಿಸಿದ್ದಾರೆ. ಕಿಟೆಲ್ 1864ರಲ್ಲಿ 'ಇಂಗ್ಲೆಂಡದ ಇತಿಹಾಸ' ಎಂದು ಮಾರಿಸ್‌ನ ಗ್ರಂಥವನ್ನು ಅನುವಾದಿಸಿದರು. ಹಳ ಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎರಡು ಕ್ರಮಿಕ ಪುಸ್ತಕಗಳನ್ನು ಬರೆದರು. 1866ರಲ್ಲಿ ಕಿಟೆಲ್ 'ಪೆಣಕರ್ನಾಟಕ ಕಾವ್ಯ ಮಾಲೆ' ಮತ್ತು 'ಯಿತ್ತು ಹಳೆಕನ್ನಡ ಸಂಕ್ಷೇಪ ವ್ಯಾಕರಣ ಸೂತ್ರಗಳು" ಎಂಬ ಕೃತಿಗಳಿಗೆ ಹೊಸ ಪಾಠ ಮತ್ತು ಶಬ್ದಕೋಶ ಗಳನ್ನು ಸೇರಿಸಿ ಅವುಗಳ ಹೊಸ ಆವೃತ್ತಿಗಳನ್ನು ಪ್ರಕಟಿಸಿದರು. ಮಕ್ಕಳಿಗಾಗಿ ವಾಚನ ಪಾಠಮಾಲಿಗಳನ್ನು ಸಿದ್ಧಗೊಳಿಸಿದರು. 1877ರಲ್ಲಿ ಮೊದಲನೆಯ ವರ್ಗದ ಮಕ್ಕಳಿ ಗಾಗಿ 'ಕಾವ್ಯಮಂಜರಿ'ಯನ್ನೂ ಸಂಕಲಿಸಿದರು. ಆಗಿನ ಮದ್ರಾಸು ಸರ್ಕಾರವು ಕಿಟೆಲ್ಲರಿಗೆ ಆ ಕಾರ್ಯಗಳನ್ನು ವಹಿಸಿತ್ತು. ಈ ಪುಸ್ತಕಗಳು ಸುಮಾರು 10-12 ವರ್ಷದ ವಯಸ್ಸಿನ ಮಕ್ಕಳಿಗೆ ಬಹುಕಾಲದವರೆಗೆ ಶಾಲೆಯ ಪುಸ್ತಕಗಳಾಗಿದ್ದುವು. ಸಾವಿರಾರು

ಮಕ್ಕಳು ಇವುಗಳನ್ನು ಓದಿದರು. ಈ ಪುಸ್ತಕಗಳ ಹಲವಾರು ಆವೃತ್ತಿಗಳು ಪ್ರಕಟವಾದುವು.

1872 ಕಿಟೆಲ್ಲರ ಸಾಹಿತ್ಯಿಕ ಜೀವನದಲ್ಲಿ ಒಂದು ಮಹತ್ವದ ವರ್ಷ. ಆ ವರ್ಷ ಅವರು ಕೇಶಿರಾಜನ 'ಶಬ್ದಮಣಿ ದರ್ಪಣ'ವನ್ನು ಸಂಪಾದಿಸಿ ಪ್ರಕಟಿಸಿದರು. ಕನ್ನಡ ವ್ಯಾಕರಣ ಕ್ಷೇತ್ರದಲ್ಲಿ ಇದು ಅವರ ಮೊದಲನೆಯ ಪ್ರಯತ್ನವಾಗಿತ್ತು. ಇದಕ್ಕೆ ಅವರು ಇಪ್ಪತ್ತಾರು ಪುಟಗಳ ಪ್ರಸ್ತಾವನೆಯನ್ನೂ ಸೇರಿಸಿದರು. ಜೊತೆಗೆ ಕೆಶಿರಾಜನ ಕಾಲ, ಶಬ್ದಮಣಿ ದರ್ಪಣದ ಟೀಕಾಕಾರ ನಿಟ್ಟೂರು ನಂಜಯ್ಯ, ಅವನ ಕಾಲ, ತುಳು, ಬಡಗ ಭಾಷೆಗಳ ಜೊತೆಯಲ್ಲಿ ಕನ್ನಡದ ತುಲನೆ ಮುಂತಾದ ಮಹತ್ವದ ವಿಷಯಗಳನ್ನು ಅದರಲ್ಲಿ ಸೇರಿಸಿದರು. ಹೀಗಾಗಿ ಕೇಶಿರಾಜನ ಮತ್ತು ಅವನ ಕೃತಿಗಳ ಬಗ್ಗೆ ಅಭ್ಯಾಸ ಮಾಡುವವರಿಗೆ ಇದು ಉಪಯುಕ್ತ ವಿಷಯವನ್ನೊದಗಿಸುತ್ತದೆ. ನಿಟ್ಟೂರು ನಂಜಯ್ಯನ ಟೀಕೆಯನ್ನೂ ಇದರಲ್ಲಿ ಸೇರಿಸಿರುವುದರಿಂದ ಶಬ್ದಮಣಿದರ್ಪಣವನ್ನು ತಿಳಿಯಲು ಬಹಳ ಸಹಾಯವಾಗುತ್ತದೆ. ಕನ್ನಡೇತರರಿಗೂ ಅರ್ಥವಾಗುವಂತೆ ಕಿಟೆಲ್ ಇದರಲ್ಲಿನ ಪ್ರತಿಯೊಂದು ಸೂತ್ರಕ್ಕೂ ಸಂಗ್ರಹವಾಗಿ ಇಂಗ್ಲಿಷ್‌ನಲ್ಲಿ ಟಿಪ್ಪಣಿ ನೀಡಿರುವುದು ಇದರ ಒಂದು ವಿಶೇಷ. ಕಠಿಣ ಪದಗಳ ಅರ್ಥವನ್ನೊಳಗೊಂಡ 'ಪ್ರಯೋಗಸಾರ' ಎಂಬ 9 ನೆಯ ಅಧ್ಯಾಯ ಮತ್ತು ಗ್ರಂಥದ ಕೊನೆಯಲ್ಲಿ ಬೇರೆ ಬೇರೆ ಹಸ್ತಪ್ರತಿಗಳಲ್ಲಿ ದೊರೆಯುವ ಪಾಠಾಂತರಗಳನ್ನು ನೀಡಿದ್ದರಿಂದ ಈ ಆವೃತ್ತಿಯ ಮೌಲ್ಯ ಮತ್ತೂ ಹೆಚ್ಚಿದೆ. ಈ ಆವೃತ್ತಿಯ ಪ್ರಸ್ತಾವನೆ, ವ್ಯಾಖ್ಯಾನ, ಟಿಪ್ಪಣಿಗಳಿಂದಾಗಿ ಇದು ಮುಂದಿನ ಸಂಪಾದನಕಾರರಿಗೂ ಮಾರ್ಗದರ್ಶಿಯಾಗಿದೆ. ಕಿಟೆಲ್‌ರಿಗಿಂತ ಹಿಂದೆಯೇ 1868ರಲ್ಲಿ ಗ್ಯಾರೆಟ್ ಶಬ್ದಮಣಿದರ್ಪಣವನ್ನು ಪ್ರಕಟಿಸಿದ್ದರೂ ಗ್ಯಾರೆಟ್‌ನ ಆವೃತ್ತಿ ದೋಷಪೂರ್ಣವಾಗಿದ್ದರಿಂದ ಅದು ಅಷ್ಟೊಂದು ಉಪಯುಕ್ತವೆನಿಸಲಿಲ್ಲ.

1875ರಲ್ಲಿ ಕಿಟೆಲ್ ಹದಿನಾಲ್ಕು ಹಸ್ತಪ್ರತಿಗಳ ಸಹಾಯದಿಂದ ನಾಗವರ್ಮನ 'ಛಂದೋಂಬುಧಿ'ಯನ್ನು ಪರಿಷ್ಕರಿಸಿ ಸಂಪಾದಿಸಿ ಪ್ರಕಟಿಸಿದರು. ಇದರಲ್ಲಿನ ಪ್ರತಿಯೊಂದು ಪದ್ಯದ ಕೆಳಗೆ ಕಿಟೆಲ್ ಇಂಗ್ಲಿಷ್‌ನಲ್ಲಿ ಸಾರಾಂಶ ನೀಡಿದರು. ಗ್ರಂಥದ ಕೊನೆಯಲ್ಲಿ ಪ್ರಕ್ಷಿಪ್ತ ಭಾಗಗಳನ್ನು, ಅರ್ಥಕೋಶ, ಅಕಾರಾದಿ ಅನುಬಂಧಗಳನ್ನು ಸೇರಿಸಿದರು. ಇದರ ಪ್ರಸ್ತಾವನೆಯಲ್ಲಿನ 'ನಾಗವರ್ಮನ ಛಂದಸ್ಸು' ಎಂಬ ಪ್ರಕರಣದಲ್ಲಿ ಸಂಪಾದನೆಗೆ ಸಂಬಂಧಿಸಿದ ವಿಷಯಗಳನ್ನು ತಿಳಿಸಿದ್ದಾರೆ. ಜೊತೆಗೆ ನಾಗವರ್ಮನ ಕಾಲ, ಛಂದಸ್ಸು ಮುಂತಾದ ವಿಷಯಗಳನ್ನು ಪ್ರಸ್ತಾವಿಸಿದ್ದರಿಂದ ಛಂದಸ್ಸಿನ ಇತಿಹಾಸ, ಹಾಗೂ ಸ್ವರೂಪವನ್ನು ಕುರಿತ ಮಹತ್ವದ ಈ ಕೃತಿಯಲ್ಲಿನ ಇಂಗ್ಲಿಷ್ ಬರವಣಿಗೆ ಈ ಕ್ಷೇತ್ರದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಇದರಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು A Essay on Canarese Literature ಎಂಬ ಲೇಖನವಿರುವುದು ಇದರ ಮುಖ್ಯ ಆಕರ್ಷಣೆ. ಇದರಲ್ಲಿ ಆದಿಯಿಂದ ಹತ್ತೊಂಬತ್ತನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯ ಚರಿತ್ರೆಯ ಸ್ಥೂಲ ಪರಿಚಯ ದೊರೆಯುತ್ತದೆ. ವೀಗಲ್ ಎಂಬ

ಮಿಶನರಿ ಬರೆದ ಸಾಹಿತ್ಯೇತಿಹಾಸದ ಲೇಖನವನ್ನು ಬಿಟ್ಟರೆ ಇದೇ ಕನ್ನಡ ಸಾಹಿತ್ಯ ಚರಿತ್ರೆಯ ಮೊದಲ ಲೇಖನ ಎನ್ನಬಹುದು. ಇದರಿಂದ ಕಿಟೆಲ್ಲರನ್ನು ಕನ್ನಡ ಕವಿ ಚರಿತೆಯ ಕುಲಪುರೋಹಿತರೆನ್ನಬಹುದು. ಈ ಎರಡು ಸಂಪಾದಿತ ಕೃತಿಗಳಿಂದ ಕನ್ನಡ ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಕಿಟೆಲ್ಲರ ಹೆಸರು ಚಿರಸ್ಥಾಯಿಯಾಗಿದೆ.

1872ರಲ್ಲಿ ಆರಂಭವಾದ 'ಇಂಡಿಯನ್ ಎಂಟಿಕ್ವೆರಿ'ಯಲ್ಲಿ ಕಿಟೆಲ್ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ಸಂಶೋಧನಾತ್ಮಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಸರ್ವಜ್ಞನ ವಚನ, ವೀರಶೈವ ಶರಣರು, ವೈಷ್ಣವ ದಾಸರುಗಳ ಪರಿಚಯ ನೀಡಿದ್ದಾರೆ. ನಿಜಗುಣ ಶಿವಯೋಗಿಗಳು 'ವಿವೇಕ ಚಿಂತಾಮಣಿ'ಯಲ್ಲಿ ಸಂಗೀತದ ಬಗ್ಗೆ ತಿಳಿಸಿದ ವಿಷಯಗಳನ್ನು ಕಿಟೆಲ್ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ರೈಸ್ ಅವರು ಅದಕ್ಕಿಂತ ಹಿಂದೆಯೇ ಹೊರತಂದ 'ಬೆಳತೂರು ಶಾಸನ'ವನ್ನು ಕಿಟೆಲ್ ಮತ್ತೆ ಪ್ರಕಟಿಸಿದ್ದಾರೆ. ಅಲ್ಲದೆ ಭಾಷಾಶಾಸ್ತ್ರ ಮತ್ತು ಛಂದಸ್ಸಿನ ದೃಷ್ಟಿಯಿಂದ ಅದನ್ನು ವಿವೇಚಿಸಿದ್ದಾರೆ.

ಭಾರತೀಯ ತತ್ವಜ್ಞಾನಕ್ಕೆ ಸಂಬಂಧಿಸಿದಂತೆ ಕಿಟೆಲ್ ಯೂರೋಪಿಯನ್ ಭಾಷೆಗಳಲ್ಲಿ ಮೂರು ಗ್ರಂಥಗಳನ್ನು ರಚಿಸಿದ್ದಾರೆ. ಇದರಿಂದ ಕನ್ನಡಿಗರಿಗೆ ಅವುಗಳ ಪರಿಚಯವಾಗಿಲ್ಲ. ಬಾಸೆಲ್ ಮಿಶನ್ನಿನ ಡಾ. ಮೊಗ್ಲಿಂಗ್‌ರಿಗೆ ಕಿಟೆಲ್ಲರ ಕನ್ನಡ ಭಾಷಾ ಪ್ರಭುತ್ವ ಹಾಗೂ ವಿದ್ವತ್ತಿನ ಪರಿಚಯವಾಗಿತ್ತು. ಹೀಗಾಗಿ ಅವರು ಮತ್ತು ಆಗ ಭಾರತ ಸರ್ಕಾರದಲ್ಲಿ ಉನ್ನತ ಸ್ಥಾನದಲ್ಲಿದ್ದ ಸರ್‌ವಾಲ್ಟರ್ ಎಲಿಯಟ್ ಮುಂತಾದ ಬ್ರಿಟಿಷ್ ಅಧಿಕಾರಿಗಳು ಕನ್ನಡ-ಇಂಗ್ಲಿಷ್ ನಿಘಂಟನ್ನು ರಚಿಸಿಕೊಡುವಂತೆ ಕಿಟೆಲ್ಲರನ್ನು ಕೇಳಿದರು; ಅದಕ್ಕೆ ಬೇಕಾದ ಎಲ್ಲ ನೆರವನ್ನು ನೀಡಿದರು. ಕಿಟೆಲ್ ಅದಕ್ಕಾಗಿ ಮಿಶನರಿ ಉತ್ಸಾಹದಿಂದ ದುಡಿದರು. ಅವಕ್ಕಾಗಿ ಅನೇಕರ ನೆರವನ್ನು ಪಡೆದರು. ಆದರೆ ಎಲ್ಲೂ ಅವರ ಹೆಸರು ಹೇಳಿಲ್ಲ. ಕಿಟೆಲ್ ಕನ್ನಡ-ಇಂಗ್ಲಿಷ್ ನಿಘಂಟಿಗೆ ಗುಂಡರ್ಟ್‌ನ ಮಲಯಾಳಂ ಶಬ್ದಕೋಶವನ್ನು ಮಾದರಿಯನ್ನಾಗಿ ತೆಗೆದುಕೊಂಡರು. ಈ ಹಿಂದೆಯೇ ರೀವ್, ಸ್ಯಾಂಡರ್ಸನ್ ಅವರು ಕೋಶಗಳನ್ನು ರಚಿಸಿದ್ದರೂ ಅವರ ಕೋಶದಲ್ಲಿ ಕನ್ನಡ ಶಬ್ದಕ್ಕೆ ಪ್ರತಿಯಾಗಿ ಒಂದೆರಡು ಇಂಗ್ಲಿಷ್ ಪದಗಳನ್ನಷ್ಟೇ ನೀಡಿದ್ದರು. ಆ ಕೋಶಗಳಲ್ಲಿ ಜನಬಳಕೆಯ ಶಬ್ದಗಳಿರಲಿಲ್ಲ. ಇದನ್ನೆಲ್ಲ ಅರಿತು ಕಿಟೆಲ್ ಸುಮಾರು ಮೂವತ್ತಾರು ಹಳಗನ್ನಡ ಕೃತಿಗಳನ್ನು ಪರಿಶೀಲಿಸಿ, ಸಾವಿರಾರು ಹಳಗನ್ನಡ ಶಬ್ದಗಳನ್ನು ಸಂಗ್ರಹಿಸಿದರು. ಪ್ರಾಚೀನ ಕಾವ್ಯಗಳಿಂದ, ದಾಸರ ಹಾಡುಗಳಿಂದ, ಸರ್ವಜ್ಞನ ವಚನಗಳಿಂದ ಶಬ್ದಗಳನ್ನೂ ವಾಕ್ಯಗಳನ್ನೂ ಬರೆದಿಟ್ಟುಕೊಂಡರು. ಜೊತೆಗೆ ವಿವಿಧ ಪಠ್ಯಪುಸ್ತಕಗಳಿಂದ ಆಡುಭಾಷೆಯಿಂದ, ಹೊಸಗನ್ನಡ ಪದಗಳನ್ನೂ ಸಂಗ್ರಹಿಸಿದರು. ರೀವ್ ಮತ್ತು ಇತರರ ಕೋಶಗಳಿಂದಲೂ ಶಬ್ದಗಳನ್ನು ಸಂಗ್ರಹಿಸಿದರು; ಔಷಧ, ಗಿಡಮೂಲಿಕೆಗಳ ಪದಗಳನ್ನೆಲ್ಲ ಸಂಗ್ರಹಿಸಿದರು. ಹಿಂದೆ ತಾವು ಸಂಗ್ರಹಿಸಿದ್ದ ಶಬ್ದಗಳನ್ನೂ ಅದಕ್ಕೆ ಸೇರಿಸಿಕೊಂಡರು. ತನ್ನ ಸಹೋದ್ಯೋಗಿ ತ್ರಿಗ್ಲರ್ ಮತ್ತು ಹುಬ್ಬಳ್ಳಿಯ ಶಾಲಾಮಾಸ್ತರರಾಗಿದ್ದ ವಸ್ತ್ರದ ಶಿವಲಿಂಗಯ್ಯ ಅವರಿಂದ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಕನ್ನಡ ಶಬ್ದಗಳನ್ನು

ಸಂಗ್ರಹಿಸಿದರು. ಹೀಗೆ ಹಳಗನ್ನಡ, ಹೊಸಗನ್ನಡ, ಗ್ರಂಥಸ್ಥ ಹಾಗೂ ಜನಬಳಕೆಯ ಮತ್ತು ಶಾಸ್ತ್ರವಿಜ್ಞಾನಗಳಿಗೆ ಸಂಬಂಧಪಟ್ಟ ಶಬ್ದಗಳನ್ನೆಲ್ಲ ಕ್ರೋಢೀಕರಿಸಿದರು. 1878ರಲ್ಲಿ ಕಿಟೆಲ್ಲರಿಗೆ ದೇಹಾರೋಗ್ಯ ಕೆಟ್ಟಿತು. ಹೀಗಾಗಿ ಅವರು ತಮ್ಮ ಊರಿಗೆ ಮರಳಿದರು. ಜರ್ಮನಿಯ ಎಸ್ಲಿಂಗೆನ್‌ನಲ್ಲಿದ್ದು ಕನ್ನಡ-ಇಂಗ್ಲಿಷ್ ನಿಘಂಟಿನ ಮೂಲ ಪ್ರತಿಯ ರೂಪುರೇಷೆಯನ್ನು ಹಾಕಿಕೊಂಡರು. ಬಳಿಕ ಐದುವರ್ಷಗಳವರೆಗೆ ಅದರ ರಚನೆಗೆ ಸಂಬಂಧಿಸಿದ ಕೆಲಸವನ್ನು ಮುಂದುವರಿಸಿದರು. ಬಳಿಕ ಮತ್ತೆ ಕರ್ನಾಟಕಕ್ಕೆ ಆಗಮಿಸಿದರು. ತಮ್ಮ ಈ ನಿಘಂಟಿನ ಹಸ್ತಪ್ರತಿಯನ್ನು ಅಚ್ಚಿಗೆ ಕಳಿಸುವುದಕ್ಕಿಂತ ಮುಂಚೆ ಶ್ರೀ ಎಂ.ಸಿ. ಶ್ರೀನಿವಾಸಾಚಾರ್ಯರೆಂಬ ಮೈಸೂರಿನ ವಿದ್ವಾಂಸರ ನೆರವಿನಿಂದ ಅದರಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡಿದರು. ಈ ನಡುವೆ ಶ್ರೀನಿವಾಸಾಚಾರ್ಯರು ನಿಧನ ಹೊಂದಿದರು. ಕಿಟೆಲ್ ಬಹಳ ದುಃಖಪಟ್ಟರು. ಆದರೆ ತನಗೆ ನೆರವನ್ನಿತ್ತ ಆ ಮಹನೀಯರನ್ನು ನೆನೆಯಲು ಮರೆಯಲಿಲ್ಲ.

ಹೀಗೆ ನಿಘಂಟಿಗಾಗಿ ಸುಮಾರು ಹದಿನೈದು ವರ್ಷಗಳಷ್ಟು ದೀರ್ಘಕಾಲ ದುಡಿದ ಕಿಟೆಲ್‌ರ ದೃಷ್ಟಿಶಕ್ತಿ ಕ್ಷೀಣಿಸಿತು. ಅದೂ ಸುಮಾರು 1278 ಪುಟಗಳವರೆಗೆ ನಿಘಂಟಿನ ಕರಡುಗಳನ್ನು ಕಿಟೆಲ್ಲರೇ ತಿದ್ದಿದರು. ಆದರೆ ದೇಹಾಲಸ್ಯ, ಜೊತೆಗೆ ದೃಷ್ಟಿ ಮಾಂದ್ಯಗಳಿಂದ ಕಿಟೆಲ್ 1892ರಲ್ಲಿ ಸ್ವದೇಶಕ್ಕೆ ಹಿಂತಿರುಗಿದರು. ನಿಘಂಟಿನ ಉಳಿದ ಪುಟಗಳ ಕರಡು ತಿದ್ದಲು ಕಿಟೆಲ್ಲರಿಗೆ ಶಿವರಾಮ ಭಾರದ್ವಾಜ ಎಂಬವರು ನೆರವಾದರು. ಕಿಟೆಲ್ಲರ ಈ ಮಹತ್ಕಾರ್ಯವನ್ನು ಗುರುತಿಸಿ ಟೂಬಿಂಗೆನ್ ವಿಶ್ವವಿದ್ಯಾನಿಲಯವು ಕಿಟೆಲ್ಲರಿಗೆ 1896ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪ್ರಶಸ್ತಿ ನೀಡಿತು. ಇಂದಿಗೂ ಕಿಟೆಲ್ಲರ ಹಸ್ತಪ್ರತಿಗಳನ್ನು ಟಿಪ್ಪಣಿಗಳನ್ನು ಟ್ಯೂಬಿಂಗೆನ್ ವಿಶ್ವವಿದ್ಯಾನಿಲಯದಲ್ಲಿ ಕಾದಿರಿಸಲಾಗಿದೆ ಎಂಬುದು ಅಭಿಮಾನದ ಸಂಗತಿ. ಆಗಿನ ಭಾರತ ಸರಕಾರ ಮತ್ತು ಬ್ರಿಟಿಷ್ ಸರ್ಕಾರದ ನೆರವಿನಿಂದ ಈ ನಿಘಂಟು ಪ್ರಕಟವಾಯಿತು. ಇದರಲ್ಲಿ ಕಿಟೆಲ್ಲರ ದೀರ್ಘವೂ ವಿದ್ವತ್ ಪೂರ್ಣವೂ ಆದ ಮುನ್ನುಡಿ ಇದೆ. ಹೈದರಾಬಾದ್, ಮೈಸೂರು, ಮುಂಬೈ ಮದ್ರಾಸು ಸರ್ಕಾರಗಳು ಈ ನಿಘಂಟಿನ ಹೆಚ್ಚು ಪ್ರತಿಗಳನ್ನು ಕೊಂಡು ಶಿಕ್ಷಣ ಮತ್ತಿತರ ಕಚೇರಿಗಳಿಗೆ ಒದಗಿಸಿದರು.

ಗುಣಗಾತ್ರದಲ್ಲಿ ಹಿರಿದಾಗಿರುವ ಈ ಮಹಾನ್ ಕೃತಿ ಕಿಟೆಲ್ಲರ ಶಬ್ದ ತಪಸ್ಸಿನ ಉತ್ಕೃಷ್ಟ ಫಲವೆಂದು ವಿದ್ವಾಂಸರು ಕೊಂಡಾಡಿದ್ದಾರೆ. 1894ರಲ್ಲಿ ಪ್ರಕಟವಾದ ಈ ಕೃತಿಯನ್ನು ಮೀರಿಸುವ ಇನ್ನೊಂದು ಕೃತಿ ಕನ್ನಡದಲ್ಲಿ ಇನ್ನೂ ಬಂದಿಲ್ಲ ಎಂದು ಹೇಳಿರುವುದು ಈ ಕೋಶದ ಹಿರಿಮೆಗೆ ಸಾಕ್ಷಿ. ಕನ್ನಡದಷ್ಟೇ ಅಲ್ಲ ಜಗತ್ತಿನ ಎಲ್ಲ ಭಾಷೆಗಳ ಶಬ್ದಕೋಶಗಳನ್ನು ಗಮನದಲ್ಲಿಟ್ಟುಕೊಂಡರೂ ಕಿಟೆಲ್ಲರ ಕೋಶಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಇದರಲ್ಲಿ ಇಂಗ್ಲಿಷ್‌ನ ಲಿಪ್ಯಂತರವೂ ಇರುವುದರಿಂದ ಹೊರನಾಡ ಕನ್ನಡಿಗರಿಗೂ ಮತ್ತು ವಿದೇಶೀಯರಿಗೂ ಇದೊಂದು ಪ್ರಮಾಣ ಗ್ರಂಥವಾಗಿದೆ. "ಕನ್ನಡ ನಿಘಂಟು ಪ್ರಪಂಚದಲ್ಲಿ ಕಿಟೆಲ್ಲರ ಹೆಸರು ಅಜರಾಮರವಾಗಿದೆ. ಕನ್ನಡ ಭಾಷಾ ಸಾಹಿತ್ಯವನು

ವ್ಯಾಸಂಗ ಮಾಡ ಹೊರಟ ಯಾವ ವಿದ್ಯಾರ್ಥಿಯೂ ಅಮೂಲ್ಯವಾದ ಈ ನಿಘಂಟನ್ನು ಅಲಕ್ಷಿಸುವಂತಿಲ್ಲ" ಎಂದು ಈಚೆಗೆ ಕಿಟೆಲ್ ನಿಘಂಟಿನ ಪುನರ್ಮುದ್ರಣದ ಸಂಪಾದನೆಯ ಜವಾಬ್ದಾರಿ ಹೊತ್ತಿದ್ದ ಪ್ರೊ. ಮರಿಯಪ್ಪ ಭಟ್ಟರ ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ.

ಈ ನಿಘಂಟಿನ ವೈಶಿಷ್ಟ್ಯವೇನೆಂದರೆ ಶಬ್ದಗಳನ್ನು ಜೋಡಿಸುವಾಗ ಸಂಸ್ಕೃತ ಶಬ್ದಗಳನ್ನು ರೋಮನ್ ಅಕ್ಷರದಲ್ಲೂ ಕನ್ನಡ ಶಬ್ದಗಳನ್ನು ಆ್ಯಂಟಿಕ್ ಅಕ್ಷರ (ದಪ್ಪಕ್ಷರ)ಗಳಲ್ಲೂ ಕೊಟ್ಟಿರುವುದು. ಅರ್ಥೈಸಬೇಕಾದ ಪದಗಳನ್ನು ಮೊದಲು ಕನ್ನಡದಲ್ಲಿ ಕೊಟ್ಟು ಬಳಿಕ ರೋಮನ್ ಲಿಪಿಯಲ್ಲಿ ಅದನ್ನು ಕೊಡಲಾಗಿದೆ. ಕನ್ನಡದಲ್ಲಿ ಬಹುವಾಗಿ ಪ್ರಚಲಿತವಿರುವ ಅವುಗಳ ಸಂಸ್ಕೃತ ಪದಗಳು ಮತ್ತು ಕನ್ನಡದಲ್ಲಿ ಬಳಕೆಯಲ್ಲಿರುವ ವಿದೇಶೀ ಸ್ವೀಕೃತ ಪದಗಳನ್ನು ಗ್ರಂಥಸ್ಥ ಹಾಗೂ ಗ್ರಾಮ್ಯಪದಗಳನ್ನೂ ಕೊಡಲಾಗಿದೆ. ಭಾಷೆಗಳ ಪ್ರಾದೇಶಿಕ ಭಿನ್ನತೆಗಳು, ಕನ್ನಡ ಪದಗಳ ವಿವಿಧ ಅರ್ಥಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕೊಟ್ಟಿದ್ದಾರೆ. ಪ್ರಧಾನ ಪದದ ವಿವಿಧ ರೂಪಗಳನ್ನು, ಬಳಕೆಯಲ್ಲಿರುವ ಮೂಲಗಳನ್ನು ತಿಳಿಸಿದ್ದಾರೆ. ದೇಶ್ಯ ಪದಗಳ ಕೆಳಗೆ ದ್ರಾವಿಡ ಭಾಷೆಗಳ ಜ್ಞಾತಿಪದಗಳನ್ನು ನೀಡಿದ್ದಾರೆ. ತದ್ಭವಗಳಿದ್ದಾಗ ತತ್ಸಮಗಳನ್ನು ನೀಡಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಇಲ್ಲಿ ಮೆಚ್ಚಬೇಕಾದ ಅಂಶವೆಂದರೆ ಕಿಟೆಲ್, ಬಳಕೆಯ ಆಯಾ ಪದಗಳಿಗೆ ಸಂಬಂಧಿಸಿದ ಗಾದೆಯ ಮಾತುಗಳನ್ನು ಬಳಸಿರುವುದು. ಆಡುಮಾತಿನ ಅರ್ಥ ವಿವರಿಸುವಾಗ ಹೇರಳವಾಗಿ ಗಾದೆಮಾತುಗಳನ್ನು ಬಳಸಿರುವುದು. ಹೀಗಾಗಿ ಈ ಕೋಶ ರಚನೆಯಲ್ಲಿ ಕಿಟೆಲ್ಲರ ಕನ್ನಡ ಭಾಷೆಯಲ್ಲಿನ ಶ್ರದ್ಧೆ, ಪಾಂಡಿತ್ಯ, ಪ್ರತಿಭೆಗಳು ಮಿಳಿತಗೊಂಡಿವೆ. ಇದರಿಂದ "ಕನ್ನಡ ನಿಘಂಟು ಪ್ರಪಂಚದಲ್ಲಿ ಕಿಟೆಲ್ಲರ ಹೆಸರು ಅಮರ್ತ್ಯವಾಗಿ ಉಳಿಯುತ್ತದೆ. ಕನ್ನಡ ಸಾಹಿತ್ಯದ ಅಥವಾ ದ್ರಾವಿಡ ಭಾಷಾ ವಿಜ್ಞಾನದ ಯಾವ ವಿದ್ಯಾರ್ಥಿಯೇ ಆಗಲಿ ಆತನ ಮಹಾ ನಿಘಂಟಿನ ಬಗ್ಗೆ ಅಜ್ಞನಾಗಿರುವುದು ಸಾಧ್ಯವಿಲ್ಲ" ಎಂಬ ಮರಿಯಪ್ಪಭಟ್ಟರ ಮಾತಿಗೆ ದನಿಗೂಡಿಸಬೇಕಾಗುತ್ತದೆ.

ಪತ್ರಿಕೋದ್ಯಮಿಯಾಗಿ ಕಿಟೆಲ್ : — ಕಿಟೆಲ್ ಪತ್ರಿಕೋದ್ಯಮಿಯಾಗಿಯೂ ಕೆಲಸ ನಿರ್ವಹಿಸಿದ್ದರು. 1834ರಲ್ಲಿ "ಮಂಗಳೂರು ಸಮಾಚಾರ" ಎಂಬ ಕನ್ನಡದ ಮೊತ್ತ ಮೊದಲ ಪತ್ರಿಕೆ ಆರಂಭವಾಗಿತ್ತು. ಕಿಟೆಲ್ಲರ ಕಾಲಕ್ಕೆ ಅದು ನಿಂತು ಹೋಗಿತ್ತು. ಆಗ ಕಿಟೆಲ್ ತನ್ನ ಸಹೋದ್ಯೋಗಿ ಮಿಶನರಿಯಾಗಿದ್ದ ಜೆ. ಮ್ಯಾಕ್ ಅವರ ಜೊತೆಯಲ್ಲಿ 'ವಿಚಿತ್ರ ವರ್ತಮಾನ ಸಂಗ್ರಹ" ಎಂಬ ಕನ್ನಡ ಪಕ್ಷ ಪತ್ರಿಕೆಯನ್ನು ಆರಂಭಿಸಿದರು. ಅದನ್ನು Illustrated Canarese Journal ಎಂದೂ ಕರೆದರು. ಭಾರತದ ಮತ್ತು ವಿದೇಶಗಳ ಸುದ್ದಿ ಸಮಾಚಾರಗಳೆಲ್ಲವೂ ಅದರಲ್ಲಿ ಪ್ರಕಟವಾಗುತ್ತಿದ್ದುವು. ಆ ಸುದ್ದಿಗಳಿಗೆ ಅಂದು ವಿಶೇಷ ಮಹತ್ವವೂ ಇತ್ತು. ಆದರೆ ಆಕಾಲದಲ್ಲಿ ಪತ್ರಿಕೆ ಓದುವವರ ಸಂಖ್ಯೆ ಹೆಚ್ಚಿರಲಿಲ್ಲ. ಮಾರಾಟಕ್ಕೂ ಅನುಕೂಲವಿರಲಿಲ್ಲ. ಇದರಿಂದ ಆ ಪತ್ರಿಕೆ ಬಹುಕಾಲ ನಡೆಯದೆ ನಿಂತು ಹೋಯಿತು.

ಕಿಟೆಲ್ಲರ ಕೊನೆಯ ಕೃತಿ

ಕೊನೆಯದಾಗಿ ಕಿಟೆಲ್ 'ಕನ್ನಡ ವ್ಯಾಕರಣ ಸಂಗ್ರಹ' ಎಂಬ ಮಹಾನ್ ಗ್ರಂಥವನ್ನು ಬರೆದರು. ಇದು ಅವರು ಕಾಲವಾಗುವ ಕೆಲವೇ ತಿಂಗಳ ಹಿಂದೆ ಪ್ರಕಟವಾಯಿತು (1903). 28 ಅಧ್ಯಾಯ ಮತ್ತು 450 ಪುಟಗಳಿಗಿಂತ ಹೆಚ್ಚಿರುವ ಹಾಗೂ ಇಂಗ್ಲಿಷ್ ಭಾಷೆಯಲ್ಲಿರುವ ತನ್ನ ಈ ಬೃಹದ್ಗ್ರಂಥ ಅಚ್ಚಾಗಿ ಹೊರಬಂದುದನ್ನು ಕಂಡು ಆನಂದಪಟ್ಟ ಕಿಟೆಲ್ ಮಾರನೆಯ ದಿನವೇ ನಿಧನ ಹೊಂದಿದರು. ಈ ಪುಸ್ತಕದಲ್ಲಿ ಕಿಟೆಲ್ ಕನ್ನಡ ಬೈಬಲ್‌ನ ಸವೀಕರಣದ ಬಗ್ಗೆ ಕೆಲವು ಸೂಚನೆಗಳನ್ನು ನೀಡಿದ್ದಾರೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಮೂರು ಘಟ್ಟಗಳಲ್ಲಿ ಕನ್ನಡದ ವ್ಯಾಕರಣ ನಿಯಮಗಳು ಹೇಗೆ ಬದಲಾದುವು, ಅದರ ಸಾಧಿತ ರೂಪಗಳ ಪ್ರಾದೇಶಿಕ ರೂಪಗಳು ಮುಂತಾದ ಸಮಸ್ತ ವಿಷಯಗಳ ಬಗ್ಗೆ ತಿಳಿಸಿದ್ದಾರೆ. ಈ ಹಿಂದೆ ಇಷ್ಟೊಂದು ಸವಿಸ್ತರವಾಗಿ ವ್ಯಾಕರಣ ಪ್ರತಿಪಾದಿತ ಗ್ರಂಥವಿದ್ದುದ್ದು ತಿಳಿದು ಬಂದಿಲ್ಲ. ಕನ್ನಡದ ಮಟ್ಟಿಗೆ ಇದೊಂದು ಸರ್ವಾಂಗೀಣವಾದ ವ್ಯಾಕರಣ ಗ್ರಂಥವೆನಿಸುತ್ತದೆ.

ಹೀಗೆ ಕನ್ನಡದಲ್ಲಿ ಹಲವಾರು ಸಾಧನೆಗಳನ್ನು ಯಶಸ್ವಿಯಾಗಿ ನಡೆಸಿ ವಿಶಿಷ್ಟ ಕೃತಿಗಳನ್ನು ರಚಿಸಿದ ಮಿಶನರಿ ಕಿಟೆಲ್ಲರನ್ನು ಹೊಸಗನ್ನಡದ ಆಧುನಿಕ ನಾಗವರ್ಮನೆಂದು ಹೇಳಬಹುದು. ಚಿಕ್ಕವಯಸ್ಸಿನಲ್ಲಿಯೇ ಕನ್ನಡನಾಡಿಗೆ ಆಗಮಿಸಿ ನಾಲ್ಕು ದಶಕಗಳವರೆಗೆ ಇಲ್ಲಿಯೇ ನೆಲೆನಿಂತು'' ಮತಪ್ರಚಾರದ ಜೊತೆಗೆ ಕನ್ನಡ ಭಾಷಾ ಸಾಹಿತ್ಯಗಳ ಅಭಿವೃದ್ಧಿಗಾಗಿ ಅಪಾರವಾಗಿ ಶ್ರಮಿಸಿದ ಕಿಟೆಲ್ಲರನ್ನು ಕನ್ನಡಿಗರೆಂದಿಗೂ ಮರೆಯುವಂತಿಲ್ಲ. ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಿಟೆಲ್ಲರ ಹೆಸರು ಅಜರಾಮರ.

ಹೀಗೆ 19 ನೆಯ ಶತಮಾನದ ಪೂರ್ವಾರ್ಧದಿಂದ ಸುಮಾರು 120ಕ್ಕೂ ಮೇಲ್ಪಟ್ಟು ವಿವಿಧ ಪಂಥಗಳಿಗೆ ಸೇರಿದ ಮಿಶನರಿಗಳು ಕನ್ನಡ ಭಾಷೆ ಸಾಹಿತ್ಯಗಳ ಬೆಳವಣಿಗೆಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ವಿದೇಶೀಯರಾಗಿಯೂ ತಾವು ಬಂದು ನೆಲೆನಿಂತ ನಾಡಿನ ಭಾಷೆಯಾದ ಕನ್ನಡದ ಬಗ್ಗೆ ಅಪಾರ ಅಭಿಮಾನ ತೋರಿದ್ದಾರೆ; ಕನ್ನಡ ನಾಡಿನಲ್ಲಿ ಕನ್ನಡಿಗರಾಗಿ ಬಾಳಿದ್ದಾರೆ. ಮತಪ್ರಸಾರದ ಜೊತೆಗೆ ಇಲ್ಲಿನ ಜನಭಾಷೆಯಲ್ಲಿ ಗ್ರಂಥಗಳನ್ನು ರಚಿಸಿ, ಮುದ್ರಣ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಶ್ರದ್ಧೆಯಿಂದ ದುಡಿದಿದ್ದಾರೆ. ಕನ್ನಡ, ಭಾಷೆ, ಸಾಹಿತ್ಯಗಳಲ್ಲಿ ಅನೇಕ ಹೊಸ ವಿಚಾರಗಳನ್ನು, ಹೊಸ ರೂಪಗಳನ್ನು ಪ್ರತಿಷ್ಠಾಪಿಸಿದ್ದಾರೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಎಲ್ಲ ಕ್ರೈಸ್ತ ಮಿಶನರಿಗಳು ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ.

ಅಡಿ ಟಿಪ್ಪಣಿಗಳು

1 ಕಿಟೆಲ್ಲರ ಬರಹಗಳಲ್ಲಿ ವೈವಿಧ್ಯ–ಕನ್ನಡಕ್ಕೆ ಕಿಟೆಲ್ಲರ ಕೊಡುಗೆ ಪು. 63

2 ಇ. ಪಿ. ರೈಸ್: *History of Kanarese Literature,* ಪು. 101, 102

3 *Karanataka through The Ages,* ಪುಟ. 788

4 ಇದು ಕನ್ನಡದಲ್ಲಿ ಮೊದಲನೆಯ ಅಧಿಕೃತ ಸಂಕ್ಷಿಪ್ತ ಬೈಬಲ್ ಆಗಿದೆ.

5 ಇದೊಂದು ವಿಶಿಷ್ಟ ಕನ್ನಡ ವ್ಯಾಕರಣ ಗ್ರಂಥ.

6 *Evidences of the Christian Revelation*

7 *In Whom Shall We Trust* ಮತ್ತು *On the Atonement* – ಮುಂತಾದ ವುಗಳ ಅನುವಾದಗಳನ್ನು ರೀವ್ ಮತ್ತು ಟೇಲರ್ ಅವರ ನೆರವಿನೊಂದಿಗೆ ಹೊರತಂದರು.

8 *Classical Dictionary of India* – ಭಾರತೀಯ ಪುರಾಣಗಳು, ಧರ್ಮ ಗ್ರಂಥಗಳು, ಕಾವ್ಯಗಳು, ಕಲೆಗಳು, ಆಚಾರ ವಿಚಾರಾದಿಗಳನ್ನು ಅಕಾರಾದಿಯಾಗಿ ಹೊಂದಿಸಿ ಇದರಲ್ಲಿ ಪರಿಚಯಿಸಲಾಗಿದೆ.

9 ಶ್ರೀನಿವಾಸ ಹಾವನೂರ್ – ಹೊಸಗನ್ನಡದ ಅರುಣೋದಯ

10 ಆ ಲೇಖನಗಳು 1855ರಲ್ಲಿ *Coorg Memoirs* ಎಂಬ ಇಂಗ್ಲಿಷ್ ಪುಸ್ತಕ ರೂಪದಲ್ಲಿ ಹೊರಬಂದಿವೆ.

11 ಜರ್ಮನ್ ದೇಶದ ವಾಯುವ್ಯ ಭಾಗದಲ್ಲಿರುವ ಒಂದು ಚಿಕ್ಕ ಊರು.

ಪರಾಮರ್ಶನ ಗ್ರಂಥಗಳು

1 ಕನ್ನಡ ವಿಶ್ವಕೋಶ – 4 ನೇ ಸಂ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

2 19 ನೆಯ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ–ಐ. ಮಾ. ಮುತ್ತಣ್ಣ

3 ಹೊಸಗನ್ನಡದ ಅರುಣೋದಯ–ಡಾ. ಶ್ರೀನಿವಾಸ ಹಾವನೂರ್

4 ಕಿಟೆಲ್–ಡಾ. ಹಾವನೂರ್, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

5 ಕನ್ನಡಕ್ಕೆ ಕಿಟೆಲ್ಲರ ಕೊಡುಗೆ–ಕಿಟೆಲ್ ಕಾಲೇಜು, ಧಾರವಾಡ.

6 ಕಿಟೆಲ್ಲರ ಕನ್ನಡ–ಇಂಗ್ಲಿಷ್ ನಿಘಂಟು.

7 ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ–ಸಂ. 23 ; ಸಂಚಿಕೆ–3.

8 ರೆ.ಎಫ್. ಕಿಟೆಲ್–ಪ್ರಬುದ್ಧ ಕರ್ನಾಟಕ–ಸ. XL ; ಸಂ. 4 (ಡಿ.ಎಲ್.ಎನ್.)

9 E.P. Rice : *History of Canarese Literature.*

10 *Karanataka through the Ages.*

ವಿ. ಎಸ್. ಶೇಷಗಿರಿರಾವ್

ರವೀಂದ್ರರ ದೇವರ ಕಲ್ಪನೆ

೧

ರವೀಂದ್ರರ ದೇವರ ಕಲ್ಪನೆ ಅವರ ದರ್ಶನಕ್ಕೇ ವಿಶಿಷ್ಟವಾದುದಾಗಿದೆ. ಅವರ ಪ್ರಕಾರ ದೇವರು ಉದಾಸೀನನಲ್ಲ. ಅವನು ಮಾನವ ಕುಲವನ್ನು ಅಗಾಧವಾಗಿ ಪ್ರೀತಿಸುತ್ತಾನೆ. ಮಾನವ ಕುಲದ ಕಷ್ಟನಷ್ಟ ದುಃಖನೋವುಗಳಿಂದ ವಿಚಲಿತವಾಗಿ ಅನುಕಂಪವನ್ನು, ಸಹಾನುಭೂತಿಯನ್ನು ತೋರಿಸುತ್ತಾನೆ. ಅವನು ದಯಾನಿಧಿ, ಕಾರುಣ್ಯಮೂರ್ತಿ. ಅವನು ಮಿತತತ್ವಗಳಾದ ಜೀವ ಮತ್ತು ಜಗತ್ತುಗಳ ನಿರಂತರ ಸಂಗವನ್ನು ಬಯಸುತ್ತಾನೆ. ಅವನು ಅವರಿಗಾಗಿ ಬಹಳ ಮರುಕ ಪಡುತ್ತಾನೆ ; ಅರಿಸ್ಟಾಟಲನ ದೇವರಂತೆ ತನ್ನ ಆನಂದದಲ್ಲಿ ಮಗ್ನನಾಗಿ ಮಾನವಕುಲವನ್ನು ಕಡೆಗಣ್ಣಿನಿಂದ ನೋಡುವುದಿಲ್ಲ. ಅವನು ಸಂಬಂಧರಹಿತನಾದವನಲ್ಲ ; ಅವನು ಅಂತರ್ಯಾಮಿ. ಈ ಲೋಕವೇ ಅವನ ವಾಸಸ್ಥಾನ. ಅದನ್ನು ಬಿಟ್ಟು ಬೇರೆ ಮತ್ಯಾವ ಲೋಕದಲ್ಲಿಯೂ ಅವನಿಲ್ಲ. ಇಡೀ ವಿಶ್ವವೇ ಅವನ ಆಟದ ಮೈದಾನ. ಅದರ ಮೂಲಕವೇ ಅವನು ತನ್ನನ್ನು ತಾನು ತೋರ್ಪಡಿಸಿಕೊಳ್ಳುತ್ತಾನೆ. ತನ್ನನ್ನು ತಾನು ತಿಳಿಯಲು, ವಿಶ್ವವನ್ನು ಪರಿಪೂರ್ಣಗೊಳಿಸಲು ಅವನು ಮಾನವತೆಯನ್ನು ಆಶ್ರಯಿಸಿದ್ದಾನೆ ! ತನ್ನ ಸಹಪಾಠಿಗಳೂ, ಒಡನಾಡಿಗಳೂ ಆದ ಮಾನವರು ಮತ್ತು ವಿಶ್ವಗಳೊಡನೆ ಬಿಡಿಸಿಕೊಳ್ಳಲಾರದ ಆತ್ಮೀಯ ಸಂಬಂಧವನ್ನು ಹೊಂದಿದ್ದಾನೆ. ದೇವರನ್ನು ರವೀಂದ್ರರು 'ಬಂಧು', 'ಜೀವನ್‌ದೇವತಾ' ಎಂದೇ ಸಂಬೋಧಿಸುತ್ತಾರೆ.[1]

ರವೀಂದ್ರರ ಪ್ರಕಾರ 'ದೇವರು' ಸಿದ್ಧಪಡಿಸಿ ತೋರಿಸಬೇಕಾದ ಊಹಾ-ಕಲ್ಪನೆ(hypothesis) ಅಲ್ಲ. ಅವನು ಸ್ವತಃಸಿದ್ಧ ತತ್ವ. ಅವನ ಅಸ್ತಿತ್ವವನ್ನು ವಾದ ವಿವಾದಗಳ ಮೂಲಕ ಸಿದ್ಧಪಡಿಸುವ ಅವಶ್ಯಕತೆಯಿಲ್ಲ. ಅವನು ಜೀವನಾನುಭವಗಳ ತಳಹದಿ. ನಾವು ಬೆಳಕನ್ನು ಹೇಗೆ ಅನುಭವಿಸುತ್ತೇವೆಯೋ ಹಾಗೆಯೇ ದೇವರ ಅಸ್ತಿತ್ವವನ್ನು ಅನುಭವಿಸುತ್ತೇವೆಂದು ರವೀಂದ್ರರು ಹೇಳುತ್ತಾರೆ. ತತ್ವಶಾಸ್ತ್ರದಲ್ಲಿ ಈಗಾಗಲೇ ದೇವರ ಅಸ್ತಿತ್ವನ್ನು ಸಿದ್ಧಪಡಿಸಲು ಹೂಡಿರುವ ಕಾರ್ಯ-ಕಾರಣವಾದ,

ನೈತಿಕವಾದ ಮುಂತಾದ ವಾದಗಳನ್ನು ಹೋಲುವ ವಾಕ್ಯಗಳು ಅವರ ಗ್ರಂಥಗಳಲ್ಲಿ ಕಾಣಸಿಗುತ್ತವೆ. ಒಟ್ಟಿನಲ್ಲಿ ತರ್ಕ ಬುದ್ಧಿಯನ್ನು ಉಪಯೋಗಿಸಿಕೊಂಡು ದೇವರ ಅಸ್ತಿತ್ವವನ್ನು ಸಾಧಿಸುವುದು ಸಾಧ್ಯವೆಂದೂ, ಹಾಗೆಂದ ಮಾತ್ರಕ್ಕೆ ಅವನು ಕೇವಲ ಸೈದ್ಧಾಂತಿಕ ಮಟ್ಟದಲ್ಲಿ ನಿಲ್ಲುವಂಥವನಲ್ಲವೆಂದೂ, ಅವನು ಪ್ರಧಾನತಃ ಅನುಭವ ಗಮ್ಯನೆಂದೂ ರವೀಂದ್ರರು ಸಾರುತ್ತಾರೆ.

೨

ಮಿತತತ್ವದಿಂದ ಪ್ರಾರಂಭಿಸಿ ದೇವರ ಅಸ್ತಿತ್ವವನ್ನು ಸಾಧಿಸಲು ಮುಂದಾಗುತ್ತಾರೆ. ಮಿತತತ್ವ ಸ್ವಾವಲಂಬಿಯಲ್ಲ; ಅದು ಅಪರಿಪೂರ್ಣ ಹಾಗೂ ಎಲ್ಲದರ ಅಭಾವ ಪೂರ್ಣ ತತ್ವ. ಅದು ಸ್ವವಿರೋಧಗಳಿಂದ ತುಂಬಿ ತುಳುಕುತ್ತಿದೆ. ಅದು ಅಜ್ಞಾನ, ದುಃಖಗಳ ಆಗರವಾಗಿದೆ. ಅದರ ಜ್ಞಾನ ಮಿತವಾದುದು. ಅದರ ಜ್ಞಾನ ಕ್ಷೀಣವಾಗುತ್ತಾ ಹೋಗುತ್ತದೆಯೇ ಹೊರತು ಎಂದಿಗೂ ಉದ್ದೀಪನಗೊಳಿಸುವುದಿಲ್ಲ. ಅನಂತ ತತ್ವದೊಡನೆ ಒಡಗೂಡದ ಮಿತತತ್ವ "ಬೆಳಕಿಲ್ಲದ ದೀಪದಂತೆ, ಸಂಗೀತವಿಲ್ಲದ ವೀಣೆಯಂತೆ"[1(a)] ಎಂದು ಅವರು ಪ್ರತಿಪಾದಿಸುತ್ತಾರೆ. ಹೀಗೆ ಮಿತವೂ, ಅಪರಿಪೂರ್ಣವೂ ಆದ ತತ್ವವೊಂದಿರುವಂತೆ, ಅನಂತವೂ, ಪರಿಪೂರ್ಣವೂ, ಸ್ವಾವಲಂಬಿಯೂ ಆದ ತತ್ವವೊಂದಿರಬೇಕು. ಆ ಅನಂತ ತತ್ವವೇ 'ದೇವರು' ಎಂದು ರವೀಂದ್ರರು ಹೇಳುತ್ತಾರೆ.

ಹಾಗೆಯೇ ವಿಶ್ವ ಮಿತತತ್ವಗಳಿಂದ ತುಂಬಿದ್ದರೂ ಅದು ದುರವಸ್ಥೆಯಾಗಿಲ್ಲ; ಅದರಲ್ಲಿ ಒಂದು ಕ್ರಮವಿದೆ, ನಿಯಮವಿದೆ; ಒಂದು ಆದರ್ಶ ಯೋಜನೆಯಿದೆ. ಅದರಲ್ಲಿನ ಪ್ರತಿಯೊಂದು ವಸ್ತುವೂ ಉದ್ದೇಶವನ್ನು ಹೊಂದಿ ಅದನ್ನು ಸಫಲಗೊಳಿಸಿಕೊಳ್ಳಲು ನಿರಂತರವೂ ಪ್ರಯತ್ನ ಪಡುತ್ತಿರುತ್ತದೆ. ಈ ಜಗತ್ತಿನಲ್ಲಿ ನಿಷ್ಪ್ರಯೋಜಕವಾದದ್ದು ಯಾವುದೂ ಇಲ್ಲ. ಈ ನಿಯಮ, ಈ ಕ್ರಮ, ಈ ಯೋಜನೆಗಳಿಗೆ ಕುರುಡು ಶಕ್ತಿ (blind forces) ಗಳಿಂದೂ, ಕಾರಣವಲ್ಲ. ಏಕೆಂದರೆ ಕುರುಡು ಶಕ್ತಿಗಳು ಯೋಜಿತ ಕ್ರಮವನ್ನೂ ಉದ್ದೇಶವನ್ನೂ ರೂಪಿಸಲು ಅಸಮರ್ಥವಾಗಿವೆ. ಆದುದರಿಂದ ವಿಶ್ವದ ಕ್ರಮ, ನಿಯಮ ಯೋಜನೆಗಳಿಗೆ ಆಧಾರ ಭೂತವಾದ ಪ್ರಜ್ಞಾಪೂರ್ವಕವಾದ ತತ್ವವೊಂದಿರಬೇಕು. ಅದೇ 'ದೇವರು' ಎಂದು ರವೀಂದ್ರರು ಸಾರುತ್ತಾರೆ.

ರವೀಂದ್ರರು ದೇವರ ಅಸ್ತಿತ್ವವನ್ನು ಸೌಂದರ್ಯಾನುಭವದ ಮೂಲಕವೂ ಸ್ಥಾಪಿಸುತ್ತಾರೆ. ಜೀವನದಲ್ಲಿ ಕೊನೆ ಮೊದಲಿಲ್ಲದೆ ದುಃಖ, ನೋವು, ಸಾವುಗಳು ಸಂಭವಿಸುತ್ತಿದ್ದರೂ, ಜನರು ನಿರಾಶಾವಾದಿಗಳಾಗಿಲ್ಲ. ಜೀವನ ಅವರಿಗೆ ಆಕರ್ಷಣೆಯನ್ನು ಒಡ್ಡುವುದನ್ನು ಬಿಟ್ಟಿಲ್ಲ. ಅದು ನೀರಸವೂ ಶೂನ್ಯವೂ ಆಗದೆ ತನ್ನ ಒಲವು ಚೆಲುವು, ವೈವಿಧ್ಯತೆ, ಶೃಂಗಾರ, ಸಂಗೀತ ಸೌಂದರ್ಯಗಳಿಂದ ಆಪ್ಯಾಯಮಾನವೂ ಆನಂದಮಯವೂ ಆಗಿ ಮುಂದುವರಿಯುತ್ತಿದೆ. ಎಂತಹ ದುರ್ಗಮ ಸನ್ನಿವೇಶಗಳಲ್ಲೂ ಶಾಂತಿ, ಸಮಾಧಾನ, ಸಾಮರಸ್ಯ, ಧೈರ್ಯ, ಸೌಂದರ್ಯಗಳನ್ನು ನೀಡುವುದನ್ನು

ಅನು ನಿಲ್ಲಿಸಿಯೇ ಇಲ್ಲ; ಅವು ಜೀವನದಿಂದ ಮಾಯವಾಗಿಲ್ಲ. ಜೀವನವೆಂಬುದು ಸಾವು ನೋವುಗಳಿಂದ ಕೂಡಿದರೂ ಅದೊಂದು ಬರ್ಬರ ಕಠೋರ ಕರ್ಕಶ ಶಬ್ದವಾಗಿರದೆ ಸುಮಧುರವೂ ಸುಲಲಿತವೂ ಸುಶ್ರಾವ್ಯವೂ ಸುಗಮವೂ ಆದ ಸಂಗೀತವಾಗಿದೆ. ಇದು ಹೇಗೆ ಸಾಧ್ಯ ? ಕೋಮಲನೂ, ಸುಕುಮಾರನೂ, ಸತ್ಯನೂ, ಶಿವನೂ, ಪ್ರೇಮ ಸ್ವರೂಪಿಯೂ ಭುವನ ಸುಂದರನೂ ಆದ ದೇವರೇ ಈ ಎಲ್ಲ ಸಾಧ್ಯತೆಯನ್ನು ಮೌನ ವಾಗಿ ಉತ್ತರಿಸುತ್ತಿದ್ದಾನೆಂದು ರವೀಂದ್ರರು ಪ್ರತಿಪಾದಿಸುತ್ತಾರೆ.

ಹೀಗೆ ಮಿತತತ್ವವಲ್ಲದೆ ಅಮಿತವೂ ಅನಂತವೂ ಅನ್ವೃತವೂ ಅಜವೂ, ಅಭಯವೂ ಆನಂದ ಸ್ವರೂಪವುಳ್ಳದ್ದೂ, ಆದ ತತ್ವವು ಒಂದಿರಲೇಬೇಕೆಂದು ಅವಶ್ಯಕವಾಗಿ ಒಪ್ಪ ಬೇಕಾಗುತ್ತದೆಂದೂ, ಅದೇ 'ದೇವರು' ಎಂದೂ ರವೀಂದ್ರರು ಅಭಿಪ್ರಾಯ ಪಡುತ್ತಾರೆ.

೨

ರವೀಂದ್ರರು ತಮ್ಮ ಗ್ರಂಥಗಳಲ್ಲಿ ಪರಮಸತ್ಯವನ್ನು 'ದೇವರು' ಎಂಬ ಹೆಸರಿನಿಂದ ಪದೇ ಪದೇ ಸೂಚಿಸುತ್ತಾರೆ. ಬಹಳ ಅಪರೂಪವಾಗಿ ಅದನ್ನು ನಿರಪೇಕ್ಷ ತತ್ವ, (Absolute) ಎಂದು ಸೂಚಿಸುತ್ತಾರೆ. ದೇವರನ್ನು ಅವರು 'ಮನೇರ್ ಮನುಷ್' ಎಂದು ಸಂಬೋಧಿಸುತ್ತಾರೆ. 'ಮನೇರ್ ಮನುಷ್' ಎಂದರೆ ಮಾನವನ ಮನಸ್ಸಿನಲ್ಲಿ ರುವ 'ವ್ಯಕ್ತಿ' ಎಂದು ಅರ್ಥ. ಹೀಗೆ ದೇವರು, ಅವರ ಪ್ರಕಾರ ವ್ಯಕ್ತಿಸ್ವರೂಪನಾಗಿ ದ್ದಾನೆ. ಅವನು ವ್ಯಕ್ತಿಸ್ವರೂಪನಾದರೂ, ಮಾನವ ವ್ಯಕ್ತಿಗಳಂತೆ ಮಿತನಾದವನಲ್ಲ. ಆಂದರೆ ಅವನ ವ್ಯಕ್ತಿತ್ವ ದಿವ್ಯವೂ, ಅಮಿತವೂ, ಅನಂತವೂ ಪರಿಪೂರ್ಣವೂ ಆದುದು. ಅವನು ಪುರುಷೋತ್ತಮ. ಅವರಲ್ಲಿ ಮಾತಿನಲ್ಲೇ ಹೇಳುವುದಾದರೆ : "It is not in individual Personality that the Reality is contained, but in infinite Personality."[2] ಇಟಲಿಯ ಚಿತ್ರಧಾನವಾದಿಗಳು ಪ್ರತಿಪಾದಿಸುವ ದೇವರನ್ನಾಗಲೀ, ಹಮೈಸನ್‌ನ 'ಮಿತದೇವರನ್ನಾಗಲೀ ರವೀಂದ್ರರು ಒಪ್ಪಿಕೊಳ್ಳುವುದಿಲ್ಲ.

ದೇವರು ವ್ಯಕ್ತಸ್ವರೂಪವುಳ್ಳವನು (Person) ಎಂದರೆ ಅವನಿಗೆ ತನ್ನದೇ ಆದ ಸಂಕಲ್ಪಶಕ್ತಿಯೂ, ಇಚ್ಛಾಬಲವೂ, ನಿರ್ಧಾರಕ ಶಕ್ತಿಯೂ ಉಂಟೆಂದು ಅರ್ಥ. ಯಾವುದಕ್ಕೇ ಆಗಲೀ ಇಚ್ಛಾಬಲವಿದೆಯೆಂದರೆ ಆದಕ್ಕೆ ಒಂದು ವ್ಯಕ್ತಿತ್ವವಿರಬೇಕೆಂದು ಅರ್ಥವಾಗುತ್ತದೆ: ವ್ಯಕ್ತಿಸ್ವರೂಪರಾದ ಮಾನವರು 'ದೇವರು ವ್ಯಕ್ತಿಸ್ವರೂಪನಾದರೆ ಅವನನ್ನು ಚೆನ್ನಾಗಿ ಗ್ರಹಿಸಬಹುದು ಸಾಕ್ಷಾತ್ಕರಿಸಿಕೊಳ್ಳಬಲ್ಲದು. ಅಮೂರ್ತವೂ, ಅನಿರ್ದಿಷ್ಟವೂ, ನಿರಪೇಕ್ಷವೂ ಆದ ತತ್ವಕ್ಕೆ ಇಚ್ಛಾಬಲವಿದೆಯೆಂದಾಗಲೀ, ನಿರ್ಧಾರಕ ಶಕ್ತಿಯುಂಟೆಂದಾಗಲೀ ಭಾವಿಸಲಾಗುವುದಿಲ್ಲ. ದೇವರು ವ್ಯಕ್ತಿಸ್ವರೂಪನೆಂದು ಭಾವಿ ಸದೇ ಹೋದರೆ, ಅವನು ಅಮೂರ್ತನೂ, ಉದಾಸೀನನೂ, ಸಂಬಂಧರಹಿತನೂ ಆಗಿ ಬಿಡುತ್ತಾನೆ. ದೇವರು ವ್ಯಕ್ತಿಸ್ವರೂಪವುಳ್ಳವನೆಂದು ತೋರಿಸುವುದಕ್ಕಾಗಿಯೇ ಅವ

ನನ್ನು ರವೀಂದ್ರರು 'ಆತ್ಮೀಯ ಸ್ನೇಹಿತ', 'ಬಂಧು' ಎಂದು ಕರೆಯುತ್ತಾರೆ. ಅಂತಹ ಭಾವನೆಗೆ ದೇವರು ಪಾತ್ರನಾಗದೇ ಹೋದರೆ ಅವನು ನಿಜವಾದ ದೇವರೆನಿಸಿಕೊಳ್ಳು ವುದಿಲ್ಲ. ವ್ಯಕ್ತಿಸ್ವರೂಪವುಳ್ಳ ದೇವರು ಮಾತ್ರ ನಾವು ಅನುಭವಿಸುವಂತೆ ಮಾಡಬಲ್ಲ; ತತ್ವಶಾಸ್ತ್ರದ ನಿರ್ಗುಣವೂ, ನಿರಾಕಾರವೂ, ನಿರವಯವವೂ ಆದ ಅಮೂರ್ತ ತತ್ವವಲ್ಲ ಎಂದು ರವೀಂದ್ರರು ಅಭಿಪ್ರಾಯ ಪಡುತ್ತಾರೆ. ಅವರ ಮಾತುಗಳನ್ನೇ ಇಲ್ಲಿ ಉಲ್ಲೇಖಿ ಸಬಹುದಾದರೆ : "Reality can be regarded as personality acting upon personalities through incessant manifestations".[3]

"My world is given to the personal me by a personal being. It is a gift of soul to soul"[4]. ದೇವರು ಮಾನವತೆ ಯನ್ನು ಅಮಿತವಾಗಿ ಪ್ರೀತಿಸುತ್ತಾನೆ. ಅವರ ಸಹವಾಸವನ್ನು ಬಯಸುತ್ತಾನೆ. ಮಾನ ವರನ್ನು ತನ್ನ ಹೆಸರುಗಳೊಂದಿಗೆ ಸೇರಿಸಿಕೊಂಡಿದ್ದಾನೆ (ಉದಾ : ನರಹರಿ, ನರಸಿಂಹ, ನರನಾರಾಯಣ ಇತ್ಯಾದಿ). ರವೀಂದ್ರರು ತಮ್ಮ ತತ್ವಚಿಂತನೆಯಲ್ಲಿ ದೇವರನ್ನು ಮಾನ ವೀಕರಿಸಿ, ಮಾನವನನ್ನು ದೈವೀಕರಿಸುತ್ತಾರೆ.

ದೇವರು, ವ್ಯಕ್ತಿಸ್ವರೂಪನೆಂದು ಹೇಳುವ ರವೀಂದ್ರರು ತಮಗರಿವಿಲ್ಲದೆಯೇ ಅವ ನಿಗೆ 'ಮನುಷ್ಯತ್ವಾರೋಪಣೆ'ಯನ್ನು (Athropomorphism) ಪ್ರತಿಪಾದಿಸುವ ಪ್ರಸಂಗ ಉಂಟಾಗುತ್ತದೆಂಬ ಆರೋಪವುಂಟು. ಈ ಆರೋಪವನ್ನು ಅವರು ಹೀಗೆ ಉತ್ತರಿಸುತ್ತಾರೆ; ದೇವರು ವ್ಯಕ್ತಿಸ್ವರೂಪನೆಂದು ಒಪ್ಪಿದ ಮಾತ್ರಕ್ಕೆ ಅಪಕ್ವವೂ, ಒರಟೂ ಆದ (crude) 'ಮನುಷ್ಯತ್ವಾರೋಪಣೆ'ಯನ್ನು ಒಪ್ಪಿದಂತಾಗುವುದಿಲ್ಲ. ಅದು ಜ್ಞಾನೋದಯದ ದಿವ್ಯ 'ಮನುಷ್ಯತ್ವಾರೋಪಣೆ". ಹಾಗೆ ನೋಡಿದರೆ 'ಮನುಷ್ಯತ್ವಾರೋಪಣೆ" ಬಹುತೇಕ ಎಲ್ಲ ಧರ್ಮಗಳಲ್ಲೂ ಇದ್ದೇ ಇದೆ. ಜ್ಞಾನೋದ ಯದ 'ಮನುಷ್ಯತ್ವಾರೋಪಣೆ' ತಪ್ಪು ಎಂದು ಹೇಳುವವರು ತಾವು ಮಾನವರಾಗಿ ಹುಟ್ಟಿದ್ದೇ ತಪ್ಪು ಎಂದು ತಮ್ಮನ್ನು ತಾವು ಹಳಿದುಕೊಳ್ಳಬೇಕಾಗುತ್ತದೆಂದು ರವೀಂದ್ರರು ಅಭಿಪ್ರಾಯಪಡುತ್ತಾರೆ.

ಆದರೂ ರವೀಂದ್ರರು ಸತ್ಯ ನಿರಪೇಕ್ಷ ಎಂಬ ಕಲ್ಪನೆಯನ್ನು ಪೂರ್ಣವಾಗಿ ತ್ಯಜಿ ಸಿಲ್ಲ. ದೇವರು ವ್ಯಕ್ತಿಸ್ವರೂಪನೇನೋ ಹೌದು. ಆದರೆ ಅದು ಅವನ ಅನಂತತೆ ಯನ್ನು ಮಿತಗೊಳಿಸುವುದಿಲ್ಲ. ಮಾನವರೊಡನೆ ಅವನು ಹೊಂದಿರುವ ಆತ್ಮೀಯ ಸಂಬಂಧವಷ್ಟೇ ದೇವರಲ್ಲ; ಅದನ್ನು ಮೀರಿ ಅವನು ನಿಂತಿದ್ದಾನೆ. ನಮ್ಮೊಡನೆ ಅವನು ಹಂಚಿಕೊಳ್ಳುವುದಕ್ಕಿಂತಲೂ ಇನ್ನೂ ಮಿಗಿಲಾಗಿ ಇದ್ದಾನೆ. ಭೌತಿಕ ವಸ್ತುಗಳನ್ನು ಹಂಚುವ ಕಾರ್ಯ ಮಿತಿಯುಳ್ಳದ್ದು. ಏಕೆಂದರೆ ಅದು ಬಹಳ ಬೇಗ ಆಗಿಹೋಗುತ್ತವೆ. ಆದರೆ ದೇವರನ್ನು ಎಷ್ಟು ಜನ ಎಷ್ಟು ಕಾಲ ಸೇವಿಸಿದರೂ ಅವನು 'ಆಗಿಹೋಗುವುದಿಲ್ಲ' ಇಲ್ಲವೆ 'ಇಲ್ಲವಾಗುವುದಿಲ್ಲ; ಅವನು ಅವ್ಯಯ, ಅಚ್ಯುತ. ಹೀಗೆ ದೇವರು ವ್ಯಕ್ತಿ

ಸ್ವರೂಪನೆಂಬುದು ಇಡೀ ಸತ್ಯದ ಒಂದು ಅಂಶವಷ್ಟೆ ; ಅದೇ ಇಡೀ ಸತ್ಯವಲ್ಲ. ಅವರ ಮಾತಿನಲ್ಲೇ ಹೇಳುವುದಾದರೆ : "God is the inscrutable without name and form."[5]

ಹೀಗೆ ರವೀಂದ್ರರ ಚಿಂತನೆಯಲ್ಲಿ ದೇವರ ಸಾಕಾರ ವ್ಯಕ್ತಿಸ್ವರೂಪ ಅಂಶ, ಹಾಗೂ ನಿರಾಕಾರ ನಿರಪೇಕ್ಷ ಅಂಶಗಳ — ಇವುಗಳ ಸಂಗನುವಿದೆ. ಸತ್ಯ ನಿರ್ಗುಣ ಮಾತ್ರವೆಂದೂ ಸಗುಣವಲ್ಲವೆಂದೂ, ಹಾಗೆಯೇ ಸಗುಣ ಮಾತ್ರವೆಂದೂ ನಿರ್ಗುಣವಲ್ಲ ವೆಂದೂ ವಾದಿಸುವ ವೇದಾಂತಿಗಳ ಬಗ್ಗೆ ರವೀಂದ್ರರು ತಮ್ಮ ಅಸಮ್ಮತಿಯನ್ನು ವ್ಯಕ್ತ ಪಡಿಸುತ್ತಾರೆ. ಶುದ್ಧಪ್ರೇಮ, ದೇವರ ಸಗುಣ–ನಿರ್ಗುಣ, ಸಾಕಾರ–ನಿರಾಕಾರ ಅತೀತ–ಅಂತರ್ಯಾಮಿತ್ವಗಳನ್ನು ಬಹಳ ಚೆನ್ನಾಗಿ ಸಮನ್ವಯ ಮಾಡುತ್ತದೆಂದೂ, ಅದೇ ಎಲ್ಲ ತತ್ವಚಿಂತನೆಯ ಹಾಗೂ ಇಡೀ ಜೀವನದ ಜೀವಾಳವೆಂದು ಅವರು ಒತ್ತಿ ಒತ್ತಿ ಹೇಳುತ್ತಾರೆ : "But in Love Yea and Nay are held together. Love has *nirguna* at one hand and *saguna* at the other."[6]

೪

ಪ್ರಕೃತಿಯನ್ನು ಆರಾಧಿಸುವುದರ ಮೂಲಕ ಮಾನವ ದೈವಸಾಕ್ಷಾತ್ಕಾರವನ್ನು ಪಡೆಯಬಹುದೆಂದು ರವೀಂದ್ರರು ಹೇಳುತ್ತಾರೆ. ದೇವರು, ದೇವಸ್ಥಾನ, ಚರ್ಚ್, ಮಸೀದಿಗಳಲ್ಲಿ ಕಾಣಸಿಗುವುದಿಲ್ಲ. ಭೂಮಿಯನ್ನು ಉಳುತ್ತಿರುವ ಅನ್ನದಾತ ರೈತ ನಲ್ಲಿಯೂ, ರಸ್ತೆಯನ್ನು ಮಾಡುತ್ತಿರುವ ಕೆಲಸಗಾರರಲ್ಲಿಯೂ ಒಂದಾಗುವುದರ ಮೂಲಕ ದೇವರನ್ನು ಕಾಣಬಹುದೆಂದೂ, ಕಾಯಕವೇ ದೇವರೆಂದೂ ರವೀಂದ್ರರು ಪ್ರತಿ ಪಾದಿಸುತ್ತಾರೆ.

೫

ದೇವರು ದಯಾಮಯನೂ, ಕರುಣಾನಿಧಿಯೂ ಪ್ರೇಮ ಸ್ವರೂಪಿಯೂ ಎಂದು ಒಪ್ಪುವ ಚಿಂತಕರು, ಪ್ರಪಂಚದಲ್ಲಿ ಸಾವು, ನೋವು, ದುಃಖ, ಅನಿಷ್ಟಗಳೇಕಿವೆ ಎಂಬ ಬೃಹದಾಕಾರದ ಪ್ರಶ್ನೆಯನ್ನು ಉತ್ತರಿಸಬೇಕು. ಇದು ಯುಗಯುಗಾಂತರದ ಪ್ರಶ್ನೆ. ರವೀಂದ್ರರು ಈ ಪ್ರಶ್ನೆಗೆ ತಮ್ಮದೇ ಆದ ರೀತಿಯಲ್ಲಿ ಉತ್ತರವಿತ್ತಿದ್ದಾರೆ. ಅನಿಷ್ಟ ಎಂಬುದು ಭ್ರಮೆಯಲ್ಲ ; ಅದು ವಸ್ತುಸಂಗತಿ ಎಂದು ಅವರು ಒಪ್ಪುತ್ತಾರೆ. ಅವರ ಪ್ರಕಾರ ಅನಿಷ್ಟ ಇದ್ದರೂ ಅದು ಕೇವಲ ತಾತ್ಕಾಲಿಕ ಮತ್ತು ಸಾಪೇಕ್ಷ ; ಅದು ನಿತ್ಯ ವಾದುದಲ್ಲ.

ಅನಿಷ್ಟ ತಾತ್ಕಾಲಿಕವಾದುದಾದರೂ ಏಕಿದೆ ? ರವೀಂದ್ರರ ಅಭಿಪ್ರಾಯದಂತೆ ಮಾನವ ಆತ್ಮ ತನ್ನ ನೈಜ ಸ್ವರೂಪವನ್ನು (ತಾನು ನಿರಂತರವೂ ದೇವನೊಡನೆ ಸಂಬಂಧವನ್ನು ಹೊಂದಿದ್ದೇನೆಂಬ ಅರಿವು) ತಿಳಿಯಲು ಸಾಧ್ಯವಾಗುವುದು ಅನಿಷ್ಟವೆಂಬುದು ಇರುವುದರಿಂದ ವ್ಯಕ್ತಿ ತಪ್ಪು ದಾರಿಯನ್ನು ತುಳಿಯುತ್ತಿದ್ದರೆ ಅವರ ಪರಿಣಾಮವನ್ನು ಎದುರಿಸಬೇಕಾಗುವುದೆಂದು ಅನಿಷ್ಟ ಎಚ್ಚರಿಸುತ್ತದೆ. ಅನಿಷ್ಟ ಹೀಗೆ ವ್ಯಕ್ತಿ ಒಳ್ಳೆಯದನ್ನು ಮಾಡಬೇಕೆಂದು ಸೂಚಿಸುತ್ತದೆ. ಅಂತಹ ನೋವನ್ನು ರವೀಂದ್ರರು ಸ್ವಾಗತಿಸುತ್ತಾರೆ. ಎಂಥ ನೋವನ್ನೂ ಮೆಟ್ಟಿ ನಿಲ್ಲುತ್ತೇನೆ ಎಂಬ ಎದೆಗಾರಿಕೆಯನ್ನು ವ್ಯಕ್ತಿ ಬೆಳೆಸಿಕೊಳ್ಳುವುದರ ಮೂಲಕ ಅನಿಷ್ಟವನ್ನು ಎದುರಿಸಬಹುದೆಂದು ಅವರು ಹೇಳುತ್ತಾರೆ. ಸರ್ವಾನುಭೂತಿ, ನಿಸ್ವಾರ್ಥಪರತೆ, ಎಲ್ಲರೊಡನೆ ಒಂದಾಗುವುದು — ಇವು ಅನಿಷ್ಟದ ಕಾವನ್ನು ತಗ್ಗಿಸಿ ದೇವರ ಇಚ್ಛೆಯನ್ನು ಪೂರೈಸುವುದರ ಮೂಲಕ ಮಾನವ ಶಾಂತಿ, ಸಮಾಧಾನಗಳನ್ನು ಹೊಂದುವಂತೆ ಮಾಡುತ್ತವೆ ಎಂದು ರವೀಂದ್ರರು ನಂಬುತ್ತಾರೆ. ಇದನ್ನು ಅರ್ಥಮಾಡಿಕೊಳ್ಳುವ ವ್ಯವಧಾನವಿಲ್ಲದೆ ಅನಿಷ್ಟವೇಕಿದೆ ಎಂಬ ಪ್ರಶ್ನೆಯನ್ನು ಪ್ರಶ್ನೆಗೋಸ್ಕರವಾಗಿಯೇ ಕೇಳುವವರಿಗೆ ಅವರು ನೀಡುವ ಉತ್ತರ ತುಂಬ ಮಾರ್ಮಿಕವಾಗಿದೆ. : "To question why there is evil in existence is the same as why there is creation at all."[7]

ರವೀಂದ್ರರ ಪ್ರಕಾರ ಮಾನವನ ಗುರಿ ಹೆಚ್ಚು ಹೆಚ್ಚಿನ ಪರಿಪೂರ್ಣತೆಯನ್ನು ಹೊಂದುವುದು, ದೈವತ್ವಕ್ಕೆ ಅತಿ ಸಮೀಪವಾಗುವುದು. ಅವನೆಂದೂ ಪರಿಪೂರ್ಣನಾಗಲಾರ ; ಏಕೆಂದರೆ ಅನಿಷ್ಟದಿಂದ ಅವನು ಪೂರ್ಣವಾಗಿ ಬಿಡಿಸಿಕೊಳ್ಳಲಾರ. ಒಂದು ಪಕ್ಷ ಅವನು ಪರಿಪೂರ್ಣನಾಗಬಲ್ಲನಾದರೆ, ಆಗ ದೇವರಿಗೂ ಅವನಿಗೂ ಯಾವ ಭೇದವೂ ಇಲ್ಲವಾಗಿ ಸೃಷ್ಟಕ್ರಿಯೆಯೇ ನಿಂತು ಹೋಗುತ್ತವೆ. ಆದುದರಿಂದ ಅನಿಷ್ಟ ಮತ್ತು ಸೃಷ್ಟಿ ಒಟ್ಟೊಟ್ಟಿಗೇ ಹೋಗುತ್ತವೆಂದು ರವೀಂದ್ರರು ಅಭಿಪ್ರಾಯ ಪಡುತ್ತಾರೆ. ಹೀಗೆ ಅನಿಷ್ಟ ಸೃಷ್ಟಕ್ರಿಯೆಯ ಅವಿಭಾಜ್ಯ ಅಂಗವಾಗಿದೆ. ಅದರ ಅಸ್ತಿತ್ವ, ದೇವರ ಅಸ್ತಿತ್ವಕ್ಕಾಗಲೀ ಅವನ ಕಾರುಣ್ಯಕ್ಕಾಗಲೀ, ಅವನ ಸರ್ವಶಕ್ತಿತ್ವಕ್ಕಾಗಲೀ ಅಪಚಾರವನ್ನು ಎಸಗುವುದಿಲ್ಲವೆಂದು ರವೀಂದ್ರರು ಪ್ರತಿಪಾದಿಸುತ್ತಾರೆ.

ಅಡಿ ಟಿಪ್ಪಣಿಗಳು

1 ಸಮಕಾಲೀನ ಪಾಶ್ಚಾತ್ಯ ತತ್ವಜ್ಞನಾದ ಎ.ಎನ್. ವೈಟ್‌ಹೆಡ್ ದೇವರನ್ನು ಕುರಿತು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ : "God is the great companion, the fellow sufferer who understands". *Process and Reality*, ಪು 497.

1[a] ನೋಡಿ ರವೀಂದ್ರರ '*Personality*' (Macmillan & Co Ltd., London 1961) ಪು. 56

2 ನೋಡಿ, ಅದೇ, ಪು. 58

3 ನೋಡಿ ರವೀಂದ್ರರ '*Creative Unity*' ಪು. 35

4 ನೋಡಿ '*Personality*' ಪು. 69

5 ನೋಡಿ ರವೀಂದ್ರರ 'ಗೀತಾಂಜಲಿ', ಸಂಖ್ಯೆ 67 ಮತ್ತು 95

6 ನೋಡಿ. R. S. Srivastava, *Contemporary Indian Philosophy* (Munshiram Manoharlal, 1965), Chapter on Tagore.

7 ನೋಡಿ ರವೀಂದ್ರರ 'ಸಾಧನಾ' ಪು. 47

ರವೀಂದ್ರರು ದೇವರನ್ನು ಕುರಿತು ಹೇಳಿದ ಮಾತಿನಲ್ಲೆಲ್ಲ ಈ ಸಂಬಂಧ ಹೇಗೆ ಬರಬರುತ್ತ ಹತ್ತಿರವಾಯಿತೆಂಬುದು ಕಂಡುಬಂದಿದೆ. ಕವಿವರರು ತಮ್ಮ ಬಾಳಿನಲ್ಲಿ ಭಗವಂತನ ಲೀಲೆಯನ್ನು ಕಂಡರು ; ಅವರ ಸುಖದಿಂದ ನಲಿದಂತೆ ದುಃಖದಿಂದ ಬೆಂದು, ನಕ್ಕು ಕರೆದರೂ ತಾಯಿ, ಹೊಡೆದು ದೂಡಿದರೂ ತಾಯಿ, ಎಂದು ಮಗು ತಾಯ ಬಳಿ ಹೋಗುವಂತೆ ಬಾಳ ಎಲ್ಲ ಅವಸ್ಥೆಗಳಲ್ಲಿಯೂ ದೇವರನ್ನು ಸಮೀಪಿಸಿದರು. ಜೀವ ಕರೆದೀತೆ ಎಂದು ದೈವ ಕಾದಿರುತ್ತದೆಯೆಂದು ಬಲ್ಲವರು ಹೇಳುವರು. ಠಾಕೂರರ ಜೀವ ಹತ್ತಾರು ಸಲ ಕರೆಯಿತು, ಅದರ ದೈವ ಅದಕ್ಕೆ ಓ ಎಂದು ಉತ್ತರ ಕೊಟ್ಟಿತು. ದೇವರು ಎಂಬ ತತ್ತ್ವ ಸೃಷ್ಟಿಗೆಲ್ಲ ಒಂದೇ ಆದರೂ ಅದು ಒಂದೊಂದು ಚೇತನಕ್ಕೂ ಅದರ ಸ್ಥಿತಿಗನುಸಾರವಾಗಿ ಬೇರೆಯ ದೈವವಾಗುತ್ತದೆ. ಠಾಕೂರರ ದೈವ ಅವರ ಒಡನಾಡಿ ; ತನ್ನ ಸಿಂಹಾಸನವನ್ನಿಳಿದು ಇವರ ಜೊತೆಗೆ ಆಡ ಬಂದಿರುವ ರಾಜ; ಇವರನ್ನು ಹಾಡ ಹೇಳಿ ಸಂತೋಷಿಸುವ ಪ್ರಭು; ಇವರ ತಪ್ಪುಗಳನ್ನು ಮನ್ನಿಸುವ ಇವರ, ಗುಣಕ್ಕೆ ಮೆಚ್ಚುವ, ಸದಾ ಇವರನ್ನು ಹಿಡಿದು ಮೇಲಕ್ಕೆ ಎತ್ತುವ, ಸುಹೃತ್ತತ್ತ್ವ. ದೇವರನ್ನು ಈ ರೀತಿ ಭಾವಿಸುವುದು ಸನಾತನ ಧರ್ಮದಲ್ಲಿ ಬಹು ಪೂರ್ವದ ಸಂಪ್ರದಾಯ.

(ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ರವೀಂದ್ರನಾಥ ಠಾಕೂರರು,
ಎಂಬುದರಿಂದ ಉದ್ಧೃತ ಪು. ೨೭೬–೨೭೭)

ಆರ್. ಕೆ. ಸೋಮಶೇಖರ್

ಸಾಮಾಜಿಕ ಅರಣ್ಯ ಸಂವರ್ಧನೆ

ಮಾನವನು ಭೂಮಿಯ ಮೇಲೆ ಹುಟ್ಟಿದಂದಿನಿಂದಲೂ ಅರಣ್ಯಗಳು ತೀವ್ರಗತಿಯಲ್ಲಿ ವಿನಾಶದ ಪಥದಲ್ಲಿ ಸಾಗುತ್ತಲೇ ಇವೆ; ಆದರೆ ಅರಣ್ಯ ಸಂಪತ್ತನ್ನು ಶೋಷಿಸುವಲ್ಲಿ ಅವನ ತವಕ–ಕಾತರತೆ ಅರಣ್ಯವಿಲ್ಲದ ಪ್ರಪಂಚದ ಭವಿಷ್ಯದ ಬಗ್ಗೆ ಯಾರಾದರೂ ಚಿಂತಿಸುವಂತೆ ಮಾಡಿದೆ ಮತ್ತು ಅರಣ್ಯಶೋಷಣೆಯನ್ನು ನಿಯಂತ್ರಿಸಲು ಸರ್ಕಾರಗಳು ನಿಯಮ–ನಿರ್ಬಂಧಗಳನ್ನು ವಿಧಿಸಬೇಕಾಗಿದೆ. ಅರಣ್ಯಸಂಪತ್ತಿನ ನಾಶದಿಂದಾಗಿ ವನ್ಯ ಜೀವಿಗಳಿಗೆ ಸಂಬಂಧಿಸಿದಂತೆ ತೀವ್ರ ಪರಿಣಾಮಗಳುಂಟಾಗುವ ಕಾರಣ ಪ್ರಪಂಚದ ಎಲ್ಲೆಡೆಗಳಲ್ಲಿ ವನ್ಯಜೀವಿಗಳು ಹಾಗೂ ಅರಣ್ಯ–ಇವೆರಡನ್ನೂ ಸಂರಕ್ಷಿಸಲು ತೀವ್ರ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಅರಣ್ಯಸಂಪತ್ತಿನ ನಾಶದ ಪ್ರಭಾವವನ್ನು ಮಾನವ ಬಹು ಹಿಂದೆಯೇ ಮನಗಂಡನಾದರೂ ಇಂದಿಗೂ ಈ ಉಪದ್ರವ ಅನಿರ್ಬಂಧಿತವಾಗಿ ಮುಂದುವರಿಯುತ್ತಲೇ ಇದೆ. ಹೆಚ್ಚಿನ ಸಂದರ್ಭಗಳಲ್ಲಿ ಅರಣ್ಯಗಳನ್ನು ಉದ್ದೇಶಪೂರ್ವಕವಾಗಿ ಕಡಿಯಲಾಗುತ್ತಿದೆ; ಇಲ್ಲವೇ ನಗರಗಳು, ಪಟ್ಟಣಗಳು ಹಾಗೂ ಅಣೆಕಟ್ಟುಗಳ ನಿರ್ಮಾಣಕ್ಕಾಗಿಯೂ ಬೃಹತ್ಪ್ರಮಾಣದಲ್ಲಿ ಅರಣ್ಯವನ್ನು ನಾಶಮಾಡಲಾಗುತ್ತಿದೆ.

ಅರಣ್ಯಇಲಾಖೆಯ ಇತ್ತೀಚಿನ ವರದಿಯ ಪ್ರಕಾರ 1950ರಿಂದೀಚೆಗೆ ಪ್ರಪಂಚದಲ್ಲಿನ ಅರ್ಧಭಾಗ ಮರಗಳ ನಾಶವಾಗಿದೆ. ಈ ಅಂಕಿ ಅಂಶಗಳು ಎಲ್ಲ ಪರಿಸರವಿಜ್ಞಾನಿಗಳಿಗೆ ಆತಂಕ ಉಂಟುಮಾಡಿದೆ. ಇದಕ್ಕೆ ಕಾರಣವೆಂದರೆ ಅರಣ್ಯಗಳು ಹವಾಮಾನವನ್ನು ನಿಯಂತ್ರಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ ಹಾಗೂ ಅವು ಆಂಶಿಕವಾಗಿಯೋ ಸಮಗ್ರವಾಗಿಯೋ ಮಳೆ ಬೀಳುವುದಕ್ಕೆ ಕಾರಣವಾಗಿವೆ. ಪ್ರಸಕ್ತ ದರದಲ್ಲಿಯೇ ಕಾಡುಗಳನ್ನು ಕಡಿಯುತ್ತ ಹೋದಲ್ಲಿ ಈಗಿರುವ ಅರಣ್ಯದ ಶೇ. 40 ಭಾಗ ಕ್ರಿ.ಶ. 2000ದ ವೇಳೆಗೆ ನೆಲಸಮವಾಗಿ ಹೋಗುವುದು ಎಂದೂ ಈ ವರದಿ ಸೂಚಿಸಿವೆ. ಪ್ರಪಂಚದ ಮರದ ತಲಾ ಬೆಳವಣಿಗೆ ದರವು ಹಾಲಿ ಇರುವುದಕ್ಕಿಂತ ಶೇ. 47 ಭಾಗ ಕಡಮೆಯಾಗುವುದು. ಈ ಕೆಲವು ಕುತೂಹಲಕಾರಿ ಅಂಕಿ ಅಂಶಗಳನ್ನು ನೋಡಬಹುದು : 1982ರಲ್ಲಿ ಅರಣ್ಯವೃಕ್ಷಗಳನ್ನು ಪ್ರತಿ ನಿಮಿಷಕ್ಕೆ 14 ಹೆಕ್ಟೇರುಗಳಂತೆ ಕಡಿಯಲಾಯಿತು. ಪ್ರಪಂಚದ

ಸುಮಾರು 12 ರಿಂದ 15 ಬಿಲಿಯನ್ ಹೆಕ್ಟೇರುಗಳ ಅರಣ್ಯಗಳ ಪೈಕಿ ಸುಮಾರು 3.5 ಬಿಲಿಯನ್ನು ಹೆಕ್ಟೇರುಗಳನ್ನು ಕಡಿಯಲಾಗಿದೆ. ಸುಮಾರು 75 ಬಿಲಿಯನ್ ಟನ್ ಗಳಷ್ಟು ಉತ್ಪಾದನಾತ್ಮಕ ಮೇಲ್ಮಣ್ಣು ಕಳೆದ 75 ವರ್ಷಗಳಲ್ಲಿ ಸವೆತದಿಂದಾಗಿ ನಾಶ ವಾಗಿವೆ. ಇನ್ನೂ ಕುತೂಹಲಕಾರಿಯಾದ ಅಂಶವೆಂದರೆ, ಅರಣ್ಯನಾಶ ಮುಂದುವರಿದಲ್ಲಿ ಕ್ರಿ.ಶ. 2000ದ ವೇಳೆಗೆ ಭೂಮಿಯ ಹಸಿರಿನ ಪ್ರಮಾಣ ಕಡಿಮೆಯಾಗಿ ಇದರಿಂದ ವಾತಾವರಣದಲ್ಲಿನ Co_2 ನ ಪರಿಮಾಣ ಶೇ. 30 ಭಾಗ ಹೆಚ್ಚುತ್ತದೆ ಮತ್ತು ಈಗಿ ರುವ ಪ್ರಾಣಿಗಳು ಹಾಗೂ ಸಸ್ಯಪ್ರಭೇದಗಳಲ್ಲಿ ಸುಮಾರು ಶೇ. 15 ರಿಂದ 20 ಭಾಗ ನಾಶವಾಗಿ ಬಿಡುತ್ತವೆ.

ಭೂಮಿಯ ಕನಿಷ್ಠ ⅓ ಭಾಗವಾದರೂ ಅರಣ್ಯಗಳಿಂದ ಆವೃತವಾಗಿರಬೇಕು ಎಂದು ಭಾರತ ಸರ್ಕಾರ ಅರಣ್ಯನಿಯಮಗಳನ್ನು ಮಾಡಿದೆ. ಆದರೆ ಸದ್ಯದಲ್ಲಿ ಒಟ್ಟು ಪ್ರದೇಶದ ಶೇ. 10.7 ಭಾಗ ಮಾತ್ರ ಅರಣ್ಯಗಳಿಂದ ಆವೃತವಾಗಿದೆ.

ದುರದೃಷ್ಟವಶಾತ್ ಕರ್ನಾಟಕದ ಒಟ್ಟು ವಿಸ್ತೀರ್ಣದ ಶೇ. 15.6 ಭಾಗ ಮಾತ್ರ ಅರಣ್ಯಗಳಿಂದ ಆವೃತವಾಗಿದೆ. ಕೆಲವೇ ವರ್ಷಗಳ ಹಿಂದೆ ಈ ಪರಿಮಾಣವು ಶೇ. 21 ಭಾಗವಾಗಿತ್ತು. ಇದ್ದಕ್ಕಿದ್ದಂತೆ ಈ ಪರಿಮಾಣ ಕಡಿಮೆಯಾಗುವುದಕ್ಕೆ ಕಾರಣಗಳು – ಮಾನವನಿಂದ ಅರಣ್ಯಗಳ ಶೋಷಣೆ ಹಾಗೂ ಅಣೆಕಟ್ಟು ಇತ್ಯಾದಿಗಳ ನಿರ್ಮಾಣ–ಇವೇ ಆಗಿವೆ.

ಅರಣ್ಯಸಂಪತ್ತನ್ನು ಪುನರ್ ರೂಪಿಸಲು ಕೋಟಿ ಗಟ್ಟಲೆ ಹಣವನ್ನು ವೆಚ್ಚ ಮಾಡಲಾಗುತ್ತಿದೆಯಾದರೂ ಈವರೆಗೆ ಪ್ರಾರಂಭವಾಗಿರುವ ಯೋಜನೆಗಳ ಪೈಕಿ ಹೆಚ್ಚಿನವು ಪರಿಣಾಮಕಾರಿ ಫಲಿತಾಂಶಗಳನ್ನು ನೀಡಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟು ಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಅರಣ್ಯಸಂಪತ್ತನ್ನು ಸುಧಾರಿಸಲು ಈಗ ತೀವ್ರ ಗಮನಹರಿಸುತ್ತಿವೆ. ಹಾಗಾಗಿ "ಉತ್ತಮ ಪರಿಸರವೇ ಉತ್ತಮ ಅರ್ಥ ವ್ಯವಸ್ಥೆ" ಎಂಬ ಬಗ್ಗೆ ತೀವ್ರವಾಗಿ ಗಮನಹರಿಸಲಾಗುತ್ತಿದೆ. ನಾವು ಸ್ವಾತಂತ್ರ್ಯ ಚಳವಳಿಯ ಸಂಬಂಧದಲ್ಲಿ ಕೈಗೊಂಡಂತೆ, ಇಂದು ಅರಣ್ಯಸಂಪತ್ತನ್ನು ಸಂರಕ್ಷಿಸುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಮಾನವ ತನ್ನ ಅಸ್ತಿತ್ವಕ್ಕೆ ತಾನೇ ಮಾರಕವಾಗಿ ಪರಿಣಮಿಸುತ್ತಾನೆ ; ಅದರ ನಾಶದೊಡನೆ ಅವನ ಸರ್ವನಾಶವೂ ಆದೀತು.

ಈ ಅಂಶಗಳ ಬೆಳಕಿನಲ್ಲಿ 'ಸಾಮಾಜಿಕ ಅರಣ್ಯಸಂವರ್ಧನೆ'ಯ ಬಗ್ಗೆ ತೀವ್ರ ಗಮನ ಹರಿಸಲಾಗಿದೆ. ಭಾರತದಲ್ಲಿ ಶೇ. 60 ಕ್ಕಿಂತ ಹೆಚ್ಚು ಭಾಗ ಜನರು ಇಂಧನ ಕ್ಕಾಗಿ ಮರವನ್ನೇ ಅವಲಂಬಿಸಿರುವರು ; ಹಾಗಾಗಿ ಹೆಚ್ಚುತ್ತಿರುವ ಜನಸಂಖ್ಯೆಯ ಅಗತ್ಯ ಗಳನ್ನು ಪೂರೈಸಲು ಸಾಕಷ್ಟು ಸೌದೆ (ಉರುವಲು) ಸರಬರಾಜು ಮಾಡಬೇಕು. ಕೃಷಿಗೆ ಸಂಬಂಧಿಸಿದ ರಾಷ್ಟ್ರೀಯ ಆಯೋಗ ದೇಶದ ಉರುವಲಿನ ಅಗತ್ಯವನ್ನು ಈ ಮುಂದಿ ನಂತೆ ಅಂದಾಜು ಮಾಡಿದೆ :

	ಮಿಲಿಯನ್ ಘನಮೀಟರುಗಳು
ಕ್ರಿ.ಶ. 1970	150
" 1975	165
" 1980	184
" 1985	202
" 2000	225

ಈ ಅಗತ್ಯಗಳೊಡನೆ ಹೋಲಿಸಿದಲ್ಲಿ 1975 ರಲ್ಲಿ ಅರಣ್ಯದಿಂದ ಬಂದ ಸೌದೆಯ ಉತ್ಪಾದನೆಯು ಕೇವಲ 20 ಮಿಲಿಯನ್ ಘ. ಮೀ.ಗಳಾಗಿತ್ತು. ಈ ಕೊರತೆಯನ್ನು ಖಾಸಗಿ ಅರಣ್ಯಗಳು, ಕೃಷಿ ಭೂಮಿಯಲ್ಲಿನ ಮರಗಳು, ಸರ್ಕಾರಿ ಜಮೀನುಗಳು, ಅರಣ್ಯಗಳಿಂದ ಕೊಳ್ಳೆ ಇತ್ಯಾದಿ ದಾಖಲಾಗದ ಮೂಲಗಳಿಂದ ಹಾಗೂ ಬೆರಣಿಯ ಬಳಕೆಯಿಂದ ನೀಡಲಾಗುತ್ತಿದೆ.

ಸಣ್ಣ ಪಟ್ಟಣಗಳು ಮತ್ತು ನಗರಗಳ ಸುತ್ತ ಸಣ್ಣ ಅರಣ್ಯಗಳನ್ನು ಬೆಳೆಸಿ, ಆ ನಿರ್ದಿಷ್ಟ ಕ್ಷೇತ್ರದ ಜನತೆಯ ಅಗತ್ಯತೆಗಳನ್ನು ಪೂರೈಸುವುದನ್ನು ಪ್ರಧಾನ ಧ್ಯೇಯ ವಾಗಿರುವ ಕಾರ್ಯಯೋಜನೆ ಸಾಮಾಜಿಕ ಅರಣ್ಯಸಂವರ್ಧನೆಯ ಯೋಜನೆಯಾಗಿದೆ. ಜೊತೆಗೆ, ವಿನಾಶದ ಸುಳಿಗೆ ಸಿಕ್ಕಿರುವ ಕೆಲವು ಮುಖ್ಯ ಸಸ್ಯಗಳನ್ನು ಉಳಿಸಿಕೊಳ್ಳುವುದು ಸಹ ಈ ಕಾರ್ಯಯೋಜನೆಯಿಂದ ಸಾಧ್ಯ. ಇಂಥ ಒಂದು ಪ್ರಯತ್ನವನ್ನು ಕರ್ನಾಟಕ ದಲ್ಲಿ ಮಾಡಲಾಗುತ್ತಿದೆ. ವಾಸ್ತವವಾಗಿ ಕರ್ನಾಟಕದಲ್ಲಿ 1975 ರಲ್ಲಿ ಉರುವಲಿನ ಅಗತ್ಯ 3 ಮಿಲಿಯನ್ ಟನ್‌ಗಳಾಗಿದ್ದು ಉರುವಲಿನ ಒಟ್ಟು ಉತ್ಪಾದನೆಯು 1.2 ಮಿಲಿಯನ್ ಟನ್‌ಗಳಾಗಿತ್ತು ; ಈ ಅಗತ್ಯವು ಕ್ರಿ.ಶ. 2000ದ ವೇಳೆಗೆ 6 ಮಿಲಿ ಯನ್ ಟನ್‌ಗಳಾಗಬಹುದು ಎಂದೂ ಅಂದಾಜುಮಾಡಲಾಗಿದೆ. ಆದ್ದರಿಂದ ಬೃಹತ್ಪ್ರ ಮಾಣದಲ್ಲಿ ಉರುವಲಿನ ಪ್ಲಾಂಟೇಷನುಗಳನ್ನು ಬೆಳೆಸಲು ಈಗಿನಿಂದಲೇ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ.

ಕರ್ನಾಟಕದ ಅರಣ್ಯ ಇಲಾಖೆಯು ಲಭ್ಯವಿರುವ ನಿಧಿಗನುಗುಣವಾಗಿ ಪ್ರತಿವರ್ಷ 25,000 ಹೆಕ್ಟೇರುಗಳಲ್ಲಿ ಉರುವಲು ಪ್ಲಾಂಟೇಷನುಗಳನ್ನು ಬೆಳೆಸುತ್ತಿದೆ. ಮುಂಬರುವ ವರ್ಷಗಳಲ್ಲಿ ಉರುವಲಿನ ಬಿಕ್ಕಟ್ಟನ್ನು ನಾವು ಎದುರಿಸಬೇಕಾದಲ್ಲಿ ಈ ಪರಿಮಾಣವನ್ನು ಪ್ರತಿ ವರ್ಷ ಒಂದು ಲಕ್ಷ ಹೆಕ್ಟೇರುಗಳಿಗೆ ಹೆಚ್ಚಿಸಬೇಕಾಗುವುದು. ಪ್ರಸಕ್ತ ಪರಿಸ್ಥಿತಿ ಯನ್ನು ಸುಧಾರಿಸಲು ಈ ಮುಂದಿನ ಸಲಹೆಗಳನ್ನು ಮಂಡಿಸಲಾಗಿದೆ :

1 ಮುಂದಿನ ಎಲ್ಲ ಅರಣ್ಯವೃದ್ಧಿಯ ಕಾರ್ಯಯೋಜನೆಗಳಲ್ಲಿ ಜನತೆಗೆ ಶಿಕ್ಷಣ ನೀಡಿ ಅವರು ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳುವುದು ಅತ್ಯಗತ್ಯ.

2 ಇನ್ನು ಮುಂದೆ ಅರಣ್ಯಸಂವರ್ಧನೆಯು ಕೇವಲ ಅರಣ್ಯ ಇಲಾಖೆಯ ಹೊಣೆ ಗಾರಿಕೆವಾಗಿಯೇ ಉಳಿಯದೆ ಜನತಾ ಚಳವಳಿಯಾಗಬೇಕು. ಭವಿಷ್ಯದಲ್ಲಿ ಅರಣ್ಯ ಸಂವರ್ಧನೆಯು ಕೃಷಿ ಕ್ಷೇತ್ರವನ್ನು ತೀವ್ರ ಸ್ವರೂಪದಲ್ಲಿ ಪ್ರವೇಶಿಸಬೇಕು ಮತ್ತು

ಜನತೆಯ ಮನದಲ್ಲಿ ಅರಣ್ಯಸಂವರ್ಧನೆ ಕೃಷಿಯ ಸಾಕುತಾಯಿಯೇ ವಿನಾ ಅದರ ದಾಸಿಯಲ್ಲ ಎಂಬ ಅಂಶ ಬೇರೂರುವಂತೆ ಮಾಡಬೇಕು. ಕೃಷಿಭೂಮಿಯಲ್ಲಿ ಹಾಗೂ ಹಳ್ಳಿಗಾಡಿನ ಪ್ರದೇಶಗಳಲ್ಲಿ ಅರಣ್ಯಸಂವರ್ಧನೆಯ ತೀವ್ರ ಕಾರ್ಯಕ್ರಮದಿಂದ ಈ ಗುರಿ ಸಾಧನೆಯಾಗುವುದು.

ಬೃಹತ್ಪ್ರಮಾಣದಲ್ಲಿ ಈ ಗಿಡ ನೆಡುವ ಕಾರ್ಯಯೋಜನೆಯು ಯಶಸ್ವಿಯಾಗುವಂತೆ ಮಾಡಲು ಸರ್ಕಾರ ಜನತೆಗೆ ಈ ಮುಂದಿನ ಪ್ರೋತ್ಸಾಹಕ ಅಂಶಗಳನ್ನು ನೀಡಿದೆ :

1 ಕರ್ನಾಟಕದಲ್ಲಿ ಗಿಡಗಳನ್ನು ನೆಡಲು ಸುಮಾರು 75 ಲಕ್ಷ ಹೆಕ್ಟೇರುಗಳ ಗೋಮಾಳ ಮತ್ತಿತರ ಬಗೆಯ ಪ್ರದೇಶ ಲಭ್ಯವಿದೆ ಎಂದು ಅಂದಾಜು ಮಾಡಲಾಗಿದೆ. ಹಂತಹಂತವಾಗಿ ಗಿಡಮರಗಳನ್ನು ನೆಡಲು ಈ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತೆ ಸರ್ಕಾರ ಆದೇಶ ನೀಡಿದೆ. ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಗ್ರಾಮಪಂಚಾಯತಿಯ ಸಹಕಾರ ಪಡೆಯಲಾಗುತ್ತಿದೆ. ಈ ಮರಗಳಿಂದ ಲಭ್ಯವಾಗುವ ಉತ್ಪನ್ನದ ಶೇ. 50 ಭಾಗವನ್ನೇ ಮುಂದೆ ಗ್ರಾಮಪಂಚಾಯತಿಗಳಿಗೆ ನೀಡಲಾಗುವುದು:

2 ಗಿಡಮರಗಳನ್ನು ನೆಡಲು ಜಲಾಶಯಗಳು ಮತ್ತು ಕೆರೆಕಟ್ಟೆಗಳ ಮುಂಗರೆ ಪ್ರದೇಶದಲ್ಲಿ ಸುಮಾರು 40,000 ಹೆಕ್ಟೇರುಗಳಷ್ಟು ಲಭ್ಯವಿದೆ ಎಂದು ಅಂದಾಜು ಮಾಡಲಾಗಿದೆ. ಈ ಪ್ರಸಂಗದಲ್ಲಿಯೂ ಗ್ರಾಮಪಂಚಾಯಿತಿಗಳು ಒದಗಿಸುವ ಸೌಕರ್ಯ–ಸೌಲಭ್ಯಗಳನ್ನು ಉಪಯೋಗಿಸಿಕೊಂಡು, ಹುಟ್ಟುವಳಿಯ ಶೇ. 50 ಭಾಗವನ್ನು ನೀಡಲಾಗುತ್ತದೆ.

3 ಕರ್ನಾಟಕದಲ್ಲಿ ಸುಮಾರು 32,000 ಕಿ.ಮೀ.ಗಳ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಮತ್ತು ಜಿಲ್ಲಾ ರಸ್ತೆಗಳಿವೆ. ಈ ರಸ್ತೆಗಳ ಇಕ್ಕೆಲಗಳಲ್ಲಿ ಲೋಕೋಪಯೋಗಿ ಇಲಾಖೆಯ ನೆರವಿನಿಂದ ಮರಗಳನ್ನು ನೆಡಲಾಗುವುದು. ಅಂಥ ಗಿಡಮರಗಳ ಸಂರಕ್ಷಣೆಯು ಸಮಸ್ಯೆಯಾಗಿರುವುದರಿಂದ ಪ್ರಯತ್ನಾರ್ಥವಾಗಿ ನೆರೆಯ ಜಮೀನುಗಳವರಿಗೆ ಪಟ್ಟಿಗಳನ್ನು ನೀಡಲು ಯೋಜಿಸಲಾಗಿದೆ.

4 ಗಿಡಮರಗಳನ್ನು ನೆಡಲು ಸುಮಾರು 1600 ಕಿ.ಮೀ. ಕಾಲುವೆ ದಡಗಳು ಲಭ್ಯವಿವೆ. ಇಲ್ಲಿಯೂ ಸಹ ನೆರೆಯ ಭೂಹಿಡುವಳಿದಾರರಿಗೆ ಪಟ್ಟಿ ನೀಡಲು ಯೋಜಿಸಲಾಗಿದೆ.

5 ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಉದ್ಯಮಗಳಿಗೆ ಸೇರಿದ ವಿಶಾಲಕ್ಷೇತ್ರಗಳು ಇವೆ. ಅಂಥ ಬಯಲುಗಳಲ್ಲಿ ಅರಣ್ಯ ಇಲಾಖೆ ಗಿಡ ಮರಗಳನ್ನು ನೆಡುವುದು. ಬರುವ ಹುಟ್ಟುವಳಿಯನ್ನು 50 : 50 ರೀತಿ ಹಂಚಲಾಗುವುದು.

6 'ಒಂದು ಮಗುವಿಗೆ ಒಂದು ಮರ' ಎಂಬ ಪ್ರಧಾನಿಯವರ ನಿರ್ದೇಶನದಂತೆ 'ಶಾಲಾ ಅರಣ್ಯಗಳನ್ನು' ಬೆಳೆಸಲು ರಾಜ್ಯದಲ್ಲಿನ ಪ್ರತಿಯೊಂದು ಶಾಲೆಗೆ 2 ಹೆಕ್ಟೇರು ಜಮೀನನ್ನು ನೀಡಲು ಯೋಜಿಸಲಾಗಿದೆ.

7 ಕರ್ನಾಟಕದಲ್ಲಿ ಸುಮಾರು 20 ಲಕ್ಷ ಹೆಕ್ಟೇರುಗಳಷ್ಟು ಸೀಮಾಂತ ಕೃಷಿ ಭೂಮಿ ಲಭ್ಯವಿದೆ ಎಂದು ಅಂದಾಜು ಮಾಡಲಾಗಿದ್ದು, ಇದನ್ನು ಸುಲಭವಾಗಿ ಉರುವಲು ಹಾಗೂ ಮೇವು ನೀಡುವ ವೃಕ್ಷ ಸಂವರ್ಧನೆಗೆ ಉಪಯೋಗಿಸಿಕೊಳ್ಳಬಹುದು.

ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲ ಪ್ಲಾಂಟೇಷನುಗಳನ್ನು ಬೆಳೆಸುವ ಸಲುವಾಗಿ ಆಸಕ್ತರಾದ ಸಾರ್ವಜನಿಕರಿಗೆ ಹಾಗೂ ಇತರ ಖಾಸಗಿ ಸಾರ್ವಜನಿಕ ವಲಯದ ಉದ್ಯಮಗಳಿಗೆ ಉಚಿತವಾಗಿ ಸಸಿಗಳನ್ನು ಮಿಲಿಯ ಗಟ್ಟಲೆ ನೀಡಲೂ ಯೋಜಿಸಲಾಗಿದೆ. 1981–82ರಲ್ಲಿಯೇ ಸುಮಾರು 50 ಮಿಲಿಯನ್ ಸಸಿಗಳನ್ನು ಉಚಿತವಾಗಿ ನೀಡಲಾಯಿತು ಮತ್ತು ಮುಂಬರುವ ಸಾಲಿನಲ್ಲಿ ಸುಮಾರು 100 ಮಿಲಿಯನ್ನು ಸಸಿಗಳನ್ನು ನೀಡಲು ಯೋಜಿಸಲಾಗಿದೆ. ಸರ್ಕಾರ ನೀಡುತ್ತಿರುವ ಪ್ರೋತ್ಸಾಹಕರ ಅಂಶಗಳ ಪೈಕಿ ಇದೂ ಒಂದಾಗಿದೆ. ಸಸಿಗಳನ್ನು ಬೆಳೆಸುವ ಸಲುವಾಗಿ ಹಲವಾರು ಸ್ಥಳಗಳಲ್ಲಿ ಸಸ್ಯ ನರ್ಸರಿಗಳನ್ನು ಬೆಳೆಸಲಾಗಿದೆ. ಈವರೆಗೆ ಸಾರ್ವಜನಿಕರು, ಹಾಗೂ ರೈತರಿಂದ ಈ ಕಾರ್ಯಕ್ರಮಕ್ಕೆ ಪ್ರತಿಕ್ರಿಯೆ ಪ್ರೋತ್ಸಾಹದಾಯಕವಾಗಿದೆ. ಜೊತೆಗೆ ಸ್ವಯಂಸೇವಾ ಸಂಘಗಳು ಹಾಗೂ ವಿವಿಧ ಸಂಸ್ಥೆಗಳ ಮಕ್ಕಳು ಮತ್ತು ಯುವಕರು ತಾವೇ ಈ ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನಮ್ಮ ರಾಜ್ಯ ಕಳೆದುಕೊಂಡ ತನ್ನ ಸ್ಥಾನ ಕೀರ್ತಿಗಳನ್ನು ಮುಂಬರುವ ವರ್ಷಗಳಲ್ಲಿ ಮರಳಿ ಪಡೆಯುವುದೆಂದು ಆಶಿಸೋಣ.

ಅರಣ್ಯ ಒಂದು ಪುಟ್ಟ ಪ್ರಪಂಚ. ಅಲ್ಲಿ ನಿರಂತರ ಹುಟ್ಟು, ಬೆಳವಣಿಗೆ, ಸಾವು ಎಂಬ ಆವರ್ತನ ನಡೆದೇ ಇದೆ. ಸಾಮಾನ್ಯವಾಗಿ ಉಷ್ಣವಲಯದಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತಲೇ ಬೀಜೋತ್ಪತ್ತಿ ತೊಡಗುವುದು. ಸಮಶೀತೋಷ್ಣ ವಲಯದಲ್ಲಿ ಮಾಗಿ ಕಾಲದಲ್ಲಿ ಬೀಜೋತ್ಪತ್ತಿ ಆಗುವುದು. ಫಲಗಳೂ ಬೀಜಗಳೂ ತಾಯಿ ಮರದಿಂದ ದೂರ ಪ್ರದೇಶಗಳಿಗೆ ತೆರಳಿ ಅಲ್ಲಿ ನೆಲೆಸಲು ತಕ್ಕ ಉಪಾಯಗಳನ್ನು ನಿಸರ್ಗವೇ ನಿರ್ಮಿಸಿದೆ. ಹಣ್ಣು ಬಿರಿದು ಬೀಜ ದೂರಕ್ಕೆ ಸಿಡಿಯಬಹುದು. ಗಾಳಿ, ನೀರು, ಹಕ್ಕಿ, ಮೃಗ, ಮನುಷ್ಯ ಎಂಬ ಕಾರಣಗಳ ಮೂಲಕ ಬೀಜಗಳು ಬಲು ದೂರ ಒಯ್ಯಲ್ಪಡುವುವು. ಇಂಥ ಬೀಜಗಳು ಅನುಕೂಲ ಸನ್ನಿವೇಶದಲ್ಲಿ ಮೊಳೆತು ಗಿಡಗಳಾಗುತ್ತವೆ. ಹೊಸ ಪರಿಸರಕ್ಕೆ ಹೊಂದಿಕೊಂಡು ಮರು ಹುಟ್ಟಿನಿಂದ ಒಂದು ನೂತನ ವನಸ್ಪತಿ ಕೇಂದ್ರವನ್ನೇ ಸ್ಥಾಪಿಸುತ್ತವೆ. ಇಂಥ ಬೆಳವಣಿಗೆಯಲ್ಲಿ ಬೆಳಕು, ಗೊಬ್ಬರ, ಗಾಳಿ, ನೀರು ಇವುಗಳಿಗಾಗಿ ನಿರಂತರ ಸ್ಪರ್ಧೆ ಇದ್ದೇ ಇದೆ.

(ಕನ್ನಡ ವಿಶ್ವಕೋಶ, ಸಂಪುಟ ಒಂದು, ಪು. ೪೪೭)

ಜಿ. ಎನ್. ಕುಂದರಗಿ

ಭಾರತೀಯ ತತ್ತ್ವಶಾಸ್ತ್ರದ ತಿರುಳು

ತತ್ತ್ವಶಾಸ್ತ್ರವು ಜೀವನದ ಸಮಗ್ರತೆಯ ಸಾರಾಂಶ ದೃಷ್ಟಿ (Synoptic vision) ಎಂದು ಗ್ರೀಕ್ ತತ್ತ್ವಜ್ಞಾನಿಯಾದ ಪ್ಲೇಟೋ ಉಸುರಿದ. ಅದು ಜೀವನದ ಆದರ್ಶ ಲೋಕವನ್ನು ವಿವೇಚಿಸುವದು, ನೈತಿಕ, ಸಾಮಾಜಿಕ ಮತ್ತು ರಾಜಕೀಯ ಮುಖಗಳನ್ನು ಕುರಿತು ಚರ್ಚಿಸುವದೆಂದು ಆತ ಅಭಿಪ್ರಾಯಪಟ್ಟ.

ತತ್ತ್ವಶಾಸ್ತ್ರವು 'ಜ್ಞಾನದ ಸಮೀಕ್ಷಣೆ' (Criticism of Cognition) ಎಂದು ಇಮ್ಯಾನ್ಯುಯಲ್ ಕಾಂಟ್ ಸಾರಿದರು. ಕಾಂಟರಿಗಿಂತ ಪೂರ್ವದಲ್ಲಿದ್ದ ಡೇಕಾರ್ಟ, ಸ್ಪಿನೋಝಾ, ಲೈಬ್‌ನಿಝ್ ಈ ತತ್ತ್ವಜ್ಞರು ಜ್ಞಾನ ಸಂಗ್ರಹದಲ್ಲಿ ಉತ್ಪತ್ತಿಯಲ್ಲಿ ಬುದ್ಧಿ ಅಥವಾ ವಿಚಾರವನ್ನು (Reason) ಎತ್ತಿ ಹಿಡಿದಿದ್ದರು. ಅನಂತರ ಬಂದ ಲಾಕ್, ಬರ್ಕ್ಲಿ ಹ್ಯೂಮ್ ಎಂಬವರು ಜ್ಞಾನದಲ್ಲಿ ಉತ್ಪತ್ತಿಯಲ್ಲಿ ಇಂದ್ರಿಯ ಅನುಭವವನ್ನೇ ಒತ್ತಿ ಹೇಳಿದ್ದರು. ಕಾಂಟರು ಎರಡೂ ವಿಚಾರಗಳನ್ನು ಸಮನ್ವಯಿಸಿ ಜ್ಞಾನಸಾಧನೆಯಲ್ಲಿ ವಿಚಾರಗಣ್ಯ ಅನುಭವವನ್ನು (synthetic affairs') ತೆರೆದು ತೋರಿಸಿದರು.

ಭಾರತೀಯರಿಗೆ ತತ್ತ್ವಜ್ಞಾನವು ಬರಿಯ ಬೌದ್ಧಿಕ ವಿಶ್ಲೇಷಣೆಯಾಗಲಿಲ್ಲ. ಅದು ಜೀವನದ ಸಾರ ಸರ್ವಸ್ವವಾಯಿತು. ಅವರು ಅನುಭವವನ್ನು ಇಂದ್ರಿಯಗಳಿಗೆ ಮಾತ್ರ ಸೀಮಿತಗೊಳಿಸಲಿಲ್ಲ. ಅತೀಂದ್ರಿಯ ಅನುಭೂತಿಯನ್ನು intuitive realization) ಒತ್ತಿ ಹೇಳಿದರು. ಬ್ರಹ್ಮ ಮತ್ತು ಆತ್ಮ ತತ್ತ್ವಗಳನ್ನು ಪ್ರತಿಪಾದಿಸಿದರು.

೧

ಭಾರತೀಯ ತತ್ತ್ವಶಾಸ್ತ್ರವೆಂದರೇನು ?

'ಭಾರತೀಯ ತತ್ತ್ವಶಾಸ್ತ್ರ' ಈ ಪದ ಸಮುಚ್ಚಯ ಷಡ್-ದರ್ಶನಗಳು, ಚಾರ್ವಾಕ, ಜೈನ, ಬೌದ್ಧ ತತ್ತ್ವಗಳು, ಹಿನ್ನೆಲೆಯಲ್ಲಿ ವೇದಗಳು, ಉಪನಿಷತ್ತುಗಳು, ಭಗವದ್ಗೀತೆ, ಮನುವಿನ ಧರ್ಮಶಾಸ್ತ್ರ – ಇತ್ಯಾದಿಗಳನ್ನು ಒಳಗೊಂಡಿದೆ. ಇತ್ತೀಚೆಗೆ

ಅರವಿಂದ ಮಹರ್ಷಿಗಳ ವಿಚಾರಧಾರೆ, ಸರ್ವಪಲ್ಲಿ ರಾಧಾಕೃಷ್ಣನ್‌ರವರ ಆತ್ಮ ತತ್ತ್ವ, ಪ್ರೊ. ಕೆ. ಸಿ. ಭಟ್ಟಾಚಾರ್ಯರ ತತ್ತ್ವ, ರಮಣ ಮಹರ್ಷಿಗಳ ದರ್ಶನ, ಡಾ. ಅನಿಬೆ ಸೆಂಟ್, ಜೆ. ಕೃಷ್ಣಮೂರ್ತಿಯವರ ತತ್ತ್ವಪ್ರಣಾಲಿ—ಇವುಗಳನ್ನೂ ಒಳಗೊಂಡಿವೆ.

ಭಾರತೀಯ ತತ್ತ್ವಶಾಸ್ತ್ರದ ಈ ವಿವಿಧ ಧಾರೆಗಳನ್ನು 'ದರ್ಶನ'ಗಳೆಂದು ಕರೆಯು ವದು ವಾಡಿಕೆ. ದೃಕ್, ದೃಶ್, ಪಶ್ಯತಿ—ಪ್ರತ್ಯಕ್ಷವಾಗಿ ಕಾಣುವುದು, ನೋಡುವುದು, ಅನುಭವಿಸುವುದು, ನಮ್ಮ ಪ್ರಾಚೀನ ಋಷಿಪುಂಗವರು, 'ದೃಷ್ಟಾರ'ರು. ಅವರು ತಮ್ಮ ಆರ್ಷಪ್ರಜ್ಞೆಯಲ್ಲಿ ಕಂಡು ಅನುಭವಿಸಿದ ತತ್ತ್ವ ಮಾಲಿಕೆಗಳೇ ಇವು ಆಗಿರುವುದ ರಿಂದ 'ದರ್ಶನ'ಗಳೆಂದು ಕರೆಯುವರು. ಅವು ಬರಿಯ ವಿಚಾರಮಾಲಿಕೆಗಳಲ್ಲ, ಅನು ಭೂತಿಯ ಸ್ಫುರಣೆಗಳು (intuitive flashes). ಅಂತಃಸ್ಫೂರ್ತಿಯಲ್ಲಿ ಉಗಮ ಗೊಂಡ ಈ ದರ್ಶನಗಳನ್ನು ನಂತರ ವಿಚಾರದ ಚೌಕಟ್ಟಿನಲ್ಲಿ ಹೆಣೆದು ನಮ್ಮ ಮುಂದಿ ಟ್ಟಾಗ ತತ್ತ್ವಶಾಸ್ತ್ರದ ಬೇರೆ ಬೇರೆ ಸಿದ್ಧಾಂತಗಳೆಂದು ಎಣಿಸಿಕೊಂಡವು.

ಸಾಂಪ್ರದಾಯಿಕವಾಗಿ ಈ ಸಿದ್ಧಾಂತಗಳನ್ನು 'ಆಸ್ತಿಕ ದರ್ಶನ' ಹಾಗೂ 'ನಾಸ್ತಿಕ ದರ್ಶನ' ಗಳೆಂದು ವಿಂಗಡಿಸಬಹುದು. 'ಆಸ್ತಿಕ ದರ್ಶನ'ದ ಗುಂಪಿನಲ್ಲಿ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ ಮತ್ತು ವೇದಾಂತಗಳು ಬರುತ್ತವೆ. ಇವು ವೇದಗಳ ಅಧಿಕಾರವನ್ನು ಒಪ್ಪಿಕೊಂಡು ಅವುಗಳಿಗೆ ಮನ್ನಣೆಯನ್ನು ಕೊಡುತ್ತವೆ. ಮೀಮಾಂಸಾ ಮತ್ತು ವೇದಾಂತ ವೇದಗಳ ಆಧಾರದ ಮೇಲೆಯೇ ನಿಂತಿವೆ. ಕರ್ಮಕಾಂಡವನ್ನು ಮೀಮಾಂಸಕರು ವೇದಗಳ ಆಧಾರದ ಮೇಲೆಯೇ ಹೇಳಿ ದರೆ, ಬ್ರಹ್ಮ ತತ್ತ್ವವನ್ನು ಅಥವಾ ಭಗವಂತನನ್ನು ಕುರಿತು ವೇದಾಂತಿಗಳು ಮಾತ ನಾಡುವಾಗ ವೇದ ಪ್ರಾಮಾಣ್ಯವೇ ಅವರಿಗೆ ಮಹತ್ತ್ವದ್ದು. ನ್ಯಾಯ, ವೈಶೇಷಿಕ, ಸಾಂಖ್ಯ ಮತ್ತು ಯೋಗ ಸ್ವತಂತ್ರ ವಿಚಾರದ ಮೇಲೆ ತಮ್ಮ ಸಿದ್ಧಾಂತಗಳನ್ನು ಹೆಣೆ ದರೂ ವೇದಗಳಿಗೆ ಅವು ವಿರೋಧವಾಗಿಲ್ಲ. ವೇದಾರ್ಥವನ್ನು ವಿಚಾರದ ಮೂಲಕ ತಿಳಿ ಯಲು ಅವು ಪ್ರಯತ್ನಿಸುತ್ತವೆ.

ಚಾರ್ವಾಕರು, ಜೈನರು, ಬೌದ್ಧರು, ವೇದ ಪ್ರಮಾಣವನ್ನು ಒಪ್ಪಿಕೊಳ್ಳುವು ದಿಲ್ಲ. ವೇದಗಳಿಗೆ ಅವು ವಿರೋಧವಾಗಿರುವುದರಿಂದ ಅವುಗಳಿಗೆ 'ನಾಸ್ತಿಕ ದರ್ಶನ'ವೆಂಬ ಹೆಸರು. ಆದರೂ ವರ್ಧಮಾನ ಮಹಾವೀರ ಹಾಗೂ ಬುದ್ಧನ ಅನುಭವಗಳ ಮೇಲೆ ಜೈನ ಮತ್ತು ಬೌದ್ಧ ದರ್ಶನಗಳು ನಿಂತಿವೆ.

ಬೇರೆ ಬೇರೆ ವಿಚಾರ ಪಥಗಳು : ಸಮಗ್ರತೆ ಮತ್ತು ವೈವಿಧ್ಯತೆ

ಭಾರತೀಯ ತತ್ವಶಾಸ್ತ್ರದಲ್ಲಿ ಬರುವ ಸಮಗ್ರತೆ ಮತ್ತು ವೈವಿಧ್ಯತೆ ಯಾರನ್ನಾ ದರೂ ಬೆರಗುಗೊಳಿಸುವಂತಹವು—ಇಲ್ಲಿ ವಾಸ್ತವವಾದ, ಆದರ್ಶವಾದ, ಬಹುತತ್ತ್ವ ವಾದ, ಏಕತತ್ತ್ವವಾದ, ದ್ವಿ-ತತ್ತ್ವವಾದ, ಎಲ್ಲ ಇವೆ. ಚಾರ್ವಾಕರು ಭೌತತತ್ವವಾದಿ

ಗಳು. ಭೂಮಿ, ನೀರು, ಬೆಂಕಿ ಮತ್ತು ಗಾಳಿ—ಈ ಮೂಲತತ್ತ್ವಗಳಿಂದಲೇ ಜಗತ್ತನ್ನು ಮತ್ತು ವ್ಯಕ್ತಿಯನ್ನು ವಿವರಿಸುವರು. ಅವರಿಗೆ ಪ್ರತ್ಯಕ್ಷವೊಂದೇ ಪ್ರಮಾಣ.

ನೈಯಾಯಿಕರು ವಾಸ್ತವವಾದಿಗಳು. ಬಹುತತ್ತ್ವವಾದಿಗಳು, ಸಪ್ತಪದಾರ್ಥಗಳನ್ನು—ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ—ಅಂತಿಮ ಸತ್ಯಗಳೆಂದು ಒಪ್ಪಿಕೊಳ್ಳುವರು. ಅವರಿಗೆ ಪ್ರತ್ಯಕ್ಷ, ಅನುಮಾನ, ಶಬ್ದ ಮತ್ತು ಉಪಮಾನ ಪ್ರಮಾಣಗಳು.

ಸಾಂಖ್ಯರು ದ್ವಿ-ತತ್ತ್ವವಾದಿಗಳು. ಅವರ ದೃಷ್ಟಿಯಲ್ಲಿ ಪ್ರಕೃತಿ ಮತ್ತು ಪುರುಷರು ಅಂತಿಮ ತತ್ತ್ವಗಳು. ಅವರು ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ-ಈ ತ್ರಿವಿಧ ಪ್ರಮಾಣಗಳನ್ನು ಒಪ್ಪಿಕೊಳ್ಳುವರು

ಆಚಾರ್ಯ ಶಂಕರರ ದೃಷ್ಟಿಯಲ್ಲಿ ಬ್ರಹ್ಮವೊಂದೇ ಅಂತಿಮಸತ್ಯ. ಅದು ಸತ್, ಚಿತ್, ಆನಂದ. ಅದು ನಿರ್ಗುಣ, ನಿರಾಕಾರ. ರಾಮಾನುಜ ಹಾಗೂ ಮಧ್ವರ ಬ್ರಹ್ಮ ಸಗುಣ ಬ್ರಹ್ಮ. ಆತ ವಿಷ್ಣು, ನಾರಾಯಣ. 'ಅನಂತ ಕಲ್ಯಾಣ ಗುಣ ಪರಿಪೂರ್ಣ'.

ಜೈನರು ಜಡ, ಅಜಡ — ಜೀವ, ಅಜೀವ ತತ್ತ್ವಗಳನ್ನು ಹೇಳಿದರು. ಬೌದ್ಧರು ಜೀವನದ ಅನಿತ್ಯತೆಯನ್ನು ಸಾರಿದರು. ಎಲ್ಲವೂ ಕ್ಷಣಿಕ, ಎಲ್ಲವೂ ದುಃಖ-ಎಂದು ಅವರು ಹೇಳಿದರು. ಶೂನ್ಯ ತತ್ತ್ವವನ್ನು ಪ್ರತಿಪಾದಿಸಿದರು. ಅನಾತ್ಮವಾದವನ್ನು ಎತ್ತಿಹಿಡಿದರು.

ಹೀಗೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ವೈವಿಧ್ಯತೆಯನ್ನೂ, ಒಂದು ಬಗೆಯ ಸಮಗ್ರತೆಯನ್ನೂ ನಾವು ಕಾಣುತ್ತೇವೆ. ಪ್ರೊ. ಎಂ. ಹಿರಿಯಣ್ಣನವರು ಈ ಮಾತನ್ನು ಹೇಳುತ್ತ : ಭಾರತದಲ್ಲಿ ವಿವಿಧ ತತ್ತ್ವ ಸಿದ್ಧಾಂತಗಳು ಎರಡು ಸಲ ಬಂದು ಹೋಗಿವೆ ! ಒಮ್ಮೆ ಷಡ್-ದರ್ಶನಗಳಲ್ಲಿ ; ಮತ್ತೊಮ್ಮೆ ಬೌದ್ಧ ಸಿದ್ಧಾಂತದ ವಿವಿಧ ಶಾಖೆಗಳಲ್ಲಿ"[1] ಎಂದಿದ್ದಾರೆ.

ಮೋಕ್ಷ ಕಲ್ಪನೆ

ಚಾರ್ವಾಕರನ್ನು ಬಿಟ್ಟು ಎಲ್ಲ ದರ್ಶನಗಳೂ ಮೋಕ್ಷವನ್ನು ಒಪ್ಪಿಕೊಳ್ಳುತ್ತವೆ. ಮೋಕ್ಷವು ಪರಮಪುರುಷಾರ್ಥ.

ಮೋಕ್ಷದ ಉದ್ದೇಶ ದುಃಖ ನಿವಾರಣೆ. ಈ ದುಃಖ ಮೂರು ಬಗೆಯದು : ಆದಿಭೌತಿಕ, ಆಧ್ಯಾತ್ಮಿಕ ಮತ್ತು ಆದಿ ದೈವಿಕ. ಕಾಡು ಪ್ರಾಣಿಗಳಾದ ಹುಲಿ, ಸಿಂಹ, ಸರ್ಪ, ಸಮಾಜದಲ್ಲಿರುವ ಈ ಸ್ವರೂಪದ ಜನರಿಂದ ಬರುವ ದುಃಖ ಆದಿಭೌತಿಕ ದುಃಖ, ಮಾನಸಿಕ ಚಿಂತೆ, ಆಂತರಿಕ ದುಃಖವು ಆಧ್ಯಾತ್ಮಿಕ ದುಃಖ. ಭೂಕಂಪ, ಮಹಾಪೂರ ಇತ್ಯಾದಿ. ಮನುಷ್ಯನ ಅಂಕೆಯನ್ನು ಮೀರಿದ ದುಃಖ ಆದಿದೈವಿಕ ದುಃಖ. ಈಶ್ವರ ಕೃಷ್ಣ-ಅವರ 'ಸಾಂಖ್ಯಕಾರಿಕಾ'ದಲ್ಲಿ 'ದುಃಖತ್ರಯಾಭಿಘಾತಾತ್' ಎಂದು ಹೇಳಿ, ಸಾಂಖ್ಯದರ್ಶನದ ಉದ್ದೇಶ ಈ ಮೂರು ಬಗೆಯ ದುಃಖಗಳ ನಿವಾರಣೆಗಾಗಿ ಎಂದು ಹೇಳುತ್ತದೆ.

ಶುದ್ಧೋದನ ದೊರೆಯ ಮಗನಾದ ಸಿದ್ಧಾರ್ಥ ಸುಖದಿಂದಲೇ, ಅಷ್ಟ ಐಶ್ವರ್ಯಗಳಿಂದಲೇ ಬೆಳೆದ. ಆದರೆ ಮುದುಕನನ್ನು, ರೋಗಿಯನ್ನು, ಹೆಣವನ್ನು, ಸನ್ಯಾಸಿಯನ್ನು ಕಂಡಾಗ ಜೀವನದ ದುಃಖದ ಮೂಲವನ್ನೂ, ದುಃಖ ನಿವಾರಣೆಯ ಉಪಾಯವನ್ನೂ ಕಾಣಲು ಬಯಸಿ ರಾಜ್ಯವನ್ನು, ಹೆಂಡತಿಯನ್ನು, ಮಗುವನ್ನು ತೊರೆದ. ಅಷ್ಟಪಥವನ್ನೂ ನಾಲ್ಕು ಸತ್ಯಗಳನ್ನೂ ಬೋಧಿಸಿದ. ಗೌತಮ ಬುದ್ಧನೆನಿಸಿದ.

ಭಾರತೀಯ ತತ್ವಜ್ಞಾನಿಗಳ ಅಭಿಪ್ರಾಯದಲ್ಲಿ ಮೋಕ್ಷವು ಕೇವಲ ವೈಚಾರಿಕ ಕಲ್ಪನೆಯಲ್ಲ. ಅದು ಸಾಧನೆಯಿಂದ ಗಳಿಸುವ ಒಂದು ಸ್ಥಿತಿ. ಈ ಸ್ಥಿತಿಯಲ್ಲಿ ಸಂಶಯಗಳೆಲ್ಲ ನಿವಾರಣೆಯಾಗುತ್ತವೆ, ದುಃಖಗಳೆಲ್ಲ ದೂರವಾಗುತ್ತವೆ. ಬೌದ್ಧರು ನ್ಯಾಯ ವೈಶೇಷಿಕರು, ಸಾಂಖ್ಯರು ಮತ್ತು ಮೀಮಾಂಸಕರು ಮೋಕ್ಷದ ಗುರಿ ದುಃಖ ನಿವಾರಣೆ ನಿವಾರಣೆಯೆಂದು ಉಸುರಿದರೆ, ಜೈನರು ಮತ್ತು ವೇದಾಂತಿಗಳು ಮೋಕ್ಷದ ಗುರಿ ದುಃಖ ನಿವಾರಣೆಯಷ್ಟೇ ಆಗಿರದೆ, ಸುಖ ಮತ್ತು ಆನಂದಗಳ ಅನುಭವ-ಎಂದೂ ಹೇಳುವರು.

ಬೌದ್ಧರ ದೃಷ್ಟಿಯಲ್ಲಿ ಆಶೆ ಎಲ್ಲ ದುಃಖದ ಮೂಲ. ಆಶೆಯಿಂದ ಪ್ರಾರಂಭವಾದ ಭಾವಚಕ್ರ ಅಥವಾ ಕರ್ಮಚಕ್ರವನ್ನೇ ಅವರು ನಮ್ಮೆದುರು ಇಡುವರು. ಅಷ್ಟಪಥದ ಮಾರ್ಗದಿಂದ ನಿರ್ವಾಣ ಸಾಧ್ಯ.

ನ್ಯಾಯ-ವೈಶೇಷಿಕರ ದೃಷ್ಟಿಯಲ್ಲಿ ಆತ್ಮವು ಮೂಲರೂಪದಲ್ಲಿ ಯಾವ ಆಶೆಯನ್ನೂ ಹೊಂದಿಲ್ಲ. ಮೋಕ್ಷ ಅಥವಾ ಅಪವರ್ಗವನ್ನು ಹೊಂದುವುದೆಂದರೆ ಮೂಲ ಸ್ವರೂಪದ ಆತ್ಮನನ್ನು ಅರಿಯುವುದು. ಅದರ ಸ್ಥಿತಿ ಶಿಲೆಯಂತೆ.

ಪ್ರಕೃತಿ-ಪುರುಷರ ಭೇದವನ್ನು ತಿಳಿಯುವುದು, ವ್ಯಕ್ತಾವ್ಯಕ್ತ ಜ್ಞಾನವನ್ನು ಹೊಂದುವುದು ಸಾಂಖ್ಯ ಕೈವಲ್ಯದ ಹಾದಿ. ಪತಂಜಲಿಯ ಅಷ್ಟಾಂಗಯೋಗವು ಇದಕ್ಕೆ ಪೂರಕ.

ಮೀಮಾಂಸಕರು ಯಜ್ಞಯಾಗಾದಿಗಳನ್ನು ಒತ್ತಿ ಹೇಳಿದರು. ವೇದದಲ್ಲಿ ಉಕ್ತವಾದ ನಿತ್ಯ—ನೈಮಿತ್ತಿಕ ಕರ್ಮಗಳನ್ನು ಆಚರಿಸುತ್ತ, ಕಾಮ್ಯ, ಪ್ರತಿಷಿದ್ಧ ಕರ್ಮಗಳನ್ನು ವರ್ಜಿಸಿ ನಡೆದಾಗ ಸ್ವರ್ಗಸಿದ್ಧಿ ಸುಲಭವಾಗುತ್ತದೆ. ಅದೇ ಮೀಮಾಂಸಕರ ಮೋಕ್ಷ.

ಜೈನರ ಅಭಿಪ್ರಾಯದಲ್ಲಿ ಸಂಸಾರ ಬಂಧನಕ್ಕೆ ಮೂಲ ಕಾರಣ ಕರ್ಮ. ತ್ರಿರತ್ನಗಳಿಂದ (ಒಳ್ಳೆಯ ವಿಚಾರ. ಒಳ್ಳೆಯ ಮಾತು, ಒಳ್ಳೆಯ ನಡತೆ) ಕರ್ಮ ಬಂಧನ ಹರಿದು, ಮೋಕ್ಷ ಪ್ರಾಪ್ತಿ ಸಾಧ್ಯ.

ಶಂಕರಾಚಾರ್ಯರರ ಮತಕ್ಕೆ ಅನುಗುಣವಾಗಿ ಆತ್ಮ ಮತ್ತು ಬ್ರಹ್ಮ ಒಂದೇ. ಈ ತಾದಾತ್ಮ್ಯವನ್ನು ಅರಿಯುವುದೇ. ಹೊಂದುವುದೇ ಮೋಕ್ಷ. ರಾಮಾನುಜ ಹಾಗೂ ಮಧ್ವರ ಅಭಿಪ್ರಾಯದಲ್ಲಿ ಜೀವ ವಿಷ್ಣುವಿನ ಲೋಕವಾದ ವೈಕುಂಠವನ್ನು ಸೇರುವುದು ಮೋಕ್ಷ. ರಾಮಾನುಜರ ದೃಷ್ಟಿಯಲ್ಲಿ ಜೀವ ಪರಮಾತ್ಮನೊಡನೆ ವಿಶಿಷ್ಟ ರೀತಿಯಲ್ಲಿ ಮೋಕ್ಷದಲ್ಲಿ ಕೂಡಿಕೊಂಡರೆ, ಮಧ್ವರ ದೃಷ್ಟಿಯಲ್ಲಿ ಮೋಕ್ಷದಲ್ಲಿ ಕೂಡ ಜೀವ ಪರ

ಮಾತ್ರ ಭೇದ ಉಳಿಯುತ್ತದೆ. ಈರ್ವರೂ ಮೋಕ್ಷ ಪ್ರಾಪ್ತಿಗಾಗಿ ಭಕ್ತಿಯನ್ನೇ ಹೇಳಿದರು.

ರಾಮಾನುಜರು ಮತ್ತು ಮಧ್ವರು ವಿದೇಹ ಮುಕ್ತಿಯನ್ನು ಹೇಳಿದರು. ಅಂದರೆ ದೇಹ ಬಿದ್ದು ಹೋದ ಮೇಲೆಯೇ ಮೋಕ್ಷ ಸಾಧ್ಯ. ದೇಹವು ಮೋಕ್ಷ ಪ್ರಾಪ್ತಿಗೆ ಆತಂಕ. ಅದು ಜಡ.

ಸಾಂಖ್ಯರು ಹಾಗೂ ಶಂಕರಾಚಾರ್ಯರು ಜೀವನ್-ಮುಕ್ತಿಯನ್ನು ಸಾರಿದರು. ಈ ಜೀವನದಲ್ಲಿಯೇ ಇದ್ದು ಮುಕ್ತಿಯನ್ನು ಹೊಂದುವುದು ಸಾಧ್ಯ, ಭಗವದ್ಗೀತೆಯಲ್ಲಿ ಬರುವ ಸ್ಥಿತಪ್ರಜ್ಞನಂತೆ, ಕೆಸರಿನ ಮಧ್ಯದಲ್ಲಿಯ ತಾವರೆಯಂತೆ.

ವಿಚಾರ ಮತ್ತು ಅನುಭಾವ (Reason and Revelation)

ಅನುಭಾವಗಮ್ಯವಾದ ಭಾರತೀಯ ತತ್ತ್ವಶಾಸ್ತ್ರದಲ್ಲಿ ವಿಚಾರಕ್ಕೆ ಆಸ್ಪದವಿದೆಯೆ ? ಎಂದು ಯಾರಾದರೂ ಕೇಳಿದರೆ 'ಇದೆ'ಯೆಂದು ನಿಸ್ಸಂದಿಗ್ಧವಾಗಿ ಹೇಳಬಹುದು. ಪ್ರತಿಯೊಂದು ಸಿದ್ಧಾಂತವೂ ಪ್ರಮಾಣವನ್ನು ಕುರಿತು ಹೇಳಿದೆ. ಚಾರ್ವಾಕರು ಪ್ರತ್ಯಕ್ಷ ಪ್ರಮಾಣವನ್ನು ಮಾತ್ರ ಒಪ್ಪುತ್ತಾರೆ. ತರ್ಕ ಮತ್ತು ಜ್ಞಾನ ಮೀಮಾಂಸೆಗೆ ಕೊಡುಗೆಯನ್ನಿತ್ತ ನೈಯಾಯಿಕರು ಪ್ರತ್ಯಕ್ಷ, ಅನುಮಾನ, ಶಬ್ದ ಮತ್ತು ಉಪಮಾನ-ಹೀಗೆ ನಾಲ್ಕು ಪ್ರಮಾಣಗಳನ್ನು ನಮ್ಮೆದುರು ಇಡುತ್ತಾರೆ. 'ನ್ಯಾಯ ಸಿದ್ಧಾಂತವನ್ನು ಅಭ್ಯಸಿಸದ ಹೊರತು, ವೇದಾಂತದಲ್ಲಿ ಪ್ರವೇಶವಿಲ್ಲ'ವೆಂಬ ಮಾತು ತರ್ಕ, ವಿಚಾರದ ಮಹತ್ತ್ವವನ್ನು ತಿಳಿಸಿ ಹೇಳುತ್ತದೆ. ಮೀಮಾಂಸಕರು ಮತ್ತು ವೇದಾಂತಿಗಳು ಅನುಪಲಬ್ಧ ಮತ್ತು ಅರ್ಥಾಪತ್ತಿ ಎಂಬ ಇನ್ನೂ ಎರಡು ಪ್ರಮಾಣಗಳನ್ನು ಸ್ವೀಕರಿಸುತ್ತಾರೆ.

ಸಿ. ಡಿ. ಬ್ರಾಡ್ ಎಂಬ ಪಾಶ್ಚಾತ್ಯ ತತ್ತ್ವಜ್ಞರು ತಮ್ಮ Five Types of Ethical Theory ಎಂಬ ಪುಸ್ತಕದಲ್ಲಿ ಡೇವಿಡ್ ಹ್ಯೂಮ್‌ನನ್ನು ಕುರಿತು ಬರೆಯುವಾಗ ವಿಚಾರದ ಮೂರು ಮುಖಗಳನ್ನು ಕುರಿತು ಹೀಗೆ ಬರೆಯುತ್ತಾರೆ: (೧) ಇಂದ್ರಿಯ ಅನುಭವದ ಪೂರ್ವದ ಜ್ಞಾನ (೨) ಸಾಮಾನ್ಯ ತರ್ಕ (೩) ಅಂತ ಜ್ಞಾನದ ಅನುಮಾನೋಕ್ತಿ (inductive induction)

ಪಾಶ್ಚಾತ್ಯರು ಸಾಮಾನ್ಯವಾಗಿ ಇಂದ್ರಿಯಾತೀತ ಅನುಭವವನ್ನು ಒಪ್ಪುವುದಿಲ್ಲ. ಆದರೆ ಭಾರತೀಯರಿಗೆ ಅದೇ ಮೂಲಧನ. ಜಾಗ್ರತ ಅವಸ್ಥೆಯಲ್ಲಿ ದೇಹ, ಇಂದ್ರಿಯಗಳು, ಮನಸ್ಸು ಕೆಲಸ ಮಾಡುತ್ತಿರುತ್ತವೆ. ಸ್ವಪ್ನಾವಸ್ಥೆಯಲ್ಲಿ ದೇಹ, ಇಂದ್ರಿಯಗಳು ವಿರಮಿಸಿದ್ದು ಮನಸ್ಸು ಕೆಲಸ ಮಾಡುತ್ತಿರುತ್ತದೆ. ಸುಷುಪ್ತಿಯಲ್ಲಿ ಮಾನಸಿಕ ಕ್ರಿಯೆಯೂ ನಿಂತು ಆತ್ಮತತ್ತ್ವ ಸಾಕ್ಷಿಯಾಗಿ ನಿಂತು ಅನುಭವವನ್ನು ಹೊಂದುತ್ತಿರುತ್ತದೆ.

ವಿಚಾರಕ್ಕೆ ಇತಿ-ಮಿತಿಯುಂಟು. ಅದರ ಜೀವಾಳ ಭೇದ ಮತ್ತು ವಿಶ್ಲೇಷಣೆ. ವ್ಯಕ್ತಿ-ವಸ್ತು ಭೇದ : ಕಾರ್ಯ-ಕಾರಣ ಭೇದ ; ಕರ್ತೃ-ಕ್ರಿಯೆ ಭೇದ-ಇತ್ಯಾದಿ.

ಸತ್ಯ ಮತ್ತು ಅನುಭವ ಈ ಭೇದಗಳನ್ನು ಮೀರಿದ್ದು. ಶಾಕುಂತಳ ನಾಟಕಲ ಸ್ವಾರಸ್ಯ ಅನುಭವಿಸಬೇಕಾದರೆ, ನಮಗೆ ಬೇಕಾದದ್ದು ತಾದಾತ್ಮ್ಯಭಾವ, ವಿಶ್ಲೇಷಣೆಯಲ್ಲ.

ಒಂದು ವಿಚಾರ ಮತ್ತೊಂದು ವಿಚಾರದಿಂದ ಭಿನ್ನ. ವಿಚಾರಕ್ಕೆ ಅಂತವಿಲ್ಲ.

ವೇದ ಅರ್ಪಜ್ಞಾನ. ಅದರ ಸಂಪತ್ತು ಅನುಭೂತಿ, ಸಂಗೀತದಲ್ಲಿ ವಿಜ್ಞಾನದಲ್ಲಿ. ಆ ವಿಷಯಗಳ ತಜ್ಞರನ್ನು ನಾವು ಗೌರವಿಸಿ ಅವರ ಅಭಿಪ್ರಾಯಗಳನ್ನು ಸ್ವೀಕರಿಸುತ್ತೇವೆ. ಅದೇ ರೀತಿ ಆತ್ಮದ ಅನುಭವದಲ್ಲಿ ನಮ್ಮ ಋಷಿ–ಪುಂಗವರ ಅನುಭವಗಳನ್ನೊಳಗೊಂಡ ವೇದವನ್ನೇಕೆ ನಾವು ಗೌರವಿಸಬಾರದು ? ಶಾಸ್ತ್ರಾರ್ಥ ನಿರ್ಣಯದಲ್ಲಿ ವಿಚಾರ ನಮಗೆ ತುಂಬ ಪ್ರಯೋಜನಕಾರಿ. ಇಷ್ಟೇ ಅಲ್ಲ, ವಾಚಸ್ಪತಿ ಮಿಶ್ರರಂಥವರು. 'ಸಾವಿರ ವೇದಗಳು ಬೆಂಕಿ ತಣ್ಣಗೆ ಎಂದು ಹೇಳಿದರೆ, ಆ ವೇದಗಳನ್ನು ಆಚೆಗೆ ನೂಕಿ' ಎಂದು ನುಡಿದದ್ದು, ನಮ್ಮವರು ಪ್ರತ್ಯಕ್ಷ ಪ್ರಮಾಣಕ್ಕೆ ಇತ್ತ ಮಹತ್ತ್ವದ ಸಂಕೇತ.

ನೀತಿ

ನೀತಿವಂತನಿಗೆ, ಧರ್ಮವಂತನಿಗೆ ಮಾತ್ರ ಅನುಭಾವ ಗಮ್ಯವಾದ ಮೋಕ್ಷದಲ್ಲಿ ಪ್ರವೇಶ. ಭಾರತೀಯರು ಮತ್ತು ಅವರ ತತ್ತ್ವಜ್ಞಾನ 'ನೀತಿಯ ಆಚೆಗೆ' ಎಂಬ ಟೀಕೆ ಬರುವದು ಸಾಮಾನ್ಯ. ಆದರೆ ಆ ಮಾತಿನ ಅರ್ಥ ಸರಿಯಾಗಿ ಮಾಡಿಕೊಳ್ಳಬೇಕು. ಸ್ಥಿತಪ್ರಜ್ಞರು ಅಥವಾ ದೇವ ಸಾಕ್ಷಾತ್ಕಾರವನ್ನು ಹೊಂದಿದವರು ಸದ್ಗುಣವನ್ನು ಅರಿತುಕೊಳ್ಳಲು ಪ್ರಯತ್ನಿಸುವದಿಲ್ಲ, ಸದ್ಗುಣವು ಅವರಿಂದ ಓತಪ್ರೋತವಾಗಿ ಹರಿಯುತ್ತಿದೆ"2 ಎಂಬ ಎಂ. ಹಿರಿಯಣ್ಣನವರ ಮಾತು ತುಂಬ ಸಾರ್ಥಕವಾಗಿದೆ. ಸಾಮಾನ್ಯರಿಗೆ ಒಳಿತು–ಕೆಡಕಿನ ಹೋರಾಟ, ಆ ಸ್ಥಿತಿಯನ್ನು ಮೀರಿದ ಸ್ಥಿತಪ್ರಜ್ಞರಿಗೆ ಸದ್ಗುಣ ತಾನೆ ತಾನಾಗಿ ಹರಿಯುತ್ತಿದೆ, ಸಚ್ಚಾರಿತ್ರ್ಯ ಮೈವೆತ್ತಿನಿಂತಿದೆ.

ಉಪನಿಷತ್ತಿನಲ್ಲಿ ಆತ್ಮದ ಅಮರತ್ವವನ್ನು ಯಮಧರ್ಮರಾಯ ನಚಿಕೇತನಿಗೆ ಒಮ್ಮೆಲೆ ಬಿಟ್ಟುಕೊಡಲಿಲ್ಲ. ಆತನನ್ನು ನೈತಿಕವಾಗಿ ಬಹುವಿಧವಾಗಿ ಮೊದಲು ಪರೀಕ್ಷಿಸಿದ. ದಾನವರು, ಮಾನವರು ದೇವತೆಗಳು ಪ್ರಜಾಪತಿಯ ಬಳಿ ಉಪದೇಶಕ್ಕೆ ಹೋದಾಗ ಅವನು ಇತ್ತ ಉಪದೇಶ ಒಂದೇ ಶಬ್ದ 'ದಾ' ದಾನವರಿಗೆ 'ದಯಧ್ವಂ' 'ಕರುಣಾಮಯನಾಗು'; ಮಾನವರಿಗೆ 'ದೀಯತಾಂ' 'ಉದಾರಿಯಾಗು' ಮತ್ತು ದೇವತೆಗಳಿಗೆ 'ದಮ್ಯತಾಂ' 'ಇಂದ್ರಿಯ ನಿಗ್ರಹಿಯಾಗು' ಎಂಬ ಅರ್ಥವನ್ನು ಅದು ಕೊಟ್ಟಿತು.

ಮೋಕ್ಷವನ್ನು ಬಯಸುವವನು ವೇದಗಳನ್ನು ಶ್ರವಣ ಮಾಡಬೇಕು. ನಂತರ ತನಗೆ ಮನಗಾಣುವವರೆಗೆ ಮನನ ಮಾಡಬೇಕು. ಅನಂತರ ಏಕಧ್ಯಾನ ಚಿತ್ತದಿಂದ ಜೀವನದಲ್ಲಿ ಮನನ ಮಾಡಿದ್ದು ಮೈಗೂಡಬೇಕು. ನಮ್ಮ ಸ್ವಭಾವದ ಇನ್ನೊಂದು ಮುಖವಾಗಬೇಕು.

ಭಗವದ್ಗೀತೆಯಲ್ಲಿ ನಮ್ಮ ನಮ್ಮ ಸ್ವಭಾವಕ್ಕೆ ಅನುಗುಣವಾಗಿ ಕರ್ಮ, ಭಕ್ತಿ ಮತ್ತು ಜ್ಞಾನಗಳನ್ನು ಹೇಳಲಾಗಿದೆ. ಕರ್ಮವು ನಿಷ್ಕಾಮವಾಗಬೇಕಾದರೆ ನಿಸ್ವಾರ್ಥವಾಗಿರಬೇಕು, ಫಲಾಪೇಕ್ಷೆಯಿಂದ ಕೂಡಿದ್ದಾಗಿರಬಾರದು, ಸಮರ್ಪಣಭಾವವನ್ನೊಳ

ಗೊಂಡಿರಬೇಕು. ಶ್ರದ್ಧೆ, ಶರಣಾಗತಿ, ಸರ್ವಾರ್ಪಣ ಭಕ್ತಿ ಮಾರ್ಗದ ಊರುಗೋಲು ಗಳು. ರಾಮಾನುಜರು ಮತ್ತು ಮಧ್ವಾಚಾರ್ಯರು ಭಕ್ತಿಯನ್ನು ಹೇಳಿದರು. ಪರ ತತ್ತ್ವದ ಸ್ವರೂಪವನ್ನು ತಿಳಿದು ಅದನ್ನು ಅರಿಯುವುದು ಅಥವಾ ಅದರೊಂದನೆ ತಾದಾತ್ಮ್ಯ ಹೊಂದುವದು ಜ್ಞಾನಮಾರ್ಗದ ಗುರಿ. 'ನಾನು-ನೀನು' ಎಂಬ ಭೇದ, 'ನನ್ನದು' ಎನ್ನುವ ಅಹಂಕಾರ, ಮಾಯೆ ದೂರವಾಗಬೇಕು. ಜ್ಞಾನದಿಂದ ಮಾತ್ರ ಮೋಕ್ಷ ಎಂದು ಶಂಕರಾಚಾರ್ಯರು ಬೋಧಿಸಿದರು.

ತತ್ತ್ವಜ್ಞಾನದ ಒಳ್ಳೆಯ ವಿದ್ಯಾರ್ಥಿಯಾಗಲು ಶಂಕರರು ಸಾಧನ ಚತುಷ್ಟಯ ವನ್ನು ಹೇಳಿದರು : ನಿತ್ಯಾನಿತ್ಯ ವಸ್ತು, ವಿವೇಕ, ಶಮದಮಾದಿಸಾಧನ ಸಂಪತ್, ಇಹ-ಅಮೂತ್ರಾರ್ಥ ಭೋಗ ವಿರಾಗ ಮತ್ತು ಮುಮುಕ್ಷತ್ವ. ಎಂದರೆ ನಿತ್ಯ ಮತ್ತು ಅನಿತ್ಯ ವಸ್ತುಗಳನ್ನು ಗುರುತಿಸುವ ವಿವೇಕ, ಸಾರಾಸಾರ ವಿಚಾರ ; ಶಾಂತಿ ಮತ್ತು ಸಂಯಮ ಇತ್ಯಾದಿ ಸಾಧನ ಸಂಪತ್ತು, ಈ ಲೋಕದಲ್ಲಿ ಮತ್ತು ಪರಲೋಕದಲ್ಲಿಯ ವಸ್ತುಗಳ ಭೋಗದ ವಿಷಯವಾಗಿ ವಿರಾಗ, ಮತ್ತು ಮೋಕ್ಷವನ್ನು ಹೊಂದಬೇಕೆನ್ನುವ ಲವಲವಿಕೆ.

ಸಾಂಖ್ಯರು 'ವ್ಯಕ್ತಾವ್ಯಕ್ತಜ್ಞವಿಜ್ಞಾನ' ಹೇಳಿದರು. ಎಂದರೆ ಜಗತ್ತಿನ ಸಕಲ ಕ್ರಿಯೆಗಳು ಪ್ರಕೃತಿಯ ಮೂಲಕ, ಪುರುಷನು ಅಜ್ಞಾನದ ಮೂಲಕ ಆ ಎಲ್ಲ ಕ್ರಿಯೆ ಗಳೂ ತನ್ನವೇ ಎಂದು ತಿಳಿಯುತ್ತಾನೆ. ವ್ಯಕ್ತವಾದುದು ಯಾವದು, ಅವ್ಯಕ್ತವಾದುದು ಯಾವದು ಎಂಬ ಪರಿಜ್ಞಾನ ಸಾಧಕನಲ್ಲಿ ಬೇಕು.

ಕೈವಲ್ಯದ ಹಾದಿಯಲ್ಲಿ ಜೈನರು ತ್ರಿರತ್ನ (ಸರಿಯಾದ ನಂಬುಗೆ, ಸರಿಯಾದ ಜ್ಞಾನ ಮತ್ತು ಸರಿಯಾದ ಆಚಾರ) ಹೇಳಿದರೆ, ಗೌತಮ ಬುದ್ಧನು ಅಷ್ಟ ಪಥ (ಸರಿ ಯಾದ ನಂಬುಗೆ, ಸರಿಯಾದ ವಿಚಾರ, ಸರಿಯಾದ ಮಾತು, ಸರಿಯಾದ ಕೃತಿ, ಸರಿ ಯಾದ ಜೀವನೋಪಾಯ, ಋಜು ಪ್ರಯತ್ನ, ಋಜು ನೆನಪು ಮತ್ತು ಋಜು ಧ್ಯಾನ) ವನ್ನು ಒತ್ತಿ ಹೇಳಿದ.

ಭಾರತೀಯ ತತ್ತ್ವಶಾಸ್ತ್ರದಲ್ಲಿ ಗುರುವಿನ ಮಹತ್ತ್ವವನ್ನು ವಿಶೇಷವಾಗಿ ಹೇಳ ಲಾಗಿದೆ. 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂಬ ಮಾತು ಪರಿಪಾಠವಾಗಿದೆ. ಆದರೆ ಗುರು ಶಿಷ್ಯನನ್ನು ಪರೀಕ್ಷಿಸುವಂತೆ, ಶಿಷ್ಯನೂ ಗುರು ವನ್ನು ಪರೀಕ್ಷಿಸಬೇಕು, ನರೇಂದ್ರನು ರಾಮಕೃಷ್ಣ ಪರಮಹಂಸರನ್ನು ಹೊನ್ನಿನ ವಿಷಯ ದಲ್ಲಿರುವ ಮೋಹನನ್ನು ಕುರಿತು ಪರೀಕ್ಷಿಸಿದಂತೆ.

'ಕರ್ಮ ತತ್ತ್ವ'ದಲ್ಲಿ ಭಾರತೀಯರಿಗಿರುವ ನಂಬುಗೆ ದೈವವಾದ (fatalism) ವಲ್ಲ. 'ನಾನು ಮಾಡಿದ ಕರ್ಮಕ್ಕೆ ನಾನೇ ಹೊಣೆ' 'ನನ್ನ ಜೀವನವನ್ನು ನಾನೇ ರೂಪಿಸಬಲ್ಲೆ' ಎಂಬ ಅರ್ಥವನ್ನು ಕೊಡುವಂತಹದು. ಪೂರ್ವಾರ್ಜಿತ ಕರ್ಮದ ಪರಿ ಣಾಮವನ್ನು ಸಂಯಮದಿಂದ ತಡೆಯಲು ಸಾಧ್ಯವಾದರೆ, ಸ್ವಪ್ರಯತ್ನದಿಂದ ನನ್ನ

ಮುಂದಿನ ಜೀವನವನ್ನು ರೂಪಿಸಲು ಸಾಧ್ಯ, ನಾನು ಸ್ವತಂತ್ರ-ಎಂಬ ಮಾತುಗಳೂ ಕರ್ಮತತ್ತ್ವದಲ್ಲಿ ಸೂಚಿತವಾಗುತ್ತವೆ.

ಪರಿಪೂರ್ಣತೆಯು ಜೀವನದ ಗುರಿ. ಬುದ್ಧಿಗೂ-ಆಶೆ-ಕಾಮನೆಗಳಿಗೂ ಹೋರಾಟ ಸತತವಾಗಿ ನಡೆಯುತ್ತದೆ. ಈ ಹೋರಾಟ ನಿಂತು ಮನುಷ್ಯ ಸಿದ್ಧಿಯನ್ನು ತಲುಪಬೇಕಾದರೆ, ಒಂದೇ ಜನ್ಮ ಸಾಕಾಗಲಿಕ್ಕಿಲ್ಲ. ಅನೇಕ ಜನ್ಮಗಳೂ ಬೇಕಾಗಬಹುದು. ಈ ದೃಷ್ಟಿಯಿಂದ ಭಾರತೀಯರು ಪುನರ್ಜನ್ಮವನ್ನು ನಂಬುತ್ತಾರೆ.

ಹಿಂದಿನ ಕಾಲದಲ್ಲಿ ನಮ್ಮ ಸಮಾಜ ರಚನೆ ತುಂಬ ಸರಳವಾಗಿತ್ತು; ವ್ಯಕ್ತಿಯ ಜೀವನ ನೂರು ವರುಷವೆಂದು ಭಾವಿಸಿ ಮೊದಲಿನ ಇಪ್ಪತ್ತೈದು ವರ್ಷ ಬ್ರಹ್ಮಚರ್ಯ, ನಂತರದ ಇಪ್ಪತ್ತೈದು ಗ್ರಹಸ್ಥಾಶ್ರಮ; ಅನಂತರದ ಇಪ್ಪತ್ತೈದು ವಾನಪ್ರಸ್ಥ ಮತ್ತು ಕೊನೆಯ ಇಪ್ಪತ್ತೈದು ಸಂನ್ಯಾಸ-ವೆಂದು ಹೇಳಿದರು. ಇವು ಆಶ್ರಮ ಧರ್ಮಗಳು. ವರ್ಣ ಧರ್ಮಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹುಟ್ಟಿನ ಮೇಲೆ ಅವಲಂಬಿತವಾಗಿರದೆ, ವ್ಯಕ್ತಿಯ ಅಭಿರುಚಿ ಮತ್ತು ಸಾಮರ್ಥ್ಯದ ಮೇಲೆ ನಿಂತಿವೆ.

ಧರ್ಮ, ಅರ್ಥ, ಕಾಮ, ಮೋಕ್ಷಗಳು ಪುರುಷಾರ್ಥಗಳು. ಅರ್ಥ ಮತ್ತು ಕಾಮಗಳು ಧರ್ಮಕ್ಕೆ ಅನುಗುಣವಾಗಿರಬೇಕು. ಈಗಾಗಲೇ ಸೂಚಿಸಿದಂತೆ ಮೋಕ್ಷವು ಪರಮ ಪುರುಷಾರ್ಥ.

ಒಟ್ಟಿನಲ್ಲಿ ಭಾರತೀಯರಿಗೆ ತತ್ತ್ವಜ್ಞಾನವು ಬರಿಯ ಜೀವನ ದೃಷ್ಟಿಯಲ್ಲ, ಅದು ಜೀವನ ಮಾರ್ಗ. ಅಥವಾ ಅದು ಜೀವನದ ಅವಿಭಾಜ್ಯ ಅಂಗ.[3]

ಅಡಿ ಟಿಪ್ಪಣಿಗಳು

1 M. Hiriyanna : *Outlines of Indian Philosophy*, (London, Allen & Unwin, 1932) p. 198
"All the different shades of philosophic theory realistic and idealistic—are found within Buddhism itself; and we have so to speak philosophy repeated twice over in India—once in the several Hindu systems and again in the different schools of Buddhism."

2 Dr. P. Nagaraja Rao, "The Spirit and Substance of Indian Philosophy—II Ethics & the Spiritual Life" *The Aryan Path* Dec. 1956. p. 558
"In the words of Professor Hiriyanna, 'they are not realizing virtue, but revealing it.'"

3 Hiriyanna : *Outlines of Indian Philosophy* (Allen & Unwin, 1932) p. 20
"Philosophy thereby becomes a way of life, not merely a way of thought."

ಮಾನವಿಕ ಕರ್ನಾಟಕ

ವಿಷಯ ಸೂಚಿಕೆ

ಸಂಪುಟ ೧೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨-೮೩

ವಿಷಯಸೂಚಿ

ಲೇಖನಗಳು

ಲೇಖಕ ಸೂಚಿ

ಲೇಖಕರು

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) 1956ರ 8ನೇ ನಿಯಮದ 4ನೇ ಫಾರಂಗೆ ಸಂಬಂಧಿಸಿದಂತೆ "ಮಾನವಿಕ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

1.	ಪ್ರಕಾಶನ ಸ್ಥಳ	:	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6
2.	ನಿಯತಕಾಲಿಕತೆ	:	ತ್ರೈಮಾಸಿಕ
3.	ಮುದ್ರಕರು	:	ಟಿ. ಬಾಬು, ಶ್ರೀ ಲಕ್ಷ್ಮೀ ಮುದ್ರಣಾಲಯ 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
4.	ಪ್ರಕಾಶಕರ ಹೆಸರು	:	ಕೆ.ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು-6
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6
5.	ಸಂಪಾದಕರ ಹೆಸರು	:	ಡಾ. ಬಾ. ರಾ. ಗೋಪಾಲ್ ಡಾ. ಸಿ. ಎಂ. ಮುನಿರಾಮಪ್ಪ
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6
6.	ಪತ್ರಿಕಾ ಸ್ವಾಮಿತ್ವ ಮತ್ತು ವಿಳಾಸ ಬಂಡವಾಳದಲ್ಲಿ ನೂರಕ್ಕೆ 1ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದ ನುಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) ಕೆ. ಟಿ. ವೀರಪ್ಪ

ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು-6

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬